ಸಾಹಿತ್ಯ ದಾಸೋಹ ೧೮೦

ಪ್ರಾಚಾರ್ಯ ಎಚ್ಚೆಸ್ಕೆ ಕಾವ್ಯಾನುಸಂಧಾನ ಅಭಿಯಾನ

ಪರಿವಿಡಿ

ಕ್ರಮ ಸಂಖ್ಯೆ	ಹೆಸರು	ಕಾವ್ಯ ವಾಚನದ ಹೆಸರು
1	ಮಂಗಳಾ ನಾಡಿಗ್	ಕಾವ್ಯ ಬಂದಿದೆ
2	ಎಮ್ ಶಿವಕುಮಾರ ಸ್ವಾಮಿ	ನಾನು ಮತ್ತು ಗೌರಿ
3	ಸರಸ್ವತಿ ನಟರಾಜ್	ಊರಿಗೆ ಬಂದರೆ ಉಗಾದಿ
4	ಡಾ. ಲಕ್ಷ್ಮೀ ಶ್ರೀನಿವಾಸನ್	ಬಾರದ ಮಳೆ
5	ಪತ್ತಂಗಿ ಎಸ್ ಮುರಳಿ	ಹಳದಿ ಹೂ ಮರ
6	ರೇಣುಕಾ ದೇಸಾಯಿ	ಬಸವನ ಹುಳು
7	ರತ್ನಾ ಮೂರ್ತಿ	ಮಾತು ಮತ್ತು ತುಡಿತ
8	ಜಯಂತಿ ಮನೋಹರ	ಅರಿಸ್ಟೋಫೆನಿಸ್
9	ಧೀರೇಂದ್ರ	ಬದುಕು
10	ಗೌರಾಂಬಾ ವೆಂಕಟಸುಬ್ಬಯ್ಯ	ಧೂಮಕೇತು
11	ಶ್ರವಣಕುಮಾರಿ	ಹಸ್ತರೇಖೆ
12	ಶಂಕರರಾವ್	ಮತ್ತೆ ನಿನ್ನೆಡೆಗೆ

13	ಜಗದೀಶ್ ಭಟ್	ರಾಘವಾಂಕನನ್ನು ನೆನೆದು
14	ಗುರುಪ್ರಸಾದ್ ಹಾಲ್ಕುರಿಕೆ	ಒಂದು ಹಿಡಿ ಬೆಳಕು
15	ಬಿ ಎಸ್ ರವೀಂದ್ರ	ಬನ್ನಿ ಅಮರಾವತಿಗೆ
16	ವಿ. ಕೆ. ಮನೋರಮಾ	ನೂರು ತುಣುಕು
17	ವೆಂಕಟಸುಬ್ಬಯ್ಯ	ನನ್ನ ಬಗ್ಗೆ
18	ಮಾಲತಿ ಶ್ರೀನಿವಾಸನ್	ಗುಲ್ಮೊಹರ್
19	ರಾಜೇಂದ್ರ	ಇದ್ದೂ ಇಲ್ಲದವರು
20	ವಿಠ್ಠಲ್ ಇಜೇರಿ	ದೇವರು - ನಾರಿ - ಜೂಕ್ ಬಾಕ್ಸ್
21	ಬಿ ಎಸ್ ಶ್ರೀನಿವಾಸ್	ಶಿವರಾಮ ಕಾರಂತ
22	ಗೋನವಾರ್ ಕಿಶನ್ ರಾವ್	ಕಣ್ಣು ಮುಚ್ಚಾಲೆ
23	ನಾಗರತ್ನ ಚಂದ್ರಶೇಖರ	ಅನಿಸಿದ್ದು ಬರೆದುಬಿಡಬೇಕು
24	ಪದ್ಮಾವತಿ ಕಲ್ಮಾಡಿ	ಇನ್ನಾರು
25	ಡಾ ಆಶಾ	ಜೋಗಿ
26	ಶ್ರೀನಿವಾಸ ಗಟ್ಟು	ಬಿದ್ದೆದ್ದ ಬುದ್ಧ
27	ಸ್ನೇಹಲತಾ	ಕನ್ನಡದ ರಕ್ಷಾಮಣಿ
28	ಶ್ರೀಪ್ರಕಾಶ	ಡಯಾನಾ
29	ಎಮ್ ಎಸ್ ನರಸಿಂಹ ಮೂರ್ತಿ	ಚುಟುಕ ಕವನಗಳು
30	ಕೆ ಏನ್ ಮಹಾಬಲ	ಋತ - ಅನೃತ
31	ವಿಜಯಕುಮಾರ್ ಸುರತ್ಕಲ್	ಜೀವರೇಖೆ
32	ಶೀಲಾ ಅರಕಲಗೂಡು	ಬೆಳ್ಳಿಗೆರೆ, ಹಣ-ತೃಪ್ತಿ....
33	ವೆಂಕಟೇಶ ಕೆ ಆರ್	ಆತ್ಮಹತ್ಯೆ, ರಾಜಕಾರಣಿ...
34	ರಾಜಗೋಪಾಲ ಪಿ	ಒಂದು ಭಾಷೆಯ ಸಾವು

35	ಶಶಿಧರ ಹಾಲಾಡಿ	ಎರಡು ನೋಟ
36	ಸಂಮೊಡ್ ವಾಡಪ್ಪಿ	ಮತದಾನದ ಬೆಲೆ......
37	ರವೀಂದ್ರಕುಮಾರ್ ಎಲ್ ವಿ	ಈ ಜನ
38	ಕೆ ಆರ್ ಎಸ್ ಮೂರ್ತಿ	ಬಿಡುಗಡೆಯ ದಿನ
39	ಪ್ರಮೋದಾ ಮೂರ್ತಿ	ಭಾರತ ಜಯಗಾಥೆ
40	ಪ್ರಾಣೇಶ್ ರಾವ್ ಡಿ ಬಿ	ಅನುಪಮದನುಭವ
41	ಚಂದ್ರಶೇಖರ ಬಿ.ಎಸ್.	ಕಾಲ ಬರುತ್ತಾನೆ

ಕವನ - ಕಾವ್ಯ ಬಂದಿದೆ - ಶ್ರೀಮತಿ ಮಂಗಳಾ ನಾಡಿಗ್

ಹಸುರು ಗಿಡಮರ ಹೂವು ಚಪ್ಪರ ಬಿಸಿಲು ಬೆಳ್ಳಿಯ ಕಟ್ಟಿಗೆ.
ಕೆಂಡ ಸಂಪಗೆ ಸೂರ್ಯ ನೆಗೆದಿದೆ
ಕೆಳಗೆ ತಣ್ಣನೆ ಕಡಲಿಗೆ.
ಕಾವ್ಯ ಬಂದಿದೆ ನಾಡಿಗೆ.

ಬೆಟ್ಟ ನೆತ್ತಿಯ ಮೋಡ ಕಪ್ಪಗೆ,
ಬೆಳ್ಳಿ ಮಿಂಚಿನ ಅಪ್ಪುಗೆ.
ಕಪ್ಪು ಮುಗಿಲಿನ ಕೆಳಗೆ ಬೆಳ್ಳಗೆ
ಹಕ್ಕಿ ಹಾರಿದೆ ತಣ್ಣಗೆ,
ಕಾವ್ಯ ಬಂದಿದೆ ಬಾನಿಗೆ.

ನೀರು ಹರಡಿದೆ ಏರಿಯೆಡ ಬದಿ,
ಬಾನು ಮಲಗಲು ಹಾಸಿಗೆ.
ಕಣ್ಣು ಹಾಯುವ ವರೆಗು ಬಲ ಬದಿ
ಬತ್ತ ಪೈರಿನ ಹಬ್ಬುಗೆ.
ಕಾವ್ಯ ಬಂದಿದೆ ತವರಿಗೆ.

ಗದ್ದೆಯಂಚಿನ ಮರದ ಕೆಳಗಡೆ
ಹರೆಯ ಕೈ ಕೈ ಕೂಡಿದೆ.
ದುಡಿತದೊಂದಿಗೆ ಬೆರೆತ ಬೆವರಿಗೆ
ಕನಸು ಕಾಣುವ ಹವಣಿದೆ.
ಕಾವ್ಯ ಬಂದಿದೆ ಬೀಡಿಗೆ.

ಎಳೆಯ ಜೀವದ ತುಟಿಗೆ ಅಂಟಿದ
ತುಂಟ ನಗೆಯಲೆ ಹಬ್ಬಿದೆ.
ತಾಯಿ ತಬ್ಬಿದ ಕೂಸು ಕಣ್ಣಲಿ
ಏನೊ ಬೆಳಕನು ಚೆಲ್ಲಿದೆ.
ಕಾವ್ಯ ಕೋನರಿದೆ ಮೆಲ್ಲಗೆ.

ದಿನದ ದುಡಿಮೆಯ ಕೊನೆಗೆ ದುಡಿತದ ದಣಿವು ಒಂದೇ ಉಳಿದಿದೆ.
ಕಾಣದಬ್ಬರ, ಬೆನ್ನ ಬೈರಿಗೆ;
ಜೀವ ಸಿಡಿಮಿಡಿಗೊಂಡಿದೆ.
ಕಾವ್ಯ ಬಿಸಿ ಹೆಡೆ ಎತ್ತಿದೆ.

ಕವನ - ನಾನು ಮತ್ತು ಗೌರಿ - ಶಿವಕುಮಾರ ಸ್ವಾಮಿ ಎಮ್ ಎಸ್

ನಾನು ಮತ್ತು ಗೌರಿ
ನಸುಕಿನಲ್ಲೇ ಎದ್ದು
ಹೊರಟರೆ ಗಾಳಿ ಸವಾರಿ,
ನಮ್ಮಿಬ್ಬರನ್ನೂ ಹತ್ತಿರ -
ಹತ್ತಿರ ಒತ್ತಿ ಒತ್ತಿ
ಯಾರೋ ನಗುತ್ತಾರೆ
ಕಿಲಿ ಕಿಲಿ ಕಿಲಿ.

ನನಗೆ ಅರವತ್ತೈದು,
ಗೌರಿಗೆ ಅರವತ್ತು,
ಹಿಂದೆ ಸರಿದಿದೆ ನನ್ನ
ತಲೆಗೂದಲು.
ಗೌರಿಯ ಕಪ್ಪು
ಸೀರೆಗೊಪ್ಪುವ ತುರುಬು,
ನಡುನಡುವೆ ಬೆಳ್ಳಿಯಳೆ,
ಕಣ್ಣಂಚಿನಲಿ ಸುಕ್ಕು -
ದವನದ ಕೊನೆ.

ದಟ್ಟ ಚಳಿ.
ಬದಿಯ ಕಂಬದ ದೀಪ
ಹೆಪ್ಪಾಗಿ
ಕಳೆದುಕೊಂಡಿದೆ ಪ್ರಕಾಶ,
ಮುಗಿಲಿಗು ಜೊಂಪು :
ನಕ್ಷತ್ರಖಚಿತ ರಗ್ಗು
ಹೊದ್ದು ಮಲಗಿದೆ ಬಾನು
ನೆಲವನ್ನು ತಬ್ಬಿ.
ಭೂಮಿ ಆಕಾಶಗಳು
ತುಟಿಗೆ ತುಟಿ ಹಚ್ಚಿ
ಹೀಗೆ ಇನ್ನೂ ಸುರತ - ನಿರತವಾಗಿರುವಾಗಲೇ
ಕದ್ದು ಇಣುಕಲು ಸೂರ್ಯ -
ನಿಗೆ ಆತುರ.

ಚಂದ್ರ -
ಕೊರಗಿ
ಕಡ್ಡಿ.

ಆದರೂ ಇನ್ನೂ
ಬದುಕುವ ಆಸೆ.
ಮುಗಿಲ ಹಾದಿಯಲ್ಲಿ
ಏರುತ್ತಲೇ ಇದ್ದಾನೆ ಒಬ್ಬನೇ,
ಎದುಸಿರು ಬಿಟ್ಟು,
ಬೆಳ್ಳಿಯೋ -
ಬಲು ಮಳ್ಳಿ !
ಬೇಟೆಗಾರನ ಹಿಂದೆ
ನಡೆಯುತ್ತಿದ್ದಾಳೆ
ಕಳ್ಳಿ !

ನಾನು ಮತ್ತು ಗೌರಿ
ಹೊರಟು ಗಾಳಿಸವಾರಿ
ನಸುಕಿನಲಿ ನಡೆದಾಗ
ಅಕ್ಕಪಕ್ಕ ಮರ
ಬೀಸುತ್ತವೆ ಚಾಮರ :
ಹಸುರು ಪಲವುಟ್ಟು
ಹೂ ಮುಡಿದು
ಸಾಲಾಗಿ
ಹಾಸಿ ಹೂವಿನ ನಡೆಮಡಿ.

ಮರಗಳ ಮೇಲೋ -
ಬರೀ
ಪಂಚರಂಗಿ ಗಿಳಿಗಳು,
ರವಿವರ್ಮನ ಮರಿಗಳು !

ನಾನು ಮತ್ತು ಗೌರಿ
ಹೊರಗೆ ಹೊರಟರೆ ಸರಿ,
ಗಾಳಿಸವಾರಿ -
ಇದೇ ಮೊದಲ ಸಾರಿ
ಎಂಬ ಹಾಗೇ ಸುತ್ತ
ಹಿಗ್ಗು ಮುಗ್ಗಾಲೆ :
ನೆಲ ಮುಗಿಲು
ಹೆದೆ ಬಿಲ್ಲು,
ಎದೆ ಝಲ್ಲು,
ಹೆಣ್ಣಿ ಕಣ್ಣಿನ ಮತ್ತು,
ಮಣ್ಣಿನ ಗಮ್ಮತ್ತು.

ಕವನ - ಊರಿಗೆ ಬಂದರೆ ಉಗಾದಿ - ಶ್ರೀಮತಿ ಸರಸ್ವತಿ ನಟರಾಜ್

ಊರಿಗೆ ಬಂದರೆ ಉಗಾದಿ
ಮಾವಿಗೂ ಬೇವಿಗೂ ತಗಾದಿ.
ಬಯಲು ಹಿತ್ತಿಲು ರಸ್ತೆ
ಬದಿಯ ಮರಗಳ ಸಾಲು
ಬೋಳು ಬೋಳು :
ಮನೆಮನೆಯ ಬಾಗಿಲಿಗು
ತಳಿರು ತೋರಣ.
ಬೇವು ಬೆಲ್ಲ ಬೆರಸಿ
ಅರೆದು ಜಗಿಯುವ ಸಂಪ್ರದಾಯ.
ಆದರೂ ಕಹಿ ಮಾತ್ರ
ತಪ್ಪುವುದಿಲ್ಲ ;
ಹುಟ್ಟುಗುಣ.
ಬೀದಿ ಬಾಗಿಲ ತಳಿರು
ಅರೆ ಬಾಡಿ ಸಪ್ಪೆಮೋರೆ ;
ಬಿಸಿಲೇರಿತು, ಎಂದರೆ
ಪೂರ ನಿರ್ಜಿವ ;
ಒಂದೆರಡು ದಿನದಲ್ಲೆ
ಬರಿ ತರಗು ;
ಒಳಗಿನಂತೆಯೆ ಹೊರಗು,

ಹಬ್ಬ ರಜೆದಿನ ಬಂದಿತೆಂದರೆ ನಮ್ಮ
ಬೀದಿ ಕೊನೆ ಮಾಂಸದಂ -
ಗಡಿಯಲ್ಲಿ ಸಂಭ್ರಮ.
ಬಾಗಿಲ ಮುಂದೆ
ಕೊಕ್ಕೆಕೊಕ್ಕೆಗು ನೇತು -
ಬಡಿದ ಶವಗಳ ಸಾಲು :
ಕುರಿ ಕೋಳಿ ಹೋತ ಪ್ರೇತ -
ಬರಿ ಮುಂಡ, ತಲೆಯಿದ್ದರೂ ದಂಡ,
ಕಾಲು ಮೇಲಾದ ಬಾವಲಿ ತರಹ ತೋರಣ :
ನಿರ್ಜಿವ, ಭಣಭಣ :
ಹೃದಯವಿದ್ದೂ ಸ್ತಬ್ಧ, ನಿಶ್ಯಬ್ದ.

ಬೀದಿ ಕೊನೆಗೇ ನಮ್ಮ
ಊರ ಯಜಮಾನರ ಮನೆ.
ಮನೆ ತುಂಬ ಜನ, ದನ.

ರೊಪ್ಪದ ಪೂರ
ಕುರಿ ಆಡು ಮೇಕೆ.

ಸುತ್ತಮುತ್ತಣ ಚಿಗುರು ಸೊಪ್ಪು ಸಿಹಿ ಹುಲ್ಲೆಲ್ಲ
ಅವಕ್ಕೇ ಆಹಾರ.
ಬೇಡ ಎನ್ನುವ ಯಾರು ಶೂರ ?

ನಮ್ಮ ಯಜಮಾನರಿಗೆ
ಆಡು ಕುರಿ ಇತ್ಯಾದಿ
ಬಹಳ ಪ್ರೀತಿ.
ಸಂಜೆಯಾದರೆ ಜಗುಲಿ
ಮೇಲೆ ಕುಳಿತದ್ದೇ
ಒಂದೊಂದು ಪ್ರಾಣಿಗೂ
ಬೆನ್ನು ಚಪ್ಪರಿಸುತ್ತ
ಸೊಪ್ಪೊ ಹುಲ್ಲೊ ತಮ್ಮ
ಸ್ವಂತ ಕೈಯಿಂದಲೇ
ತಿನ್ನಿಸದೆ ಇದ್ದಲ್ಲಿ
ಬಾರದವರಿಗೆ ನಿದ್ದೆ.
ಅವು ಕೊಬ್ಬಿ ಬೆಳೆಯುವುದ
ನೋಡಿದಷ್ಟೂ ಹೆಮ್ಮೆ.

ಅದರಲ್ಲಿ ಒಂದು ಕುರಿ
ಗುಜ್ಜುಗೊರಲಿನ ಗೆಜ್ಜೆ
ಗಂಟೆ ಠಣಠಣಿಸುತ್ತ
ಜಗ್ಗು ಹಾಕುತ ನಡೆದು
ಬಳಿಗೆ ಬಂದಾಗ
ಯಜಮಾನಪ್ಪನ ಮೀಸೆ
ಅರಳುತ್ತದೆ.
ಬಾಯಲ್ಲಿ ನೀರೂರಿ
ಕೈಯಲ್ಲಿ ನೇವರಿಸಿ
ಮಾಡುತ್ತಾರೆ ಅದರ
ಅಜಮಾಯಿಷಿ.
ಒಳ್ಳೆ ಸುಳಿ, ಸಲ್ಲಕ್ಷಣ -
ಎಂದ ಮೇಲೆ ಬಹಳ
ಪರಮಾಯಿಷಿ.
ಕುರಿಗಂತು ತುಂಬ ಖುಷಿ !
ರಾಜಗೌರವ ಪಡೆದ ಆಸ್ಥಾನಿಕನ ತರಹ
ಅದರ ಸ್ಥಿತಿ.

ಅತಿಥಿ ಅಭ್ಯಾಗತರು

ಮನೆಗೆ ಆಗಮಿಸಿದರೆ
ಅವರ ಪ್ರೀತಿಯ ಕುರಿಗೆ
ತಲೆಯೆ ನಿಲ್ಲುವುದಿಲ್ಲ !

ಊರಿಗೆ ಬಂದರೆ ಉಗಾದಿ
ಮಾವಿಗೂ ಬೇವಿಗೂ ತಗಾದಿ.
ಅತಿಥಿ ಬಂದರೆ ಕುರಿಯ
ಸರದಿ.

ವಿಶ್ಲೇಷಣೆ :

ಪ್ರಾಚಾರ್ಯ ಎಚ್ಚೆಸ್ಕೆ ಅವರ ಕಾವ್ಯಾನುಸಂಧಾನ ಅಭಿಯಾನದ ಅಡಿಯಲ್ಲಿ ಅವರ ಮೊದಲ ಕವನ ಸಂಕಲನ 'ದವನದ ಕೊನೆ' ಯಿಂದ ಆರಿಸಿಕೊಂಡಿರುವ 'ಊರಿಗೆ ಬಂದರೆ ಉಗಾದಿ' ಕವನವನ್ನು ಪ್ರಸ್ತುತಪಡಿಸುತ್ತಿದ್ದೇನೆ. ಕವಿಯ ಮನೋಭೂಮಿಕೆಯ ಉಗಾದಿ ಏನನ್ನೋ ಮುಟ್ಟ ಬೇಕೆನ್ನುವ ವಿಸ್ತಾರ ಭಾವ. ಆದರೆ ವಾಸ್ತವದಲ್ಲಿ ಕಾಣುವ ದೃಶ್ಯಗಳೇ ಬೇರೆ ಎನ್ನುವ ಸತ್ಯದೊಡನೆ ಅಂತರಂಗದಲ್ಲಿ ಸಂಘರ್ಷವಿದೆ. ಶಾಶ್ವತವಾದ ಪ್ರಕೃತಿ ಮನುಷ್ಯನ ಸ್ವಾರ್ಥದ ಡಿ ಸಿಲುಕಿ ವಿಕೃತ ವಾಗುವ ಹಾದಿಯಲ್ಲಿ ಆಡಂಬರದ ತೇಪೆ ಇದೆ. ಇಂದಿನ ಆಡಂಬರದ ತೇಪೆ ತಿಪ್ಪೆ ಯಾಗುವುದನ್ನು ವೀಕ್ಷಿಸುವ ವಿಷಾದವಿದೆ. ಇಲ್ಲಿ ಮನುಷ್ಯನ ಸಿನಿಕತೆಯ ಬಗ್ಗೆ ಒಂದು ಸಾತ್ವಿಕ ಆಕ್ರೋಶ ಮತ್ತು ತಿಳಿ ವ್ಯಂಗ್ಯವೂ ಇದೆ. ಕುರಿಯ ಬೆನ್ನು ಚಪ್ಪರಿಸುತ್ತಾ ಸ್ವಂತ ಕೈಯಿಂದ ತಿನ್ನಿಸುತ್ತಾ ಅವು ಕೊಬ್ಬುವುದನ್ನು ನೋಡಿ ಹೆಮ್ಮೆ ಪಡುತ್ತಿರುವ ಯಜಮಾನ ಆ ಕುರಿಯ ಅಜ್ಞಾನವನ್ನು ಪ್ರೀತಿಯೆಂಬ ಭ್ರಾಮುಕತೆಗೆ ಸಿಲುಕಿ ಬಲಿಯಾಗುವ ಸುಳಿವು ಇಲ್ಲದೆ, ಖುಷಿ, ಹೆಮ್ಮೆಯನ್ನು ಅನುಭವಿಸುವ, ಅರಿವಾಗದೇ ಬಲಿಯಾಗುವ ಕುರಿ, ಕುರಿ ಗಳಂತಹ ಪ್ರಜೆಗಳ ಸಾಮಾಜಿಕ ಸ್ಥಿತಿ, ಆಳುವವರ ಮನಸ್ಥಿತಿಯ ರೂಪಕವಾಗಿಯೂ ನಿಲ್ಲುತ್ತದೆ.

ಕವನ - ಬಾರದ ಮಳೆ - ಶ್ರೀಮತಿ(ಡಾ) ಶ್ರೀಲಕ್ಷ್ಮೀ ಶ್ರೀನಿವಾಸನ್

ಇದು ಏಪ್ರಿಲ್,
ಅಲ್ಲವೆ ?
ಬರಲೇಬೇ -
ಕಿತ್ತು ಮಳೆ
ಈ ಹೊತ್ತಿಗೆ.

ಕಾಲ ಕೆಟ್ಟೇಹೋಯ್ತು.
ಹಿಂದೆ ಹೀಗೆಲ್ಲಾ
ಆಗ್ತಾ ಇರಲಿಲ್ಲ ಸ್ವಾಮಿ.
ಕಾಲಕಾಲಕ್ಕೆ ಮಳೆ,
ಕೆರೆ ಕೋಡಿ ಬೆಳೆ ಸುಗ್ಗಿ,
ದೊಡ್ಡ ಬೊಗಸೆ ತುಂಬ ಕಡಲೇಪುರಿ.

ಈಗಲೋ -
ತಿರಿಮುರಿ.
ಆಕಾಶದಲ್ಲೆಲ್ಲ ಮೋಡ ಬುಗುರಿ.
ಒಂದನ್ನೊಂದು ಅಟ್ಟಿ ಢಕ್ಕಾಢಿಕ್ಕಿ,
ಕಚ್ಚಾಟ, ಬಗುಳುವಿಕೆ,

ಗುಡುಗು ಆರ್ಭಟ ಮಿಂಚು ಸಂಚು.
ಇನ್ನೇನು ಮಳೆ ಬಂದ ಹಾಗೇ ಸರಿ.

ಅಷ್ಟರಲ್ಲೇ ಭಾರಿ ಗಾಳಿ,
ಬಾಲ ಬಾವುಟ ಮಾಡಿ ಮುಸುಡಿ ಚಾಚಿ,
ಮಸಿ ಬುಸುಗುಡುವಾಟ.
ಪ್ರಕ್ಷುಬ್ಧ ಸಾಗರ ನೌಕೆ ಅಲುಗಾಡಿ
ಅಡ್ಡಾದಿಡ್ಡಿ ಅಲೆದಾಡಿ
ಬಂಡೆಗಲ್ಲಿಗೆ ತಾಕಿ ಚೆಲ್ಲಪಿಲ್ಲಿ.

ಆಷಾಢದಲ್ಲೂ ಹೀಗೇ.
ಮನ ಭಾರ. ತೇವ ಮೈತುಂಬ.
ಬೆಟ್ಟ ಇಲಿ ಹೆತ್ತಂತೆ ಅರ್ಥ ವ್ಯರ್ಥ.
ಬಂದಾನೋ ಬಾರನೋ ಮಾರ ಸುಕುಮಾರ
ಎಂದು ಎದೆಯಲ್ಲೆಲ್ಲ ಬಲು ಕಾತರ.
ಬೆನ್ನ ಹುರಿಯುದ್ದಕೂ ಚಿಮ್ಮಿ ಹರಿದಿದೆ ಜಿರಲೆ.

ದುಗುಡ ಕಳವಳ ತಳಮಳ.
ಬಿರಿದ ನೆಲ,
ಗರಿಕೆಯೆಸಳೂ ಕರುಕು.
ಒಡೆದು ನೇಗಿಲು ಹೆಂಟೆ ತೊಡೆಯ ನೆಲವನ್ನು
ಒಮ್ಮೆಯಾದರು ನೀರ
ಹನಿಸಬಾರದೆ ವೀರ ?

ಆದರೆ ಬರೀ ವಾದ.
ಬಂದರೆಂತೋ ಬಾರ -
ದಿದ್ದರಿನ್ನೆಂತೋ !
ಕೇಳಲಾದರು ಬಾಯಿ ಬಂದೀತು ಹೇಗೆ ?
ಕೇಳಬಾರದ ಪ್ರಶ್ನೆ ಕೇಳಿದ ಮೇಲೆ
ಕೇಳದೆಯೆ ಇದಿದ್ದರಾಗುತಿತ್ತೋ ಏನೋ !
ಉದ್ದನೆಯ ಬೀದಿ ಪೂರ ಅಂಗಡಂಗಡಿಯಲ್ಲೂ ಚೌಕಸಿ,
ವ್ಯಾಪಾರ ಕುದುರದೇ
ತಿರುತಿರುಗಿ ಮತ್ತೆ ಹೊರ -
ಟೆಲ್ಲಿಗೇ ವಾಪಸು :

ಹಾದಿಯುದ್ದಕು ಮತ್ತೆ
ಅದೇ ಅದೇ ಪ್ರಶ್ನೆ : ಬಯಲಾಲಯ ನ್ಯಾಯ -
ದೊನ್ನೆ ಯೊಳಗೆ ತುಪ್ಪವೋ, ತುಪ್ಪದೊಳಗೆ ದೊನ್ನೆಯೊ ?
ಈಜು ಕಲಿತೇ ನೀರಿಗೋ

ಅಥವಾ
ನೀರಿಗಿಳಿದೇ ಈಜೊ ?
ಮೊದಲಾವುದು, ಆಮೇಲಾವುದು ?
ಯಾವುದಯ್ಯಾ ನಿನ್ನ
ನೆಲೆ, ಬೆಲೆ ?
ಏನು ಗುರಿ ? ಹೋಗುವುದು ಎಲ್ಲಿಗೆ ? -

ಸವೆದು ಚಿಪ್ಪಾಗಿರುವ ಯಕ್ಷ ಪ್ರಶ್ನೆ.
ಹಿಂದೆ ಸರಿದಿದೆ ತಲೆಯ ಕೂದಲ ಗಡಿ -
ಮೊದಲು ಖಾರಿ, ಆದರೀಗೀಗ ಕೊಲ್ಲಿ.
ಹಗಲುರಾತ್ರೆಯ ಪಾತ್ರೆ -
ಯಲ್ಲಿ ಅಳೆದಿದೆ ಹೊತ್ತು, ಎದುರಾಗುತ್ತಲೇ ಇದೆ -
ಅದೇ ಅದೇ ಪ್ರಶ್ನೆ :
'ಗಂಡುಸಾದರೆ ನಿನ್ನ ಬಲಿ ಕೊಡುವೆಯೇನು ?' ಪ್ರಾರಂಭ

ಕೊಡುವೆನೇ, ಕೊಡಲಾರೆನೇ ?
ಅಜ್ಜ ಬದುಕಿದ್ದಾಗ
ಕೊಂಡು ಗೋಡೆಗೆ ಬಡಿದ
ದೊಡ್ಡ ಗಡಿಯಾರದಡಿ
ಪೆಂಡುಲಮ್ಮು !
ಮಾರುಕಟ್ಟೆಯಲ್ಲೊ -
ಇಳಿಯುತ್ತಲೇ ಇದೆ,
ಕಿಮ್ಮತ್ತು.
'ತಾಸು ಬಾರಿಸುತಿದೆ ಕೇಳಿ -
ಢಣ್ ಢಣ್ ಢಣಾ ಎಂದು !'

'ಶ್ರಾವಣ ಭಾದ್ರಪದ ವರ್ಷ ಋತು' -
ಶಾಲೆ ಪುಸ್ತಕದಲ್ಲಿ ಸರಸ್ವತೀ ಪ್ರಸನ್ನ.
ಕೆರೆಕಟ್ಟೆ ಕೋಡಿ ತೋಡಿ
ಬೇಡಿದರೂ ಶೂನ್ಯ ಪರ್ಜನ್ಯ.
ಮದ್ದಾನೆ ಮೋಡಗಳ ಶಬರಿಗನಸು
ಶರದದ ಪೂರ.
ಉಡುಗಿದೆ ಸ್ಥೈರ್ಯ,
ಸೀಮೋಲ್ಲಂಘನಕ್ಕಿಲ್ಲ
ಕಿಂಚಿತ್ತು ಉತ್ಸಾಹ.
ಚತುರಂಗ ಬಲ ಹೀನ.
ಕರಡು ಸಾಲದ ಬಾಬ್ತು,
ಸವಕಳಿಗಾಗಿ ತೆಗೆದಿಟ್ಟದ್ದು
ಶೇಕಡಾ ಹತ್ತು :
ಉಪಯೋಗಿಸದೆಯೇ ಸವೆತ

ಶೇಕಡಾ ಎಂಬತ್ತು !

ಹಗಲು ರಾತ್ರಿ ಎರಡೂ
ಒಂದೇ ಬಗೆ -
ಭಟ್ಟರ ಅಡುಗೆ.
ಕೆನ್ನೆ ಹಣೆಗಳ ಮೇಲೆ ರಾಬಿನ್ಸನ್ ಕ್ರೂಸೋ
ಕಡೆದ ಸಾಲು ಗೆರೆ.
ಅವನ ನಗೆಯಲ್ಲೂ
ವಿಷಾದದ ಸೆಲೆ.
ಮಿತ್ರರಿಗೆ ಅನುಕಂಪ,
'ಅಯ್ಯೋ ಪಾಪ !'
'ಸಕಲ ಗುಣ ಸಂಪನ್ನ,
ಏಕ ಗುಣ ಹೀನ !'
'ಎಲ್ಲ ಇದ್ದೂ ಇಲ್ಲ.
ಅನುಭವಿಸಲಿಕ್ಕೂ ಕೇಳಿ -
ಕೊಂಡು ಬರಬೇಕಲ್ಲ !'
ಉಕ್ಕಿ ಸುರಿದಿದೆ ಹಾಲು.
ಹೇಮಂತ ಬರಲಿಕ್ಕೆ
ಎಷ್ಟು ಕಾಲ ?

ತಿರಿತಿರುಗಿ ಅದೇ ಹಾಡು -
ಶುದ್ಧಾಂಗವಾಗಿ ಸವೆದ
ಗಾನತಟ್ಟೆ.

ಕವನ - ಹಳದಿ ಹೂ ಮರ - ಪತ್ತಂಗಿ ಎಸ್ ಮುರಳಿ

ಹಳದಿ ಹೂ ಮರ
ನಿಂತು ಬೆತ್ತಲೆ
ನಿಟ್ಟಿಸುತ್ತಿದೆ
ಇತ್ತಲೆ.
ಕತ್ತಲಾದರೆ
ಸುತ್ತಮುತ್ತಣ
ಚಿಟ್ಟೆ ಪಟ್ಟೆಗೆ
ಆಸರೆ.

ನೆಟ್ಟ ನಿಂತ ಮರ
ಬಹಳ ಎತ್ತರ.

ಅದರ ತುಂಬ ಬರಿ
ಹಳದಿ ಹೂ.
ಮಾನ ಮುಚ್ಚಲೂ
ಒಂದು ಎಲೆಯಿಲ್ಲ.
ನಗ್ನತೆಯ ಎ -
ತ್ತೆತ್ತಲೂ.

ಕೊಂಬೆ ಅದಕೆರಡು,
ಹಲವು ಕವಲುಗಳು :
ಎಲ್ಲ ಬೆಳಕಿನೆಡೆ
ಎತ್ತಿದ ಕೊಡೆ.
ನೆತ್ತಿ ಬಿಸಿಲಿನಲಿ
ಚಿನ್ನದಂತೆ ಕಳ -
ಕಳಿಸಿ ಹೊಳೆಯುತಿದೆ
ಹೂವು ಪಕಳೆ.

ಕೊಂಬೆ ಹೊರಟ ಎಡೆ
ಊರ್ಧ್ವ ತೊಡೆ ನಡುವೆ
ಕಟ್ಟಿಕೊಂಡಿದೆ ಒಂದು
ಹಕ್ಕಿ ಗೂಡು.
ಹುಲ್ಲು ಕಡ್ಡಿ ಕಸ,
ನಡುವೆ ಒಳಗಡೆಗೆ
ಜೀವ ಮಿಡಿಯುತಿದೆ
ಬೆಳಕ ಬಯಸಿ.

ಟೆಕೊಮಾ ಆರ್ಜೆಂಟಿಯಾ :
ನಮ್ಮ ನಾಡಿನ ಸಸ್ಯ-
ವಿದ್ದ ಹಾಗಂತೇನು
ಇಲ್ಲವಂತೆ.
ಎಲ್ಲಿಂದಲೋ ಯಾರೋ
ತಂದು ನೆಟ್ಟಿರಬೇಕು.
ಆದ್ದರಿಂದಲೆ ಇಂಥ
ತಳುಕು, ಶೋಭೆ.

ಆದರೀ ಮರ ಈಗ
ನಮ್ಮದೆಂದೇ ಆಗಿ
ನಮ್ಮ ಎಲ್ಲದರಲ್ಲು
ಕೇಳುತಿದೆ ಭಾಗ.
ಜಾಜಿ ಮಲ್ಲಿಗೆ ಪಾರಿ-
ಜಾತ ಸೇವಂತಿಗೆ :

ಯಾವುದಕ್ಕುಂಟು ಈ
ರಂಗು ರಾಗ !

ಚಳಿ ಮಂಜು ಕರಗಿ
ನೀಲಿಯಾಗಸದಲ್ಲಿ
ಗಾಳಿ ಬಿಸಿಯಾದಾಗ
ಇದರ ಮತ್ತು !
ಎಲೆಯೆಲ್ಲ ಚೆಲ್ಲಿ
ಬರಿ ಹೂವೆ ಹೊತ್ತು
ಮೈಯೆಲ್ಲ ಕಣ್ಣು,
ಇಂದ್ರ ಗತ್ತು !

ಹಗಲು ಪಾತರಗಿತ್ತಿ
ದುಂಬಿ ಚಿಟ್ಟೆ ನೊಣ-
ಜೀವರಾಶಿಗಳಿಗೆ
ಬಹಳ ಮೋಜು.
ಹೆಪ್ಪುಗಟ್ಟಿದ ಇರುಳ
ಕಪ್ಪು ಕತ್ತಲೆಯಲ್ಲಿ
ಹಳದಿ ಮೈಯಿನದೊಂದು
ಮೋಹಕತೆ, ಚೆಲುವು.

ಮೇಲೆ ಸಾವಿರ ತಾರೆ,
ಹಾಲು ಚೆಲ್ಲಿದ ಹಾದಿ.
ಆರ್ಜೆಂಟಿಯಾ ಕೊಂಬೆ :
ಎರಡು ಕಾಲು !
ಮೂಲ ತಳಗಡೆಯಲ್ಲಿ,
ಊರ್ಧ್ವ ರೇತದ ಶಾಖೆ -
ಬಾ, ಅಪ್ಪಿಕೊ' ಎಂದು
ಹಾಕಿದೆ ಸವಾಲು !

ಕವಲೊಡೆದ ಕೊಂಬೆ
ನಡುವೆ ತೊಡೆಗಳೆಡೆ
ಕಟ್ಟಿಕೊಂಡಿದೆ ಒಂದು
ಹಕ್ಕಿ ಗೂಡು.

ಒಳಗೆ ಜೀವಪ್ಪಂದ ;
ಮೆತ್ತನೊದ ತಿದಿ.
ಬಾಯ್ದೆರೆದು ಮುಚ್ಚುತಿದೆ
ಪುಟ್ಟ ಹಕ್ಕಿ.

ಟೆಕೊಮಾ ಆರ್ಜೆಂಟಿಯಾ !
ನಮ್ಮ ನಾಡಿನ ಸಸ್ಯ -
ವಿದ್ದ ಹಾಗಂತೇನು
ಇಲ್ಲವಂತೆ.
ತುಂಬಿ ಬಂದಿದೆ ಹಳದಿ.
ಎದೆ ತುಂಬ ಅದರದೇ
ರಾಗರಂಗಿನ ಕನಸು.
ಜೀವರಸ ರಾಡಿ.

ಕವನ - ಬಸವನ ಹುಳು - ಶ್ರೀಮತಿ ರೇಣುಕಾ ದೇಸಾಯಿ

ಡಾಂಬರು ಬಳಿದುಕೊಂಡು ಎದೆ ಹರಡಿ ಮಲಗಿದೆ ರಸ್ತೆ,
ಬರೆದಳಿಸಿ ಸವೆಸವೆದ ಕಪ್ಪು ಹಲಗೆ.
ಜೀವರಾಶಿಯ ನುಂಗಿ ಬಿದ್ದ ಹೆಬ್ಬಾವು :
“ಎಲೇಲೇಲೇ ರಸ್ತೆ ! ಯೇನು ಅವ್ವೆವಸ್ತೆ !”

ಬೆನ್ನ ಮೇಲೆ ಸವಾರಿ ನೂರಾರು ಗಾಡಿ
ಬಸ್ಸು ಆಟೋರಿಕ್ಷ ಸೈಕಲ್ಲು ಲಾರಿ
ಕಾರು ಟಾಂಗಾಗಾಡಿ ಜೊತೆಗೆ ತರಕಾರಿ
ಬೆಳಗು ಬೈಗೂ ಸಂತೆಗದ್ದಲದ ರಾಡಿ.

ಬಂದುದೆಲ್ಲಿಂದ ಇದು ? ಹೋಗುವುದು ಎಲ್ಲಿಗೆ ?
ಎಲ್ಲಿಂದಲೂ ಅಲ್ಲ, ಎಲ್ಲಿಗೂ ಅಲ್ಲ.
ನಾ ನೋಡಿದಾಗಿಂದ ಇದು ಇಲ್ಲಿ ಬಿದ್ದಿದೆ !
ಈ ಮುದುಕನೇ ಸಾಕ್ಷಿ, ಕೇಳಿ ಬೇಕಾದರೆ !

ನಸುಕು ಹರಿಯುವ ಮುನ್ನ ತೊಡಗಿದರೆ ಗಲಾಟೆ
ನಡುರಾತ್ರಿ ವೇಳೆಗೇ ನಿಲ್ಲುವುದು ಜಾತ್ರೆ.
ಮತ್ತೆ ಗಿಜಿಬಿಜಿ ತೊಡಗಲಿರುವುದೆರಡೇ ಗಂಟೆ.
ಆಗಲಷ್ಟೇ ರಸ್ತೆಗೊಂದಿಷ್ಟು ನಿದ್ರೆ.

ಆಗಲೂ ಸಂಪೂರ್ಣ ಇಲ್ಲ ವಿಶ್ರಾಂತಿ.
ನಡುನಡುವೆ ಆಗೊಬ್ಬ ಈಗೊಬ್ಬ ವ್ಯಕ್ತಿ :
ಬೀಟು ಪೋಲೀಸನೋ ಕುಡುಕನೋ ಕಳ್ಳನೋ
ಗಸ್ತು ತಿರುಗುತ್ತಾನೆ ಅತ್ತ ಇತ್ತ.

ರಾತ್ರಿ ಹಗಲು ಕೂಡಿ ಆಡುತ್ತಿರುವ ಸಮಯ
ರಸ್ತೆಯೇ ಬದಿಯಿಂದ ಆ ಬದಿಯ ಕಡೆಗೆ
ಮೆತ್ತಮೆತ್ತಗೆ ತೆವಳಿ ಸಾಗುತಿರುವುದು ಒಂದು
ಬಹಳ ಸಣ್ಣನೆ ಪ್ರಾಣಿ-ಬಸವನ ಹುಳು.

ಲೋಕತಾರಕ ಕ್ರಿಸ್ತ ತನ್ನ ಸಿಲುಬೆಯ
ತಾನೆ ಹೊತ್ತು ನಡೆದಿದ್ದಂತೆ ಕೊಲೆಯ ಸ್ಥಾನಕ್ಕೆ
ಬೆನ್ನ ಮೇಲೆ ಹೊತ್ತು ತನ್ನ ಚಿಪ್ಪನ್ನೇ ಸಾಗುತಿದೆ
ಶಂಬುಕ, ಏನು ಖುಷಿ ಅದಕೆ !

ಮೂತಿಯೇ ಕಾಲು ; ಅಲ್ಲೆ ತಲೆ ಬಾಯಿ ;
ಮುಂದೆ ಚಾಚಿದ ಎರಡು ಶೃಂಗ, ಸ್ಪರ್ಶಾಂಗ.
ಕೊಂಬ ತುದಿಯಲ್ಲೇ ನೆಟ್ಟುಕೊಂಡಿವೆ ಕಣ್ಣು
ಸೆಲ್ಲು ಹಾಕಿದ ಟಾರ್ಚು, ಸರ್ಚುಲೈಟು !

ನಿಶ್ಯಬ್ದ ವೇಳೆಯಲಿ ಬಸವನ ಹುಳು ಸವಾರಿ.
ಬಾಯ್ದೆರೆದ ದಾರಿಯಿಡಿ ಅದರದೇ ಖಯಾಲಿ.
ಬೆನ್ನ ಮೇಲೇ ಕೋಟೆ, ತುದಿಯಲ್ಲಿ ಶಿಖರ.
ಸುರಿದ ಜೊಲ್ಲಿನ ರೇಖೆ ಅದರ ಅಭಿವ್ಯಕ್ತಿ.

ಮೌನ ಮುರಿಯಿತು ಆಗ, ಬಂತು ಲಾರಿ.
ಕನಸು ಒಡೆಯಿತು ಅದರ, ಹರಿದು ಗಾಲಿ.
ಕೋಟೆ ಶಿಖರ ಕೊಂಬು ಕಣ್ಣು ಅಪ್ಪಚ್ಚಿ.
ಉಳಿದುದೊಂದೇ ಅಲ್ಲಿ ಜೊಲ್ಲ ರೇಖೆ !

ವಿಶ್ಲೇಷಣೆ :

ಪ್ರಾಚಾರ್ಯ ಎಚೆಸ್ಕೆ ಕಾವ್ಯಾನುಸಂಧಾನ ಅಭಿಯಾನದಡಿಯಲ್ಲಿ ನಾನು ಆರಿಸಿಕೊಂಡ "ಬಸವನ ಹುಳು" ಕವನದ ಬಗ್ಗೆ ನನ್ನ ಅಭಿಪ್ರಾಯವನ್ನು ಈ ಕೆಳಗೆ ವಿವರಿಸಿರುವೆ :

ಕವಿ , ಭಾಷಾತಜ್ಞ, ಧಾರ್ಮಿಕ ಬರಹಗಾರ, ಸಾಹಿತಿ, ಕಥೆಗಾರ ಹೀಗೆ ನಾನಾ ಸಾಹಿತ್ಯ ಪ್ರಾಕಾರಗಳಲ್ಲಿ ಮೇಲುಗೈ ಸಾಧಿಸಿದ ಶ್ರೀಮಾನ್ಯ ಡಾ.ಹೆಚ್ ಎಸ್ ಕೃಷ್ಣಸ್ವಾಮಿ ಐಯ್ಯಂಗಾರ್, ಅವರ ಕವನ "ಬಸವನ ಹುಳು" ವಿನಲ್ಲಿ ನನಗೆ ಇಷ್ಟವಾದ ಒಂದು ಅಂಶವೆಂದರೆ ಇಲ್ಲಿ ಬಸವನ ಹುಳು ಎಂದು ತಲೆ ಬರಹವಿದೆಯೆಂದು ಬರೀ ಬಸವನ ಹುಳುವಿಗೆ ಪ್ರಾಧಾನ್ಯ ಕೊಡದೆ, ಪ್ರತಿ ಶಬ್ದ ಬಸವನಹುಳುವಿನೊಂದಿಗೆ ಗಿರಕಿ ಹೊಡೆಯದೆ, ವಿಶಾಲವಾಗಿ ಮೈ ಚಾಚಿ ಉದ್ದಕ್ಕೂ ಬಿದ್ದ ಡಾಂಬರಿನ ರಸ್ತೆಯ ಬಗ್ಗೆ ತುಂಬಾ ಮಾರ್ಮಿಕವಾಗಿ ಬರೆದಿದ್ದಾರೆ.

ಡಾಂಬರು ಬಳಿದುಕೊಂಡು ಎದೆ ಹರಡಿ ಮಲಗಿದ್ದ ರಸ್ತೆ ಕ್ಲಾಸ್ ರೂಮ್ ನಲ್ಲಿರುವ ಕಪ್ಪು ಹಲಗೆಯೊಂದಿಗೆ ತುಂಬ ಸುಂದರವಾಗಿ ಸಮೀಕರಿಸಿದ್ದಾರೆ. ಬರೆದು ಅಳಿಸಿ ಬರೆದು ಸವೆದ ಹಲಗೆಯೆಂತೆ. ಜನ, ಗಾಡಿ, ಆಟೋ ರಿಕ್ಷಾ, ಸೈಕಲ್ ನೂರಾರು ಸವಾರಿ ಮಾಡಿ ಸವೆದಿದೆಯೆಂದು . ಇನ್ನು ಇಲ್ಲಿ ರಸ್ತೆಯ ಬಗೆಗೆ ಅವರ ಇನ್ನೊಂದು ಮಾತು ಹೃದಯ ಮುಟ್ಟಿತು " ಜೀವರಾಶಿ ನುಂಗಿ ಬಿದ್ದ ಹೆಬ್ಬಾವು". ಈ ರಸ್ತೆ ನಿರ್ಮಿತವಾಗುವಾಗ ಎಷ್ಟು ಜೀವ ಜಂತುಗಳು ವಿಧಿವಶವಾದವೋ, ಎಷ್ಟು ಮರ ಗಿಡಗಳು ಕಡಿದು ಪ್ರಕೃತಿ ಸಂಪತ್ತು ಹಾಳಾಯ್ತೋ ಅನ್ನುವ, ಮಮ್ಮಲ ಮರಗುವ ಕವಿ ಹೃದಯ.

ಅರೆರೆ!! ರಸ್ತೆಯ ಬಗೆಗೆ ಇಷ್ಟು ಭಾವುಕರಾದ ಕವಿ ತಲೆ ಬರಹದ ಬಸವನ ಹುಳುವನ್ನು ಎಲ್ಲಿ ಬಿಟ್ಟರು ?

ಇದು ಕವಿಯ ಚಮತ್ಕಾರದ ಶೈಲಿ ಎನ್ನಿಸುತ್ತದೆ. ಮುಂದುವರೆದು, ಒಂದು ಹಾಸ್ಯ ಪ್ರಸಂಗ ಜನಜನಿತವಾಗಿದೆ, "ಏನಪ್ಪಾ ಈ ರಸ್ತೆ ಎಲ್ಲಿಗೆ ಹೋಗುತ್ತದೆ?" ಎಂದು ದಾರಿಹೋಕ ಅಲ್ಲಿ ಕುಳಿತಿದ್ದ ನಿವಾಸಿಗೆ ಕೇಳಲು, ಸೂಕ್ಷ್ಮಮತಿಯೂ, ಭಾಷಾಚತುರನೂ ಆದ ಇವನು, ಈ ರಸ್ತೆ ಎಲ್ಲೂ ಹೋಗಲ್ಲ ಅನೇಕ ವರ್ಷಗಳಿಂದ ಇಲ್ಲೇ ಇದೆ! ಎಂದು ಹೇಳುವ ಮುಖಾಂತರ ಕೇಳುಗನ ಪ್ರಶ್ನೆ ಸರಿಯಾಗಿ ಅರ್ಥ ಹೊರಡಿಸುತ್ತಿಲ್ಲಾ ಎಂದು ತಿಳಿಸುವಂತೆ, ಕವಿ ಎಚ್.ಎಸ್.ಕೆ. ಅವರು ಈ ಮಾತನ್ನೇ ಎಷ್ಟು ಘನತೆ ಬರುವಂತೆ ಬರೆದಿದ್ದಾರೆ. ಬಹಳ ವರ್ಷ ಎನ್ನುವದಕ್ಕೆ, ಮುದುಕನೇ ಸಾಕ್ಷಿ ಎಂದು ಹೇಳುವ ಮೂಲಕ ಕವಿತೆಯೆನ್ನು ಶೃಂಗರಿಸಿದ್ದಾರೆ.

ರಸ್ತೆ , ಭೂಮಿತಾಯಿ ಸದಾ ಒಂದಿಲ್ಲೊಂದು ಒಬ್ಬರಲ್ಲ ಇನ್ನೊಬ್ಬರಿಂದ ತುಳಿತಕ್ಕೆ ಒಳಗಾಗುತ್ತಾಳೆ, ಭೂಮಿ ತಾಯಿಗೆ ಅಘಾದವಾದ ಸಹನೆ, ಅವಳೇ ನಮ್ಮನ್ನೆಲ್ಲ ಹೆತ್ತ ತಾಯಿ. ಮಣ್ಣಿಂದ ಜನನ, ಮರಳಿ ಮಣ್ಣಿಗೆ. ಏನೆಲ್ಲ ಭಾವನೆಗಳ ಮಹಾಪುರ ಬಂದು ಜೀವ ತಪ್ತವಾಗುತ್ತದೆ. ಅವಳಿಗೆ ಅಂದ್ರೆ ರಸ್ತೆಗೆ ವಿಶ್ರಾಂತಿಯೇ ಇಲ್ಲ. ಅವಳು ಬರಿ ಸಾಧು ಸಂತರನ್ನೇ ಸಲಹುವುದಿಲ್ಲ. ಕುಡುಕ, ಕಳ್ಳ, ಮನೆಹಾಳರನ್ನು, ಸಮಾಜ ಘಾತುಕರನ್ನು ಸದಾ ಸಲಹುತಾಳೆ. ಕರ್ತವ್ಯ ನಿಷ್ಠ ರಾತ್ರಿಯ ಪಾಳೆಯದ ಪೊಲೀಸ್, ಓ ! ಸಮಾಜದ ಎಲ್ಲಾ ಮಜುಲುಗಳನ್ನು ಅಭಿವ್ಯಕ್ತ ಪಡಿಸಲು ಉದಾಹರಿಸುವ ವ್ಯಕ್ತಿಗಳೇ ಎಲ್ಲ ಅರ್ಥವನ್ನು ಹೊರ ಸೂಸುತ್ತವೆ. ಕವಿಯ ಮನಸಿನ ಗೂಡಾರ್ಥದ ಸಂಕೇತಗಳು ನನಗೆ ತುಂಬಾ ಪ್ರಭಾವ ಬೀರಿದವು. ತಾಯಿಋಣ, ಭೂಮಿ ಋಣ, ಅನ್ನದ ಋಣ ತೀರಿಸಲಾರೆವು ಅನ್ನುವ ವೇದಾಂತ ಭಾವನೆ ಓದುಗನಲ್ಲಿ ಉಕ್ಕಿಸಿ ಉಕ್ಕಿಸಿ ಇಟ್ಟಿದಾರೆ ಕವಿ ಇಲ್ಲಿ.

ಈಗ !! ಬರುತ್ತಾನೆ ನಮ್ಮ ಕಥಾ ನಾಯಕ ಬಸವನ ಹುಳು. ಅದೆಷ್ಟು ಚೆಂದಾಗಿ ವರ್ಣಿಸಿದ್ದಾರೆ ಕವಿ ಈ ಹುಳುವನ್ನು . ಈ ಕವಿತೆ ಓದುವವರೆಗೂ ಬಸವನ ಹುಳು ಎಂದರೆ ಒಂದು ತರಹದ ಅಸಹ್ಯ ಮೂಡಿತ್ತು ನನ್ನ ಮನದಲ್ಲಿ. ನಿಧಾನಕ್ಕೆ ತೆವಳುವ, ನೆಡೆದಲ್ಲೆಲ್ಲಾ ಜೊಲ್ಲು ಸುರಿಸುವ ಒಂದು ಮೃದು ಹುಳು ಎಂದು. ಕ್ರಿಸ್ತನ ಶಿಲುಬೆಗೆ ಹೋಲಿಸುತ್ತಾರೆ ಅದರ ಮೇಲಿರುವ ಚಿಪ್ಪನ್ನು. ತನ್ನನ್ನು ಶಿಲುಬೆಗೆ ಏರಿಸಲು ತಾನೇ ಅದನ್ನು ಹೊತ್ತು ನೆಡದ ಕ್ರಿಸ್ತ ಎಲ್ಲರ ಮನದಲ್ಲೂ ಮರುಕ, ದುಃಖ ಹುಟ್ಟಿಸುತ್ತಾನೆ. ಹಾಗಾಗಿದ್ದಕ್ಕೆ ಅವನು ದೇವನಾದ, ದೇವಸನ್ನಿದಾನ ಪಡೆದ ಅಂದುಕೊಳ್ಳುವ ಮನಕ್ಕೆ ತಕ್ಷಣ ನೂರು ಕ್ಯಾಂಡಲ್ ಬಲ್ಬು ಹೊಳೆದಂತೆ ಆಗುತ್ತದೆ . ಅರೆರೆ!! ನನ್ನ ಈ ಪಾಪದ ಹುಳು, ಕ್ರಿಸ್ತನಷ್ಟೇ ದೈವೀ ಜೀವ ಎಂದು ಮನದಲ್ಲೇ ಬಸವನ ಹುಳಕ್ಕೆ ಕೈ ಮುಗಿಯುವಂತಾಗುತ್ತದೆ.

ಯಾವ ಅಂಗಗಳೂ ಪೂರ್ತಿ ಆವಿಷ್ಕಾರ ಹೊಂದಿರದ ಒಂದು ಕೇವಲ ಹುಳುವಾಗಿ ಕಂಡಿದ್ದು. ಕವಿಯ ಚಂದನೆಯ ಜೋಡಣೆಯಲ್ಲಿ, ಕಣ್ಣು ,ಕಿವಿ, ಮೂಗು, ಬಾಯಿ ಎಲ್ಲ ಅದರ ತಲೆ ಶಿಖರದಲ್ಲಿ, ಜೊಲ್ಲು ಸುರಿಸುವದು ಅದರ ಅಭಿವ್ಯಕ್ತಿ ಎನ್ನುವ ಮಾತು ಒಪ್ಪಿಗೆಯಾಯ್ತು. ರಾತ್ರಿಯ ಕತ್ತಲೆಯ ನೀರವತೆಯಲ್ಲಿ ಆ ರಸ್ತೆ ಕೂಡಾ ಏನನ್ನೋ ಆಪೋಷನ ತೆಗದು ಕೊಳ್ಳಲು "ಬಾಯ್ದೆರದ ದಾರಿಯಿಡಿ ಅದರದೇ ಖಯಾಲಿ !! ಇಲ್ಲಿ ಒಂದು ತರಹ ಕ್ಲೈಮ್ಯಾಕ್ಸ್ . ನಿಮ್ಮ ಹೃದಯ ಬಾಯಿಗೆ ಬರುವ ಅನುಭವ.

ಓ!!! ಅಂದು ಕೊಂಡದ್ದು ಆಗೇ ಹೊಯ್ತು , ಮಾನವ ನಿರ್ಮಿತ ರಾಕ್ಷಸ ಯಂತ್ರ ಯಮನಂತೆ ಬಂದು, ಪಾಪಿ ಲಾರಿ ಪುಟ್ಟ ಜೀವವ ನುಂಗಿ ಬಿಟ್ಟಿತು. ಅದರ ರೌದ್ರತೆಯನ್ನು ಕವಿಯು ಮನ ಮುಟ್ಟುವಂತೆ ಚಿತ್ರಿಸಿದ್ದಾನೆ. ಕೋಟೆ, ಶಿಖರ, ಕೊಂಬು, ಕಣ್ಣು ಅಪ್ಪಚ್ಚಿ ,ಆದರೆ ಉಳಿದುದೊಂದೇ ಅದರ ಅಭಿವ್ಯಕ್ತಿಯಾದ ಜೊಲ್ಲು ರೇಖೆ!!!

ಕವನ - ಮಾತು ಮತ್ತು ತುಡಿತ - ಶ್ರೀಮತಿ ರತ್ನಾ ಮೂರ್ತಿ

ಮಾತು

ಮಾತು ಬರಿ ವರ್ಣಗಳ ಮಾಲೆಯಲ್ಲ,
ಬಾಯಿ-ಕಿವಿ ಕೂಡಿಸುವ ದಾರವಲ್ಲ.

ತುಡಿಯುವ ಹೃದಯಗಳನ್ನು,
ಮಿಡಿಯುವ ನಾಡುಗಳನ್ನು,
ಕಡಲ ಮೊರೆತದ ಅಲೆಯ ತಲೆ ಮೇಲೆ ಸ್ಪಂದಿಸುವ
ವಿಶಾಲ ಖಂಡಗಳನ್ನು
ಬೆಸೆಯುವ ಜಾದೂ ವಿದ್ಯೆ:

ಸದನ ಕಟ್ಟುವ,
ಕದನ ಬಿತ್ತುವ,
ಕಿಡಿಯ ಕೆದರುವ,
ಅಣುವ ಸಿಡಿಸುವ,
ಇಡಿಯ ಬದುಕನ್ನೇ ಚಿವುಟಿ ಅಳಿಸುವ,
ತೂಗಿ ಕಚಕುಳಿಯಿಡುವ,
ರಣಚಂಡಿಗೆ ಮಂಕುಬಡಿಸಿ ತಣ್ಣಗೆ ಮಾಡುವ
ಮೋಡಿಗಾರಿಕೆ ಮಾತು.

'ಮಾತು ಜ್ಯೋತಿರ್ಲಿಂಗ',
ಅಂತೆ ಕೆಡುಕಿನ ರಂಗ : ನಡುಬೀದಿಗಿಳಿದಾಗ
ಮಸಗಿ ಮಸೆದೀಡಾಡಿ
ಎದೆಗೆ ಮೊನೆ ನಾಟಿ
ರಕ್ತದ ಮಡುವಿನಲ್ಲಿ
ಸದ್ದಿಲ್ಲದೆ ಮಲಗುವುದು.

ತುಡಿತ

ಶ್ಯಾಮಲಾ ಬೇಕರಿ ಎಂದೊದರಿದರೇನಾಯ್ತು ರೀ ?
ಹಿಟ್ಟು ಕಲಸಿ,
ಜಿಡ್ಡು ಬೆರಸಿ,
ನಾದಿ, ತೇದು,
ತಟ್ಟಿ,
ತಟ್ಟೇಲಿಟ್ಟು,
ಪ್ರೀತಿಯ ಕಾವು ಕೊಟ್ಟು,

ಬರಬರ ಉಬ್ಬಿದಾಗ
ಬರಸೆಳೆದುಕೊಳ್ಳಬೇಕು.

ಕವನ - ಅರಿಸ್ಟೋಫೆನಿಸ್ - ಅಂದು - ಇಂದು - ಶ್ರೀಮತಿ(ಡಾ)ಜಯಂತಿ ಮನೋಹರ

ಪ್ರತಿ ಕಾಯವೊಂದಕ್ಕೂ ಪ್ರತಿಕಾಯವೊಂದುಂಟು
ಎನ್ನುತ್ತದೆ ವಿಜ್ಞಾನ -
ಪ್ರತಿ ಬಾಡಿಗೂ ಒಂದು ಆಂಟಿ-ಬಾಡಿ.
ಕ್ರಿಯೆಗೊಂದು ಪ್ರತಿಕ್ರಿಯೆ, ವಿಷಕ್ಕೆ ಪ್ರತಿವಿಷ :
ಗಂಡಿಗೊಂದಂತೆ ಹೆಣ್ಣು.

ಕೇಳಿದ್ದೀಯಲ್ಲವೇ
ಸಾಕ್ರಟೀಸನ ವಿಷಯ ?
ಬಟ್ಟಲ ವಿಷವೆಲ್ಲ ಹೀರಿ
ಕೋಳಿಯ ಋಣದ ವಿಚಾರ
ಮಾತಾಡಿದ ಅನಧೀರ.

ಆದರೆ ಆ ಕಥೆಯನ್ನಲ್ಲ
ನಾನೀಗ ಇಲ್ಲಿ ಪ್ರ -
ಸ್ತಾಪಿಸುತ್ತಿರೋದು.
ಆಗಥಾನನ ಮನೆಯ
ಔತಣ ಸಮಾರಂಭದಲ್ಲಿ
ಸಾಕ್ರಟೀಸ್ ಮತ್ತೆಲ್ಲ
ಕವಿಗಳೂ ಚಿಂತಕರೂ
ಕೂಡಿ ಮಾತಾಡಿದ್ದು,
ಚರ್ಚೆಯ ವಿಷಯ ಪ್ರೇಮ-ಯಥಾಪ್ರಕಾರ.
ಪ್ರೇಮವೆಂದರೆ ಹಾಗೆ,
ಹೀಗೆ-ಎಂದೆಲ್ಲರೂ
ವ್ಯಾಖ್ಯಾನ ನೀಡಿದ್ದು,
ಕೊನೆಗೆ ನಗೆ ಕವಿ ಅರಿ -
ಸ್ಟೋಫೆನಿಸ್ ಹೇಳಿದ್ದು.

ಗೋಷ್ಠಿಯ ಸದಸ್ಯರಲ್ಲಿ
ಫೀಡ್ರಸ್ ಎಂಬವನೊಬ್ಬ.
ಆತ ಹೇಳಿದ ಹೀಗೆ :
ಪ್ರೇಮ ಬಲು ಪುರಾ -
ತನ ದೇವರು.
ಅಂತೆಯೇ ಇಂದಿಗೂ
ಅದು ಬಹಳ ಜೋರು :

ಪಂದೆಯನ್ನೂ ಹೀರೊ ಮಾಡಿಬಿಡಬಲ್ಲದ್ದು.
ಪ್ರೇಮಿಗಳ ಪಡೆಯೊಂದು
ಇರುವುದಾದರೆ ಇಡೀ
ಜಗತ್ತನ್ನಾದರೂ
ಗೆದ್ದು ಬರಬಹುದು.

ನಿಜ, ಎಂದ ಪಾಸೇನಿಯಾಸ್.
ಪ್ರೇಮ ಎರಡು ಬಗೆ :
ಒಂದು ಮರ್ತ್ಯ.
ಇನ್ನೊಂದಮರ್ತ್ಯ.
ಒಂದು ದೇಹದ ಸೆಳೆತ,
ಇನ್ನೊಂದು ಆತ್ಮದ್ದು,
ಅವಿನಾಶಿಯಾದ್ದು.

ಆಗೆದ್ದು ನಿಂತವನೆ ಅರಿಷ್ಟೋಫೆನಿಸ್. (ಅವನು ನಿಂತರೇ ನಗೆ,
ಕುಳಿತರೂ ನಗೆಯೆ :
ಬಾಯಿ ಬಿಟ್ಟರೂ ನಗೆ,
ಮುಚ್ಚಿದರು ಹಾಗೆ.)
ಹೇಳಿದ, ಅರಿಸ್ಟೋಫೆನಿಸ್ :
ನಿಮಗೆ ಗೊತ್ತೆ ?
ಹಿಂದೆ, ಬಲು ಹಿಂದೆ,
ಈ ಸೃಷ್ಟಿಯ ಆದಿಯಲ್ಲಿ,
ಹೆಣ್ಣೆಂಬುದೇ ಬೇರೆ,
ಗಂಡೆ ಬೇರೆ
ಎಂದೇನೂ ಇರಲಿಲ್ಲ,
ಹೌದು, ಸ್ವಾಮಿ ! ನಗಬೇಡಿ,
ಎರಡೂ ಕೂಡಿದ ಬಾಡಿ
ಹೇಗಿತ್ತು ಗೊತ್ತೆ ?
ದುಂಡಗೆ.
ಚೆಂಡಿನ ಪರಿ.
ತಲೆ ಎರಡು, ಕೈ ಕಾಲು
ತಲಾ ನಾಲ್ಕು.
ಎಂಟೂ ಕೈ -
ಕಾಲುಗಳು
ಚಕ್ರದರೆ -
ಗಳ ರೀತಿ.
`ಹೆಂ-ಗಂ' ಗಳೆಂಬ ಈ
ವಿಚಿತ್ರ ಜಂತುಗಳು
ಪೈಲ್ವಾನುಗಳ ಹಾಗೆ
ಪಲ್ಟಿ ಹೊಡೆಯುತ್ತ,

ಸ್ವರ್ಗಕ್ಕೂ ಲಗ್ಗೆ ಹಾಕಿ
ಮಾಡಿದುವು ಹಾವಳಿ.

ದೇವೇಂದ್ರ ಯೋಚಿಸಿದ -
ಈ 'ಹೆಂ-ಗಂ' ಪ್ರಾಣಿಯನ್ನ
ಹೇಗಾದರೂ ತಹಬಂ -
ದಿಗೆ ತರಲೇಬೇಕು.
ಹಾಂ ! ಹೊಳೆಯಿತು ಉಪಾಯ :
ಈ ಪುಂ-ಸ್ತ್ರೀ ಮೃಗವನ್ನ, ಅರೆನಾರೀನರನನ್ನ
ಅರ್ಧಕ್ಕೆ ಕೊಯ್ಯೋಣ !

ದೇವೇಂದ್ರ ಹಾಗೇನೇ
ಮಾಡಿಯೂಬಿಟ್ಟ !
'ಹೆಂ' ಅರ್ಧ ಹೆಣ್ಣಾಗಿ,
ಉಳಿದರ್ಧ ಗಂಡಾಗಿ,
ಶಕ್ತಿಯೂ ತುಂಡಾಗಿ,
ದೇವತೆಗಳಿಗೆ ಹವಿ -
ಸ್ಸರ್ಪಿಸುವ ಜನಸಂಖ್ಯೆ
ಒಂದಕ್ಕೆ ಎರಡಾಗಿ,
ಗಂಡೂ ಹೆಣ್ಣೂ ಮತ್ತೆ
ಹಿಂದಿದ್ದ ಹಾಗೇನೇ
ಒಂದಾಗುವ ಸಲುವಾಗಿ, ಒಂದಿನ್ನೊಂದನ್ನರಸಿ,
ಬೆಂಬತ್ತಿ, ಕಡಿದಾಡಿ,
ಶಕ್ತಿಯೆಲ್ಲಾ ವ್ಯಯಿಸಿ,
ತೊಳಲಾಡುವುದ ನೋಡಿ
ದೇವೇಂದ್ರನೂ ನಕ್ಕ.
ಮತ್ತೆ ಮಿಲನಕ್ಕಾಗಿ
ಹೆಣ್ಣು ಗಂಡುಗಳಲ್ಲಿ
ನಡೆದ ಈ ಯತ್ನಕ್ಕೆ
'ಪ್ರೇಮ' ಎಂಬ ಒಂದು
ದೊಡ್ಡ ಹೆಸರನ್ನೇ
ಇಟ್ಟುಬಿಟ್ಟ !

ಅರಿಸ್ಟೋಫೆನೀಸನ ಈ
ಕಥೆಯನ್ನ ಕೇಳಿದಾಗ
ಆಗಥಾನನ ಮನೆಯ
ಅಭ್ಯಾಗತ ಜನಕ್ಕೆಲ್ಲ
ನಗೆಯೊ ನಗೆ !
ಆದರೆ ಈ ಕಥೆಯೇನೂ
ಸುಳ್ಳಲ್ಲವೇ ಅಲ್ಲ -

ಎಂದೇ ನಂಬಿಕೆ ನನಗೆ.
ಅರಿಸ್ಟೋಫೆನಿಸ್ ಎಂದ ಹಾಗೆ
ನನ್ನಿ ತಿಗೆ ನೀನು ಪ್ರತಿ;
ಏತಿಗೊಂದು ಪ್ರೇತಿ ;
ಕೂಡಿದರೆ ಪ್ರೀತಿ.

ಅಂದು- ಇಂದು*

ಮಿಲ್ಟನ್ ! ನೀನೀ ಗಳಿಗೆ ಬದುಕಿದ್ದಿರಬೇಕಿತ್ತು.
ಇಂಗ್ಲೆಂಡಿಗೀಗುಂಟು ನಿನ್ನಗತ್ಯ : ಇಡೀ ನಾಡೇ ಈಗ
ನಿಂತ ನೀರಿನ ಹಳ್ಳ ; ಬಲಿಪೀಠ, ಕತ್ತಿ, ಲೇಖನಿ, ಮತ್ತೆ
ಮನೆಬಾಳು, ತೋಟ ಮನೆ ಶೌರ್ಯ ಸಂಪತ್ತೆಲ್ಲ
ಕಳೆದುಕೊಂಡಿವೆ ಪೂರ ತಮ್ಮ ಪ್ರಾಚೀನತಮ
ಆಂಗ್ಲ ಹೆಗ್ಗಳಿಕೆ ಆಂತರಿಕ ಸುಖವನ್ನ, ನಾವೀಗ ಸ್ವಾರ್ಥಿ ಜನ :
ಎದ್ದೇಳು, ಮತ್ತೆ ಬಾ ನಮ್ಮ ಎಡೆಗೆ ;
ಕೊಡು ನಮಗೆ ಸಭ್ಯತೆಯ,
ಸೌಶೀಲ್ಯ ಸ್ವಾತಂತ್ರ್ಯ ಶಕ್ತಿಯನ್ನ.
ನಿನ್ನಾತ್ಮವಿತ್ತು, ನಕ್ಷತ್ರದೋಪಾದಿ, ಸ್ವತಂತ್ರ ಜೀವಿ ;
ಕಡಲ ಮೊರೆತದ ಹಾಗೆ ನಿನ್ನ ಏರುದನಿ,
ನೀಲ ಗಗನದ ರೀತಿ ಶುಭ್ರ, ಗಂಭೀರ, ಮುಕ್ತ.
ಅಂತೆ ಬದುಕಿನ ರಾಜಮಾರ್ಗದಲಿ ನೀ ನಡೆದೆ
ದಿವ್ಯ ನಗೆ ನಗುತ. ನಿನ್ನ ಹೃದಯವೊ, ನಾಡ
ತೊತ್ತುಗೆಲಸಕ್ಕೆಂದೆ ಮೀಸಲಾಗಿತ್ತು.

ವಿಶ್ಲೇಷಣೆ:

ಭಾರತೀಯ ದರ್ಶನ ಶಾಸ್ತ್ರದ ಆಳ ಅಗಲಗಳನ್ನು ಅರಿತಿದ್ದ ಮಾನ್ಯ ಎಚ್ಚೆಸ್ಕೆ ಗ್ರೀಕ್ ದಾರ್ಶನಿಕರ ಚಿಂತನೆಗಳನ್ನು "ಅರಿಷ್ಟೋಫೆನಿಸ್ ಹೇಳಿದ್ದು" ಎನ್ನುವ ತಮ್ಮ ಕವನದಲ್ಲಿ ತೆರೆದಿಟ್ಟಿದ್ದಾರೆ. ಇದು ಅನೇಕ ಗಹನವಾದ ವಿಚಾರಗಳನ್ನು ಗರ್ಭೀಕರಿಸಿಕೊಂಡಿದೆ. ವಿಜ್ಞಾನ, ಪ್ರೇಮ, ಅವಿನಾಶಿಯಾದ ಆತ್ಮದ ಅರವಿನಂತಹ ಗಹನ ಚಿಂತನೆ - ಎಲ್ಲವೂ ಹೊರಹೊಮ್ಮಿದೆ. ಸೃಷ್ಟಿಯ ಆದಿಯಲ್ಲಿ, ಒಂದಾಗಿದ್ದ ಸ್ತ್ರೀ - ಪುರುಷರ ದೇಹಗಳು ಬೇರೆಯಾದ ಕೌತುಕದ ಕಥೆಯ ಹಿಂದಿರುವ ತಾತ್ತ್ವಿಕ ಚಿಂತನೆ ಈ ಕವಿತೆಯ ಮುಖ್ಯ ಆಶಯ.

ಶಿಕ್ಷೆ ಗೊಳಗಾಗಿ ವಿಷ ಸೇವಿಸುವಾಗಲೂ ಸಾಕ್ರೆಟಿಸ್ ಗಿದ್ದ ಸಮಚಿತ್ತದ ಪ್ರಸ್ತಾಪವನ್ನಷ್ಟೇ ಮಾಡಿ, ಗ್ರೀಕ್ ದೇಶದ ಅಥೆನ್ಸ್ ನಗರದ ಒಂದು ಪಾನಗೋಷ್ಟಿಯಲ್ಲಿ ಪ್ರಸಿದ್ಧ ಕವಿಗಳು/ ನಾಟಕ ರಚನಾಕಾರರು/ ದಾರ್ಶನಿಕರು ಸೇರಿ ನಡೆಸುವ *'ಪ್ರೇಮ'* ದ ವ್ಯಾಖ್ಯಾನದತ್ತ ಸಾಗುತ್ತದೆ ಈ ಕವನ.

ದಾರ್ಶನಿಕ ಪ್ಲೇಟೊ ರಚಿಸಿರುವ ಸಿಂಪೋಸಿಯಂನಲ್ಲಿ ಕಾಣುವ ಈ ಪ್ರಕರಣ ನಡೆದದ್ದು ಆಗಥಾನನ ಮನೆಯಲ್ಲಿ. ಅಲ್ಲಿ ಸಾಕ್ರೆಟಿಸ್ ನೊಂದಿಗೆ

ಅರಿಸ್ಟೋಫೆನಿಸ್, ಫೀಡ್ರಸ್ , ಪಾಸೇನಿಯಾಸ್ ಮುಂತಾದ ಅನೇಕ ಮಹನೀಯರಿದ್ದರು.

'ಸಿಂಪೋಸಿಯಮ್' ಕ್ರಿ.ಪೂ.೩೮೫ ರ ಸುಮಾರಿಗೆ ಲಿಖಿತ ರೂಪ ಪಡೆಯಿತು ಎನ್ನುತ್ತಾರೆ. ಇದರಲ್ಲಿರುವ ಅಗಥಾನನ ಮನೆಯ ಔತಣ ಸಮಾರಂಭ ನಡೆದದ್ದು (ಪಾನಗೋಷ್ಠಿ) ಕ್ರಿ.ಪೂ.೪೧೬ ಎಂದು ವಿಮರ್ಶಕರು ಗುರುತಿಸುತ್ತಾರೆ. 'ಸಿಂಪೋಸಿಯಮ್'ನಲ್ಲಿ ಪ್ರಧಾನವಾಗಿ ಕಾಣುವುದು ಕಾಲ್ಪನಿಕ ಸಂಭಾಷಣೆಗಳು. ಆದರೆ, ಈ ಕವಿತೆಯಲ್ಲಿ ಕಾಣುವ ಅಗಥಾನನ ಮನೆಯ ಪಾನಗೋಷ್ಠಿಯಲ್ಲಿ ಭಾಗವಹಿಸಿದ ಚಿಂತಕರೆಲ್ಲರೂ ಆ ಸಮಯದಲ್ಲಿ ಅಥೆನ್ಸಿನಲ್ಲಿ ಇದ್ದವರು. ಹಾಗಾಗಿ ಇದರ ಬಹುಭಾಗ ವಾಸ್ತವವಾಗಿರುವ ಸಾಧ್ಯತೆ ತೋರುತ್ತದೆ. ಪ್ರಮುಖವಾಗಿ, ಒಂದು ವಿಷಯದ ಬಗ್ಗೆ ಚರ್ಚೆಯನ್ನು / ಚಿಂತನೆಯನ್ನು ಪ್ರಚೋದಿಸುವುದು ಹಾಗೂ ಚಿಂತಕರೊಡನೆ ಸಂಭಾಷಣೆಗಳ ಮೂಲಕ ಜ್ಞಾನವನ್ನು ಅರಸುವುದು ಪ್ಲೇಟೋ ಅನುಸರಿಸಿದ ವಿಧಾನ. ಇದರಲ್ಲಿ, ನಾಟಕೀಯ ರೀತಿಯಲ್ಲಿ ಪಾತ್ರಗಳು ಮಾತನಾಡುವಂತಿರುತ್ತದೆ. ಹಲವೊಮ್ಮೆ ದೀರ್ಘ ಭಾಷಣಗಳೂ ಕಾಣುತ್ತವೆ.

ಅಗಥಾನನ ಔತಣಕೂಟದಲ್ಲಿ, ಅಂದಿನ ಚಿಂತಕರ ನಡುವೆ ನಡೆದದ್ದು ಗ್ರೀಕರ ಪರಿಕಲ್ಪನೆಯಾದ 'ಎರೋಸ್' (Eros), ಅಂದರೆ 'ಪ್ರೇಮ'ದ ವಿವಿಧ ಆಯಾಮಗಳ ಬಗ್ಗೆ ವ್ಯಾಖ್ಯಾನ - ವಿಶ್ಲೇಷಣೆ.

ಕೊನೆಗೆ ಮಾತನಾಡಿದ್ದು, ಹಾಸ್ಯಕವಿ ಎಂದು ಖ್ಯಾತನಾಗಿದ್ದ ಅರಿಸ್ಟೋಫೆನಿಸ್. ಅವನು ನಿಂತರೇ ನಗೆ - ಕುಳಿತರೂ ನಗೆಯೆ - ಬಾಯಿ ಬಿಟ್ಟರೂ ನಗೆ - ಮುಚ್ಚಿದರು ಹಾಗೆ ಎಂದು ಅವರು ಹೇಳುವಂತೆ, ಅಲ್ಲಿದ್ದವರೆಲ್ಲರಿಗೂ ಅವನು ಹೇಳಿದ ಕಥೆ ನಗೆ ಎಬ್ಬಿಸುತ್ತದೆ. ಆದರೆ, ಅದು ಬರೀ ಕಥೆಯಲ್ಲ .. ಅದರಲ್ಲಿ ತಥ್ಯವಿದೆ ಎನ್ನುತ್ತಾ ಎಚ್ಚೆಸ್ಕೆ, ಓದುಗರಲ್ಲಿ / ಕೇಳುಗರಲ್ಲಿ .. ಚಿಂತನೆಯ ಕಿಡಿ ಎಬ್ಬಿಸಿಬಿಡುತ್ತಾರೆ.

ಪ್ರತಿಯೊಂದು ಕಾಯಕ್ಕೂ ಪ್ರತಿಕಾಯವೊಂದುಂಟು - ಕ್ರಿಯೆಗೊಂದು ಪ್ರತಿಕ್ರಿಯೆ ಎನ್ನುತ್ತಾ ಗಂಡಿಗೊಂದಂತೆ ಹೆಣ್ಣು ಎನ್ನುವ ಪ್ರೇಮದತ್ತ ಸಾಗುತ್ತದೆ ಚಿಂತನೆಯ ಹರವು. ಅಲ್ಲಿದ್ದ ಕವಿ, ಫೀಡ್ರಸ್ ಪ್ರೇಮವನ್ನು ದೇವರ ಮಟ್ಟಕ್ಕೇರಿಸಿ, ಪ್ರೇಮವಿದ್ದರೆ ಎಲ್ಲವನ್ನೂ ಸಾಧಿಸಬಹುದು ಎನ್ನುತ್ತಾನೆ. ಅದನ್ನು ಸಮರ್ಥಿಸುತ್ತಾ, ಪಾಸೇನಿಯಾಸ್ ಪ್ರೇಮವು ದೇಹದ ಸೆಳೆತ ಮೀರಿದಾಗ ಅವಿನಾಶಿಯಾಗುತ್ತದೆ ಎನ್ನುತ್ತಾನೆ.

ಆ ಘಟ್ಟದಲ್ಲಿ ಮಾತನಾಡಲು ಎದ್ದ ಹಾಸ್ಯಕವಿ, ಅರಿಷ್ಟೋಫೆನಿಸ್ ಸ್ತ್ರೀ ಪುರುಷರ ನಡುವಿನ ಭಾವ ಬಂಧದ ವಿಶ್ಲೇಷಣೆಗೆ ತೊಡಗುತ್ತಾನೆ. ಮೆಚ್ಚಿದ ಸಂಗಾತಿ ದೊರೆತು ಪ್ರೇಮ ಅರಳಿದಾಗ ಪೂರ್ಣತೆಯ ಅನುಭವವಾಗುವುದರ ಹಿಂದೆ ಒಂದು ಕೌತುಕದ ಸಂಗತಿ ಇದೆ ಎಂದು ಹೇಳುತ್ತಾ, ಸೃಷ್ಟಿಯ ಆದಿಯಲ್ಲಿ ಹೆಣ್ಣು - ಗಂಡೆಂಬ ಭೇದವೇ ಇರಲಿಲ್ಲ ಅಂದರೆ ಅಭಿನ್ನವಾಗಿತ್ತು ಎನ್ನುತ್ತಾನೆ.

ಭಿನ್ನರೂಪಗಳು ಕಾಣದ 'ಸ್ತ್ರೀ ಪುಂ ದೇಹಗಳು' ಒಂದಾಗಿ ಅತೀವ ಶಕ್ತಿ ಪಡೆದು, ಚಕ್ರದ ಅರೆಯಂತೆ, ಚಂಡಿನಂತೆ ಉರುಳುತ್ತಾ ದೇವತೆಗಳನ್ನೂ ಸೋಲಿಸುವ ಮಟ್ಟ ತಲುಪಿದಾಗ ದೇವೇಂದ್ರನಿಗೆ ಚಿಂತೆ ಆಯಿತಂತೆ.
ರೂಪಹೀನವಾದ ಈ ಜೀವಿಯನ್ನು ಅರ್ಧಕ್ಕೆ ಕೊಯ್ದು ಬೇರೆ ಮಾಡಿದಾಗ ಅವನ ಚಿಂತೆ ದೂರವಾಯಿತಂತೆ. ಆದರೆ, ಎರಡಾಗಿ ಭಾಗವಾದ ಹೆಣ್ಣು - ಗಂಡುಗಳು ಒಂದಾಗಲು ನಿರಂತರ ಕಾತುರವಾಗಿರುತ್ತವೆ. ಕಳೆದು ಹೋದ ತನ್ನ ಅರ್ಧ ಭಾಗವನ್ನು ಸೇರಲು ಆಗುವ ತುಡಿತಕ್ಕೆ ದೇವೇಂದ್ರ 'ಪ್ರೇಮ' ಎಂದು ಹೆಸರಿಸುತ್ತಾನೆ ಎಂದು ಅರಿಷ್ಟೋಫೆನಿಸ್ ಹೇಳಿದಾಗ ಅಲ್ಲಿ ನಗೆಯ ದೊಡ್ಡ ಅಲೆ ಏಳುತ್ತದೆ.

ಆದರೆ, ಈ ಕಥೆಯೇನೂ ಸುಳ್ಳಲ್ಲವೇ ಅಲ್ಲ ಎಂದೇ ನಂಬಿಕೆ ನನಗೆ ಎನ್ನುವುದು ಕವಿಯ ಸ್ವಗತವೆಂದು ನನಗೆ ತೋರುತ್ತದೆ.

ಇಲ್ಲಿ ನಮ್ಮ 'ಅರ್ಧ ನಾರೀಶ್ವರ' ನ ಹಾಗೂ
ವೈಶ್ವಿಕ ಧನಾತ್ಮಕ/ಋಣಾತ್ಮಕ ಶಕ್ತಿಗಳ ಪರಿಕಲ್ಪನೆ ಮನಸ್ಸಿನಲ್ಲಿ ಹಾದು ಹೋಗುತ್ತದೆ.

ಈ ಕವಿತೆಯ ಒಟ್ಟಾರೆ ಆಶಯವನ್ನು ತಿಳಿಯಲು ಗ್ರೀಕ್ ಚಿಂತಕರ ರಚನೆಗಳ ಅಧ್ಯಯನ ಅಗತ್ಯವಾಗುತ್ತದೆ. ನನಗೆ ದೊರೆತ ಈ ಅವಕಾಶಕ್ಕಾಗಿ ಆಯೋಜಕರಿಗೆ ಹಾಗೂ ಈ ಕವಿತೆಯನ್ನು ನನಗಾಗಿ ಆಯ್ಕೆ ಮಾಡಿದ ಸ್ನೇಹಿತ, ಮಹಾಬಲರಿಗೆ ಧನ್ಯವಾದಗಳು.

ಕವನ - ಬದುಕು - ಧೀರೇಂದ್ರ ಸೀತಾರಾಮ್

ಬಲ, ಎಡ,
ಮತ್ತೆ ಬಲ -
ಇದ್ದರೆ ರಸ್ತೆ, ಖುಲ್ಲಾ,
ದಾಟಿಬಿಡು !
ನಿಲ್ಲಬೇಡ,
ನೋಡಿ ಮತ್ತೆ ಎಡಬಲ.

ನಿಟ್ಟಿಸಿ ನಿಲ್ಲುವುದಕ್ಕೆ
ಇದು ಕಾಲವಲ್ಲ,
ಕಾಲವೂ ಇಲ್ಲ.
ಖಾಲಿ ಇದ್ದಾಗ ತೂರಿಕೋ.
ಇಲ್ಲವೇ -
ಭೋರ್ಗರೆಯುವ ಪ್ರವಾಹ :
ಬಂಡಿ ಬಸ್ಸು ಲಾರಿ ಕಾರು -
ನಾನಾ ತರಹ.

ಹೊಳೆಗುಂಟ ತೇಲುವುದೇ
ಹಾಯಿ,
ಸರಾಗ,
ನಿಜ !
ದಾಟು ದುಸ್ಸಾಹಸ.
ಕೇಳಿಲ್ಲವೆ ದಾಸರ ಮಾತ ? -
'ಪಾದಚಾರಿಗಳಿಗೆ ಇದು ಕಾಲವಲ್ಲ !'

ಆದರೂ ದಾಟಲೆಬೇಕು,
ವಿಧಿಯಿಲ್ಲ.
ರಸ್ತೆಯಾಚೀಚೆ ಬದಿ
ಗುಲ್ಮೊಹರು, ಕ್ಯಾಸ್ಸಿಯಾ,
ಜಕರಾಂಡ, ಸಂಪಗೆ.
ಎರಿತ್ರಿನಾ, ತಬೂಬಿಯಾ -
ಕೆಂಪು ಕಿತ್ತಿಳೆ ನೀಲಿ
ನೇರಿಳೆ, ಅರಿಸಿನ :
ರಂಗುರಂಗಿನ ಛತ್ರಿ,
ಪಂಜು, ಧಾತ್ರೀಹವನ,
ಚಳಿ ಮಂಜು ಬೆರೆತ
ಹಿತಮಿತ ಬಿಸಿಲು,
ಶಾಲೆಯ ಹುಡುಗ -

ಹುಡುಗಿಯರ ತುಂಟು ನಗೆ,
ಚೆಲ್ಲಾಟ.

ಆದರೆ ಇದನ್ನೆಲ್ಲಾ
ಖಂಡಿತಾ ನೋಡಬೇಡ.
ಒಗೆದಿಕ್ಕು ಪಕ್ಕ.
ನಿಂತು ನಿಟ್ಟಿಸಲಿಕ್ಕೆ
ಇದು ಕಾಲವಲ್ಲ,
ಕಾಲವೂ ಇಲ್ಲ.

ಏಕೆ ಉಬ್ಬಸ,
ಒಳಗುದಿ,
ಬೇಗುದಿ ?
ಏತಕ್ಕೆ ಧಾವಂತ ?
ಕಳೆದ ಯಾತರದೊ
ಎಡೆಬಿಡದ ಹುಡುಕಾಟ ?
ಸಾಕು ಅಧಿಕ ಪ್ರಸಂಗ.
ಹತ್ತಿಕ್ಕು ಬೇಗ.

ಇಂಥ ವೈರಸ್ ಪ್ರವೇಶಕ್ಕೆ
ಎಡೆಗೊಟ್ಟರೆ ಅಪಾಯ.
ಯೋಚಿಸುವುದಕ್ಕೂ
ಕತ್ತೆತ್ತಿ ನಿಟ್ಟಿಸಲಿಕ್ಕೂ
ಖಂಡಿತಾ ಸಮಯವಿದಲ್ಲ,
ಸಮಯವಿಲ್ಲ.

ಬೆಳಗಾಗ
ಆಕಳಿಸಿ
ಬಾಯಿಗೆ ಚಿಟಿಕೆ ಹೊಡೆದು
'ಶಿವಶಿವಾ ಹರಿಹರೀ'
ಹೇಳುತ್ತಿರುವಾಗಲೇ
ಗಂಟೆ ಏಳು !
ಬಿಸಿಲಿನ ಕೋಲು
ಕಿಟಕಿ ಕಂಬಿಯ ದಾಟಿ
ಒಳನುಗ್ಗಿದೆ.
ಎಂಟರ ಬಸ್ಸು
ತಪ್ಪಿದರೆ ಬೇಸ್ತು !
ಅಷ್ಟರಲ್ಲೇ ಕಾಫಿ
ಅಭಿಷೇಕ,
ಮಾರ್ಜನ :

ತಿಂಡಿ ಗಬಗಬ,
ತುತ್ತಿನ ಚೀಲ.
ಹೊರಡು ಓಟ !
ರಸ್ತೆ ದಾಟಿದ ಮೇಲೆ
ಬಸ್ಸಿನೆಡೆ ನಿಲುಗಡೆ.
ಅಲ್ಲಿ ತುಸು ಸುಧಾರಿಸಿಕೊ.
ಕೆಂಪು
ಕಿತ್ತಿಳೆ
ಹಸುರು
ದೀಪಗಳ ಮಿಡಿತ,
ಪೋಲೀಸು ಪೇದೆಯ ಸಿಳ್ಳೆ -
ಎಲ್ಲವೂ ನಿಶ್ಚಿತ.
ಬಸ್ಸು ಬಂತದೊ !
ಓಡು !
ಏರಿಕಕೋ.
ಗೋಲಿಗಭಿಮುಖ ಚಂಡು :
'ಆಡುವವನೆಸೆವಂತೆ ಬೀಳ್ವ ಚೆಂಡಿಗದೇಕೆ
ಆಟದೊಳಗಣ ಸೋಲು ಗೆಲುವುಗಳ ಗೋಜು ?'

ಸಂಜೆ ಆರರ ವರೆಗು
ಅಳೆದು ಸುರಿ.
ಮತ್ತೆ ಭರತದ ಇಳಿತ -
ಯಥಾಪ್ರಕಾರ.
ಸವದ
ಬಾಳಿನ
ಚಕ್ರ -
ದಿನ್ನೊಂದು ಉರುಳು.
ರಂಗುರಂಗಿನ ಛತ್ರಿ,
ಪಂಜು,
ಬಿಸಿಲಿನ ಕೋಲು -
ಬೇಡ ಅದೆಲ್ಲ.
ನೋಡುತ್ತ
ನಿಲ್ಲಲಿಕೆ
ಕಾಲವಿಲ್ಲ.
ಇದು ಸ -
ಕಾಲವಲ್ಲ.

ವಿಶ್ಲೇಷಣೆ :

ಪ್ರತಿದಿನವೂ ರಸ್ತೆ ದಾಟುವುದನ್ನು ರೂಪಕವಾಗಿಟ್ಟುಕೊಂಡು ಕವಿ ಎಚ್ಚೆಸ್ಕೆ ಅವರು ಈ "ಬದುಕು" ಎಂಬ ಕವನವನ್ನು ರಚಿಸಿ, ಅದರಲ್ಲಿ ಮನುಷ್ಯರ ಯಾಂತ್ರಿಕ ಬದುಕನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ!

ಬದುಕು ಎನ್ನುವುದೇ ಒಂದು ಪಯಣ. ಈ ಪಯಣದಲ್ಲಿ ಅನೇಕ ರಸ್ತೆ, ತಿರುವುಗಳನ್ನು ದಾಟಬೇಕಾಗುತ್ತದೆ, ಹಾಗೆ ದಾಟುವಾಗ ತುಸು ಎಚ್ಚರ ಎಂದು ಎಚ್ಚರಿಸಿದ್ದಾರೆ ಕೂಡ!

ರಸ್ತೆ ದಾಟುವಾಗ ಎಡಕ್ಕೆ ಬಲಕ್ಕೆ ಮತ್ತೆ ಎಡಕ್ಕೆ ನೋಡಿ ದಾಟಬೇಕು. ಏಕೆಂದರೆ, ರಸ್ತೆಯಲ್ಲಿ ನಾನಾ ವಿಧದ ವಾಹನಗಳ ಪ್ರವಾಹವೇ ಇರುವುದು. ಸ್ವಲ್ಪ ಎಚ್ಚರ ತಪ್ಪಿದರೂ ಅಪಘಾತ ಸಂಭವಿಸ ಬಹುದು!

ಬದುಕಿನಲ್ಲೂ ಹೀಗೇ ಅಲ್ಲವೇ! ಸ್ವಲ್ಪ ಹೆಜ್ಜೆ ತಪ್ಪಿದರೂ ಬದುಕೇ ಏರುಪೇರಾಗಬಹುದು. ಹಾಗೆಂದು ಹೆಜ್ಜೆ ಮುಂದೆ ಇಡದೇ ಯೋಚಿಸುತ್ತಾ ನಿಲ್ಲಲಿಕ್ಕೆ ಆಗುವುದಿಲ್ಲ! ಏಕೆಂದರೆ ಕಾಲ ನಮಗಾಗಿ ತಡೆದು ನಿಲ್ಲುವುದಿಲ್ಲ. ಕಾಲದ ಜೊತೆ ನಾವೇ ಸೆಣಸಬೇಕು, ಓಡಬೇಕು! ಒಂದು ವೇಳೆ ನಾವೇ ತಡೆದು ನಿಂತರೆ, ನಾವು ಹಿಂದೆಯೇ ಉಳಿದು ಹೋಗುತ್ತೇವೆ. ಬೇರೆಯವರು ನಮ್ಮನ್ನು ದಾಟಿಕೊಂಡು ಹೋಗುವರು.

ಈ ಪಯಣದ ಹಾದಿಯಲ್ಲಿ ಏನೆಲ್ಲಾ ಇದೆ ಎಂದು ಅಚ್ಚರಿಯಿಂದ ಪ್ರಾಚಾರ್ಯ ಎಚ್ಚೆಸ್ಕೆ ಗಮನಿಸುತ್ತಾರೆ!

ರಸ್ತೆ ಬದಿಯಲ್ಲಿ ನಾನಾ ವಿಧವಾದ ಬಣ್ಣ ಬಣ್ಣದ ಸುಂದರ ಹೂವುಗಳು ಇರುತ್ತವೆ. ಹಾಗೆಯೇ, ಅನೇಕ ವಿಧವಾದ ಅಡ್ಡಿ ಆತಂಕಗಳೂ ಇರುತ್ತವೆ. ಇವುಗಳನ್ನು ಎದುರಿಸಿ, ನಿಭಾಯಿಸಿ ಮುಂದೆ ಸಾಗುವುದೆಂದರೆ ಪ್ರವಾಹದ ವಿರುದ್ಧ ಈಜುವಂತೆಯೇ! ಹಾಗೆ ಈಜುವುದಕ್ಕೆ ಎದೆಗಾರಿಕೆ ಬೇಕು, ಕೌಶಲ್ಯ ಇರಬೇಕು, ಸಾಮರ್ಥ್ಯ ಇರಬೇಕು.

ಬದಲಿಗೆ, ಸುಲಭದ ಹಗುರವಾದ ಹಾದಿಯೆಂದರೆ ಪ್ರವಾಹದ ಗುಂಟವೇ ಅದು ಸೆಳೆದತ್ತ, ಗೊತ್ತು ಗುರಿ ಇಲ್ಲದೇ ಸಾಗುವುದು. ನಮ್ಮ ಗುರಿ ಮರೆತು ಬಿಡುವುದು. ನಮ್ಮ ಗುರಿಯತ್ತಲೇ ಸಾಗಬೇಕೆಂದರೆ, ಅಡ್ಡಿ ಆತಂಕಗಳನ್ನು ನಿವಾರಿಸಿ, ನಿಭಾಯಿಸಿ, ಆಕರ್ಷಣೆಗಳನ್ನು ಬದಿಗೆ ತಳ್ಳಿ ದಾಟುವ ದುಸ್ಸಾಹಸವನ್ನು ಮಾಡಲೇ ಬೇಕು. ಈ ಮಂತ್ರವನ್ನೇ ಪ್ರಾಚಾರ್ಯ ಎಚ್ಚೆಸ್ಕೆ ನವಿರಾಗಿ ಕವನದ ಮೂಲಕ ತಿಳಿಸಿರುವರು ಎಂದೆನಿಸುತ್ತದೆ ನನಗೆ!

ಬದುಕಿನ ಆಕರ್ಷಣೆಗಳಿಗೆ ಸಿಲುಕಿಕೊಂಡು ಅವುಗಳಿಗೆ ಬಲಿಯಾಗದೇ, ಅವುಗಳಿಂದ ತಪ್ಪಿಸಿಕೊಂಡು ನಿನ್ನ ಗುರಿಯತ್ತ ಧೃಡಚಿತ್ತದಿಂದ ಸಾಗು ಎಂದು ಎಚ್ಚೆಸ್ಕೆ ಎಚ್ಚರಿಸುತ್ತಾರೆ.

ಈ ಆಕರ್ಷಣೆಗಳಲ್ಲಿ ಏನೆಲ್ಲಾ ಇದೆ ಎಂದು ವಿವರಿಸುತ್ತಾರೆ ಕವಿ ಎಚ್ಚೆಸ್ಕೆ! ಗುಲ್ಮೊಹರ್, ಜಕರಾಂಡ, ಸಂಪಿಗೆ, ಎರಿತ್ರಿನಾ, ತಬೂಬಿಯಾ ಇತ್ಯಾದಿ ಹೂವುಗಳು! ಮತ್ತೆ ಅವುಗಳ ಬಣ್ಣಗಳು! ಕೆಂಪು, ಕಿತ್ತಳೆ, ನೀಲಿ, ನೇರಳೆ, ಅರಿಶಿನ ಇತ್ಯಾದಿ! ಮತ್ತೆ ಹುಡುಗ ಹುಡುಗಿಯರ ಚೆಲ್ಲಾಟ, ತುಂಟು ನಗೆಯೂ ಇರಬಹುದು!

ಇವನ್ನೆಲ್ಲ ಆಸ್ವಾದಿಸುತ್ತ, ನಿನ್ನ ಗುರಿ ಮರೆತು ನಿಲ್ಲಬೇಡ, ಪಕ್ಕಕ್ಕೆ ಸರಿಸಿ ಗುರಿಯತ್ತ ಸಾಗು. ಏಕೆಂದರೆ, ನಿಂತು ನಿಟ್ಟಿಸಿ ನೋಡುವುದಕ್ಕೆ ಇದು ಕಾಲವಲ್ಲ, ಕಾಲವೂ ಇಲ್ಲ ಎಂದು ಸೊಗಸಾಗಿ ಹೇಳುತ್ತಾರೆ!

ತಡವಾಯಿತು ಎಂದು ನಿನ್ನ ಗತಿ ಹೆಚ್ಚಿಸಿ ಉಬ್ಬಸ ಪಡಬೇಡ, ಧಾವಂತ ಪಡಬೇಡ, ವ್ಯರ್ಥ ಬೇಗುದಿಗಳಲ್ಲಿ ಬೇಯಬೇಡ, ಗತಿಸಿ ಹೋದುದನ್ನು ನೆನಸುತ್ತ ಪರಿತಪಿಸುತ್ತ ನಿಂತು ಬಿಡಬೇಡ, ಏಕೆಂದರೆ, ಹಾಗೆ ಮಾಡುವುದಕ್ಕೆ ಇದು ಸಮಯವಲ್ಲ, ಸಮಯವೂ ಇಲ್ಲ ಎಂದು ಮತ್ತೆ ಎಚ್ಚರಿಸುತ್ತಾರೆ!

ಇಷ್ಟೆಲ್ಲಾ ಹೇಳಿ, ಬದುಕಿನ ಯಾಂತ್ರಿಕತೆಯತ್ತ ನಮ್ಮ ಗಮನ ಸೆಳೆಯುತ್ತಾರೆ.

ಬೆಳಿಗ್ಗೆ ಏಳುವಷ್ಟರಲ್ಲೇ ಘಂಟೆ ಏಳಾಗಿರುತ್ತದೆ. ಎಂಟಕ್ಕೆ ಬಸ್ಸು ಹಿಡಿಯಲೇ ಬೇಕಾದ ಧಾವಂತ! ತಪ್ಪಿದರೆ ಮತ್ತಷ್ಟು ವಿಳಂಬದ ಸಂಭವ. ಗಡಿಬಿಡಿಯಲ್ಲೇ ಕಾಫಿ ಸುರಿದುಕೊಂಡು, ಗಬಗಬನೆ ತಿಂಡಿ ತಿಂದು, ತುತ್ತಿನ ಚೀಲ ತುಂಬಿಕೊಂಡು ಓಡಬೇಕು! ರಸ್ತೆ ದಾಟಿ ಬಸ್ಸು ನಿಲ್ದಾಣದಲ್ಲಿ ತುಸು ಸುಧಾರಿಸಿಕೊಂಡು ಬಸ್ಸಿಗಾಗಿ ಕಾಯಬೇಕು. ಕಣ್ಣೆದುರಿಗೆ ಮತ್ತದೇ ಟ್ರಾಫಿಕ್ ದೀಪಗಳ ಚಲನೆ, ಪೋಲೀಸ್ ಪೇದೆಯ ಶಿಳ್ಳೆ! ಬಸ್ಸು ಬಂದಾಗ ಓಡೋಡುತ ಏರಿಕೋಬೇಕು!

ಈ ಯಾಂತ್ರಿಕ ಬದುಕನ್ನು ವಿವರಿಸುತ್ತಲೇ, ನವಿರಾಗಿ ಅಧ್ಯಾತ್ಮವನ್ನೂ ಉಪದೇಶಿಸುತ್ತಾರೆ!

ನೀನು ಆಟಗಾರ ಎಸೆದಂತೆ ಬೀಳುವ ಚೆಂಡು ಮಾತ್ರ! ನಿನಗೇಕೆ ಆಟದ ಸೋಲು ಗೆಲುವಿನ ಚಿಂತೆ! ನಿಶ್ಚಿಂತನಾಗಿ ನಿನ್ನ ಕೆಲಸ ನೀನು ಮಾಡು ಎಂದು!

ಗೀತೆಯಲ್ಲೂ ಇದನ್ನೇ ಅಲ್ಲವೇ ಕೃಷ್ಣ ಹೇಳಿರುವುದು?
ಕರ್ಮಣ್ಯೇವ ಅಧಿಕಾರಃ ತೇ
ಮಾ ಫಲೇಷು ಕದಾಚನ.

ಇಲ್ಲಿ ಆಟಗಾರ ಆ ಭಗವಂತ! ನಾವು ಅವನ ಕೈಯಲ್ಲಿನ ಚೆಂಡು ಮಾತ್ರ. ಅವನು ಒಗೆದತ್ತ ಬೀಳುವುದು ನಮ್ಮ ಕೆಲಸ! ಫಲಾಫಲಗಳನ್ನು ಅವನಿಗೇ ಒಪ್ಪಿಸಿ ನಿಶ್ಚಿಂತರಾಗಿ ಎಂದು.

ಈ ಪರಿಯ ಬದುಕಿನಲ್ಲಿ ದಿನ ಉರುಳುತ್ತದೆ. ಇದನ್ನು ಸವೆದ ಬಾಳಿನ ಚಕ್ರದ ಇನ್ನೊಂದು ಉರುಳು ಎನ್ನುತ್ತಾರೆ ಎಚ್ಚೆಸ್ಕೆ! ಇದನ್ನೆಲ್ಲ ನೋಡುತ್ತ ನಿಲ್ಲುವುದಕ್ಕೆ ಇಂದು ಕಾಲವಿಲ್ಲ, ಇದು ಸಕಾಲವೂ ಅಲ್ಲ ಎಂದು ಹೇಳುತ್ತಾರೆ!

ಇದನ್ನು ಓದಿದಾಗ ನನಗೆ ಭಗವದ್ಗೀತೆಯ ಒಂದು ಧ್ಯಾನ ಶ್ಲೋಕ ನೆನಪಾಯಿತು!

ಮಹಾಭಾರತ ಯುದ್ಧದ ಕುರಿತು ಹೇಳಿದ ಶ್ಲೋಕವಿದು!

ಭೀಷ್ಮ ದ್ರೋಣ ತಟಾ
ಜಯದ್ರಥ ಜಲಾ
ಗಾಂಧಾರ ನೀಲೋತ್ಪಲಾ
ಶಲ್ಯ ಗ್ರಾಹವತೀ ವಶೀ
ಕೃಪೇಣ ವಹಿನೀ
ಕರ್ಣೇನ ವೇಲಾಕುಲಾ
ಅಶ್ವತ್ಥಾಮ ವಿಕರ್ಣ
ಘೋರ ಮಕರಾ
ದುರ್ಯೋಧನಾವರ್ತಿನೀ
ಸೋತ್ತೀರ್ಣಂ ಖಲು

ಪಾಂಡವೈಃ ರಣನದೀ
ಕೈವರ್ತಕಃ ಕೇಶವಃ

ಹಾಗೆಂದರೆ, ಭೀಷ್ಮ ದ್ರೋಣರು ಇಕ್ಕೆಲೆಯ ದಡಗಳು,
ಜಯದ್ರಥನು ನದಿಯ ನೀರು
ಶಲ್ಯನು ಅದರಲ್ಲಿನ ದೊಡ್ಡ ಮೀನು,
ಕೃಪನು ನೀರಿನ ಸೆಳೆವು,
ಕರ್ಣನು ಭಯಂಕರ ಅಲೆ,
ಅಶ್ವತ್ಥಾಮ ವಿಕರ್ಣರು
ಕ್ರೂರ ಮೊಸಳೆಗಳು,
ದರ್ಯೋಧನನು ಸುಳಿ, ಇಂತಿರ್ಪ ಮಹಾಭಾರತ ಯುದ್ಧ ಎಂಬ ರಣನದಿಯನ್ನು
ಪಾಂಡವರು ಯಶಸ್ವಿಯಾಗಿ
ದಾಟಿದರು.
ಹಾಗೆ ದಾಟಿಸಿದವನು ಶ್ರೀ ಕೃಷ್ಣ!

ಈ ಶ್ಲೋಕಕ್ಕೂ ಎಚ್ಚೆಸ್ಕೆ ಅವರ ಈ ಕವನಕ್ಕೂ ಎಷ್ಟು ನಿಕಟವಾದ ಹೋಲಿಕೆ ಇದೆ ಎಂದು ಗೊತ್ತಾಗುತ್ತದೆಯಲ್ಲವೇ! ನಿಜ, ನಮ್ಮ ಬದುಕೂ ಕೂಡ ಒಳಿತು ಕೆಡುಕುಗಳ ನಡುವೆ, ಅನುಮಾನ ಬಹುಮಾನಗಳ ನಡುವೆ ನಿರಂತರವಾಗಿ ನಡೆಯುವ ಹೋರಾಟವೇ! ಇವೆಲ್ಲವನ್ನೂ ಯಶಸ್ವಿಯಾಗಿ ಎದುರಿಸಿ ಮುಂದೆ ಸಾಗಿದರೇ ಗುರಿ ಸಾಧನೆ ಅಲ್ಲವೇ? ಹೀಗಾಗಿ ಸಾಗುತ್ತಲೇ ಇರೋಣ ಮುಂದೆ ಮುಂದೆ! ಏಕೆಂದರೆ, ನಿಂತು ನೋಡಲಿಕ್ಕೆ, ಯೋಚಿಸಲಿಕ್ಕೆ ಇಂದು ಕಾಲವಿಲ್ಲ, ಸಕಾಲವೂ ಅಲ್ಲ!

ಮೇಲುನೋಟಕ್ಕೆ ಬಹಳ ಸರಳ, ನೇರ ಎನ್ನಿಸುವ ಆದರೆ ಆಳವಾಗಿ ಇಣುಕಿದಾಗ ಗಹನ ಅರ್ಥ ಮತ್ತು ವೇದಾಂತವನ್ನು ಒಳಗೊಂಡಿರುವ ಸೊಗಸಾದ ಕವನ ರಚಿಸಿದ ಪ್ರಾಚಾರ್ಯ ಎಚ್ಚೆಸ್ಕೆ ಅವರಿಗೆ ನಮೋನ್ನಮಃ!

ಕವನ - ಧೂಮಕೇತು - ಶ್ರೀಮತಿ ಗೌರಾಂಬ ವೆಂಕಟಸುಬ್ಬಯ್ಯ

ತಲೆ ಪೂರ ಬರಿ ಮಡ್ಡಿ,
ಭ್ರೂಣ ತಮೋರಾಶಿ.
ಮಂಜುಗಡ್ಡೆ.
ಪರವಲಯ ಕಡಲಲ್ಲಿ
ನೆಲೆಯಿಲ್ಲದಲೆದಾಟ.
ಬಂತು ಯೋಗಾಯೋಗ :
ಸೂರ್ಯರೇತಸ್ಪರ್ಶ,
ರಸಸ್ಪಂದ :
ಸಹಸ್ರದಳ ಪದ್ಮ ಪರಾಗ
ರಾಗ ರಂಜಿತವಾದ
ಅಂಡಾಂಡ ಕೋಶ.
ಹಿಮ ಕರಗಿ ಹಬೆಯಾಗಿ
ಭುಗಿಭುಗಿಸಿ ನೆಗೆದಾಚೆ
ಬಣ್ಣ ಬಣ್ಣದ ಬೆಡಗು,
ಬೆಳಕಿನ ಗಾಲಿ,
ವೇಗಾವೇಶಲಾಂಗೂಲ.
ಉಲ್ಲೋಲಕಲ್ಲೋಲ ಹೊನ್ನ ಹೊಳಪು.

ಅನೂಹ್ಯಲೋಕದನಾಹೂತ,
ಕರಸ್ಥಲ ಲಿಂಗ,
ಸಂಗ್ರಹ ವಿಶ್ವ.
ಹುಟ್ಟು ಸಾವುಗಳ ಸಂಕೇತ, ಸಂಗಾತಿ,
ಜೀವನೌಕೆ.
ಕೋಟಿಕೋಟಿ ಬೀಜ
ತೂರಿ ಬಿತ್ತುವ ಭಾರಿ
ಬೂರುಗದ ವೃಕ್ಷ.
ಬುಡ ಕಿತ್ತು ಹಾರಿ
ಹೌಹಾರಿ ಹೋರಿ
ಹಾದುಹೋದಲ್ಲೆಲ್ಲ
ಬಲು ಗಾಬರಿ -
ಅಪರೂಪದನುಭವ,
ಹೇಷ್ಯ ಹೇಷಾರವ.

ಆರಂಭದಲಿ ಎಲ್ಲ
ಬರಿ ಮಬ್ಬು,
ಒಂದೇ ತಾನ,
ಜೀರುಂಡೆ ಗಾನ.

ಏನಿಲ್ಲ, 'ಇಲ್ಲ'ವೂ ಇಲ್ಲ.
'ಆಗಿಲ್ಲ, ಹೋಗಿಲ್ಲ,
ಮೇಗಿಲ್ಲ, ಕೆಳಗಿಲ್ಲ,
ತಾಗಿಲ್ಲ, ತಪ್ಪು ತಡೆಯಿಲ್ಲ.'
ದಡ ಕಡಲು ಇರವಳಿವು ಹಗಲು ಇರುಳು,
ಗಾಳಿ ಆಕಾಶಗಳ ಮೇಲೆಂಟು ಬೆರಳು,
ಇಲ್ಲದ್ದರೊಳಗಿದ್ದು ಮಲಗೆದ್ದು ಹಬ್ಬಿದ ಶೂನ್ಯ.
ಮಸೆದು ನೊರೆ ಬುದ್ಬುದ ದೇಹ,
ಬಿಸಿ ಮೋಹ, ಗೇಹ,
ಡೋಲು, ಗಜಾಲು.
ಹೇಗಾಯಿತು ಇದೆಲ್ಲ ?
'ತುಂಬು ಬಟ್ಟಲ.
ಮುಳುಗಿಸು, ಅದರೊಳಗೆ ಈ ಪ್ರಶ್ನೆಯೆಲ್ಲ.'

ಆಕಾಶದೆತ್ತರಕ್ಕೆ ಬೆಳೆದ ತಾಯಿಯ
ಸ್ತನ್ಯ ಪೀಯೂಷದಾನಂದ,
ಪೂತನಿಯ ಕಂದ.
ತೊಟ್ಟು ಬದಲಿಕೆ, ಚೀರು, ರಂಪಾಟ,
ಒದೆದು ಕೆಡಹುವ ದುರುಳ ಚೇಷ್ಟೆ.
ಬೆಳದು ಬೃಹದಾಕಾರ ಮರಕೋತಿಯಾಟ,
ಮಧುವನ ಸೂರೆ.

ಆಕಾಶವೇದಿಕೆಯ ಈ ಮಹಾದ್ಭುತಕ್ಕೆ,
ಬೆಳಕಿನತ್ತಲೆ ತಿವಿದ ಅಧಿಕಪ್ರಸಂಗಕ್ಕೆ
ತಕ್ಕ ಶಿಕ್ಷೆ.
ಥಳಥಳ ಬಾಲ, ಹೊಳೆಗೊಂಡೆ
ದಿಕ್ಪಾಪಾಲು.
ಗಂಟೆ ಬಾರಿಸಿದಾಗ ತಿರುತಿರುಗಿ ಮೆರದರೂ
ಒಂದೊಂದು ಸಾರಿಗೂ ಕಳಾಹೀನ.

ಕೊನೆಗೆ ನಾಪತ್ತೆ !
ಎಲ್ಲಿ ಹೋಯಿತು ಮತ್ತೆ ?
ಬಾರಿಸಿತ್ತೇ ಗಂಟೆ
ಕೊನೆಯ ನೆಗೆತಕ್ಕೆ ?

ಪ್ರಶ್ನೆಯೇ ಮರುಕಳಿಸಿ
ನೆಲಕ್ಕುದುರಿದ ಹಾಗೆ
ಚಿಮುಕಿಸಿದ ಹನಿ ಬೆಳಕು
ಚೆಲ್ಲಾಡಿದೆ.
ಆತ್ಮಹತ್ಯೆಯ ನೆರಳು

ಹರಿದಾಡಿದೆ.
ಸೊನ್ನೆ ಬಂದಿತು,
ಸೊನ್ನೆ ಹೋಯಿತುಳಿಯಿತ ಸೊನ್ನೆ ?

ಕವನ - ಹಸ್ತರೇಖೆ - ಶ್ರೀಮತಿ ಶ್ರವಣಕುಮಾರಿ ಟಿ.ಎಸ್

ಛತ್ರಿ ಮರ, ಗಟ್ಟಿ ಬುಡ,
ತಂಪು ಚೆಲ್ಲುವ ನೆರಳು,
ಹಕ್ಕಿ ಪಿಕ್ಕೆಯ ಬೆಳ್ಳಿ -
ಹಳದಿ ಚಿತ್ತಾರ.
ಬುಡ ಒರಗಿ ಕುಳಿತವನು
ಹಸ್ತರೇಖಾ ನಿಪುಣ -
ಬದುಕಿನವ್ಯಕ್ತಕ್ಕೆ
ಭಾಷ್ಯಕಾರ.

ಬೆಂಗಡೆಗೆ ಆಸ್ಪತ್ರೆ,
ಸೂರ್ಯನುತ್ತರ ಯಾತ್ರೆ
ಕಾಯ್ದು ಮಲಗಿದ ಭೀಷ್ಮ
ಜನರ ಶಯ್ಯೆ.
ಮುಂದೆ ಹಾದಿಯ ತುಂಬ
ಸದ್ದು ಗದ್ದಲ ತವಕ -
ಮುದಿ ಹರೆಯ ಹೊರೆ ಕನಸು
ಎದೆಯ ಪೂರ.

ಬನ್ನಿ ತೋರಿಸಿ ಕೈಯ.
ಹೆದರದಿರಿ, ಅಳುಕೇಕೆ ?
ಇಂದು ಮುಂದಿನದಕ್ಕೆ
ಅಸ್ತಿಭಾರ.
ಒಂದು ಭರವಸೆ ಮಾತು,
ಒಂದೆರಡು ಹಿತನುಡಿ -
ಎದೆ ಹಗುರ, ಉತ್ಸಾಹ,
ಕಳೆದು ದುಗುಡ.

ನೋಡಿ, ಅಂಗೈಯ ಗೆರೆ -
ವಿಧಿಯ ರೇಖಾಲೇಖ :
ಬಾಳ ಮುನ್ನುಡಿಗೊಂದು
ಸನ್ನೆಗೋಲು.
ಇದೇ ಬದುಕಿನ ರೇಖೆ,
ಐಶ್ವರ್ಯ, ಆಯುಸ್ಸು,
ಅನ್ನ, ವಿದ್ಯೆ, ಪ್ರೇಮ,
ಆಸ್ತಿ, ಕ್ಷೇಮ.

ಬ್ರಹ್ಮ ಬಿಡಿಸಿದ ರೇಖೆ :

ಬಿಳುಪಲ್ಲ, ಕಪ್ಪಲ್ಲ,
ಹಳದಿ, ಕಂದೂ ಅಲ್ಲ ;
ಮೇಲು ಕೀಳು,
ಜಾತಿ ಮತ ಕುಲವಿಲ್ಲ,
ವರ್ಗಭೇದವೆ ಇಲ್ಲ,
ಸ್ನೇಹ ಬೆಳಸುವ ನವುರು
ರೇಷ್ಮೆಯ ಎಳೆ.

ಬಿದಿಗೆ ಚಂದ್ರನ ಬಳುಕು,
ಗಿರಿಯ ಶಿಖರದ ಮೆಲುಪು.
ಬೆಟ್ಟ ಬಳಸುವ ರಸ್ತೆ -
ಯೇರು ಗೀರು,
ಹಸುರು ಬಯಲಿನ ಪಾದ
ತೊಳೆದು ಹರಿಯುವ ಹೊಳೆಯ ಕಡಲಿನತ್ತಣ ಪಯಣ -
ರಾಮಬಾಣ.

ಹುಟ್ಟಿನಿಂದಲೆ ಜೊತೆಗೆ
ಎಡೆಬಿಡದೆ ನಡೆನಡೆದು
ಕೊನೆಗು ಕೂಡದ ಚಾಳಿ
ಇವಕ್ಕಿಲ್ಲ.
ಒಂದು ಒಂದನ್ನರಸಿ
ಕೈ ಹಿಡಿದು ಕೆಳೆಯಾಗಿ
ಒಂದಾಗಿ ಸಾಗುವುದೆ
ಇಲ್ಲಿ ನಿಯಮ.

ಹಸ್ತರೇಖಾಲೇಖ
ಯಾರ ಕೃತಿಯೂ ಅಲ್ಲ.
ಕಾಳಗದ ಕಲೆಯಲ್ಲ.
ಗೋಳುಕರೆಯಲ್ಲ.
ಕತ್ತಿಗಳ ಮೊನೆಯಿಂದ
ನೆಲ ಕೊರೆದ ಗೆರೆಯಲ್ಲ,
ಸಾಮ್ರಾಜ್ಯ ಗಡಿಯಲ್ಲ,
ಹೊಂಡವಲ್ಲ.

ಬದುಕು, ನೆಲ, ಮಾನವತೆ,
ಆಯುಸ್ಸು, ಆರೋಗ್ಯ,
ಆದರ್ಶ, ಅಭಿಮಾನ,
ಸ್ನೇಹ, ಪ್ರೀತಿ -
ಎಲ್ಲವೂ ಎಲ್ಲರಿಗೂ
ಸಮವೆಂದು ಸಾರುತಿವೆ, ಬದುಕಿನಾಶಾವಾದ

ಸೂಸುತ್ತಿವೆ.

ವಿಶ್ಲೇಷಣೆ:

ಹುಟ್ಟಿನಿಂದಲೇ ಪ್ರತಿಜೀವಿಯ ಅಂಗೈಯಲ್ಲೂ ಮೂಡಿರುವ ರೇಖೆಗಳನ್ನು ವಿಶ್ಲೇಷಿಸಿ ಹೇಳುವ ಹಸ್ತ ಸಾಮುದ್ರಿಕ ಶಾಸ್ತ್ರದ ಬಗ್ಗೆ ಈ ಕವಿತೆ ಹೇಳುತ್ತಾ ಹೋಗುತ್ತದೆ.

`ಛತ್ರಿ ಮರ ಗಟ್ಟಿ ಬುಡ' ಎನ್ನುವಲ್ಲಿ ಈ ಶಾಸ್ತ್ರ ಪುರಾತನವಾದದ್ದು ಹಾಗು ಇದರ ಬೇರುಗಳು ಬಹಳ ಆಳವಾಗಿದ್ದು ಬಹುಜನರ ನಂಬಿಕೆಗೆ ಪಾತ್ರವಾದದ್ದು ಎನ್ನುವ ಸೂಚನೆಯಿದೆ.  `ಹಕ್ಕಿಪಿಕ್ಕಿಗಳ ಬೆಳ್ಳಿ ಹಳದಿ ಚಿತ್ತಾರ ಅಲ್ಲಲ್ಲಿ' ಇದರ ಬಗ್ಗೆ ದೂಷಿತ ಮಾತುಗಳು ಬೀಳುತ್ತಿದ್ದರೂ `ಬುಡ ಒರಗಿ ಕುಳಿತವನು ಬದುಕಿನವ್ಯಕ್ತಕ್ಕೆ ಭಾಷ್ಯಕಾರ' ಎನ್ನುವ ಸಾಲುಗಳು ಹೇಳುವ ನಂಬಿಕೆಯ ಬುಡವನ್ನೊರಗಿ ಕುಳಿತಿರುವ ಹಸ್ತರೇಖಾ ನಿಪುಣನಾದ ಜ್ಯೋತಿಷಿ ಅವ್ಯಕ್ತ ಭವಿಷ್ಯಕ್ಕೆ ಭಾಷ್ಯಕಾರನಾಗಿದ್ದಾನೆ.

ಮರಣಶಯ್ಯೆಯಲ್ಲಿರುವವನಿಗೆ ಆಸ್ಪತ್ರೆಯೇ ಆಶ್ರಯ. ಸಾವೆಳೆಯುತ್ತಿದ್ದರೂ ಭೀಷ್ಮನಂತೆ ಉತ್ತರಾಯಣಕ್ಕಾಗಿ ಕಾದು ಸ್ವರ್ಗ ಸೇರಬೇಕೆಂಬ ಉದ್ದೇಶ ಅವನಿಗೆ. ಹಾಗೆಂದು ಮುಂದಿರುವ ದಿನಗಳೇನೂ ಸುಖಕರವಾಗಿಲ್ಲ, ಅನಾರೋಗ್ಯದ ಜೊತೆಜೊತೆಗೇ ಹಲವು ಪೀಡೆಗಳು, ಆತಂಕಗಳು ಭಾದಿಸುತ್ತಲೇ ಇದ್ದರೂ, ದೇಹ ಮುದಿಯಾಗಿ ಜರ್ಜರಿತವಾಗಿದ್ದರೂ ಇನ್ನೂ ಏನೇನೋ ನೋಡಬೇಕೆಂಬ ಕನಸು ಮಾತ್ರ ಎದೆಯನ್ನು ತುಂಬಿಕೊಂಡಿದೆ; ಆದಷ್ಟೂ ಏನೇನೋ ನೆಪವೊಡ್ಡಿ ಸಾವನ್ನು ಮುಂದೂಡಲು ಬಯಸುತ್ತಿದೆ.

ಇಂತಹ ದುಗುಡಗಳು ತುಂಬಿದ್ದಾಗ ಜ್ಯೋತಿಷಿಗಳ ಮೊರೆ ಹೋಗುವುದು ಅಸಹಜವೇನಲ್ಲ. ಏನು ಹೇಳಿಬಿಡುವರೋ ಅನ್ನುವ ಭಯವಿಲ್ಲದೆ, ಅಳುಕಿಲ್ಲದೆ ಏನೋ ಒಂದು ಭರವಸೆಯ, ಹಿತವಾದ ಮಾತು ಒಬ್ಬ ಅವರಿಂದ ಬಂದರೆ ಎದೆಯ ಭಾರ ಎಷ್ಟೋ ಕಡಿಮೆಯಾಗುತ್ತದೆ. ನಾಳೆ ಮಾಡಬೇಕೆಂದುಕೊಂಡಿರುವ ಎಷ್ಟೋ ಕೆಲಸಗಳನ್ನು ಇಂದು ಮಾಡಿ ಮುಗಿಸಲು ಪ್ರೇರಕವಾಗುತ್ತದೆ, ಉತ್ಸಾಹ ಮೂಡುತ್ತದೆ.

ರೇಖೆಗಳನ್ನು ನೋಡಿ ಒಬ್ಬ ವ್ಯಕ್ತಿಯ ಬದುಕಿನ ಎಲ್ಲ ವಿದ್ಯಮಾನಗಳನ್ನು ಹೇಳುವ ನಿಪುಣ ಈತ. ವಿಧಿಯ ಸಂಪೂರ್ಣ ಲೆಕ್ಕಾಚಾರವೇ ಈ ರೇಖೆಗಳ ವಿನ್ಯಾಸದಲ್ಲಡಗಿದೆ. ಸಂಭಾವ್ಯ ವಿಷಯಗಳನ್ನು ಅರಿತುಕೊಳ್ಳುವುದಕ್ಕೆ ಹಸ್ತ ರೇಖೆಗಳು ಮೀಟುಗೋಲು. ಜೀವನ ಹೇಗೆ ಸಾಗುತ್ತದೆ, ಸಂಪತ್ತಿನ ಭಾಗ್ಯ ಎಷ್ಟಿದೆ, ಅಲ್ಪಾಯುಷಿಯೇ-ದೀರ್ಘಾಯುಷಿಯೇ, ಅನ್ನಕ್ಕೆ ಕೊರತೆಯಿಲ್ಲವೆ, ವಿದ್ಯೆ ಒಲಿಯುತ್ತದೆಯೇ, ಪ್ರೇಮ ಕೈಗೂಡುತ್ತದೆಯೇ, ಆಸ್ತಿ ಮಾಡುವ ಯೋಗವಿದೆಯೇ, ಯಾವ ಗಂಡಾಂತರಗಳೂ ಇಲ್ಲವೇ ಇಂತಹ ಎಲ್ಲ ವಿಷಯಗಳನ್ನೂ ಅಂಗೈಯ ರೇಖೆಗಳು ನಿರ್ಧರಿಸುತ್ತವೆ.

ಈ ರೇಖೆಗಳನ್ನು ಬ್ರಹ್ಮ ಲಿಖಿತವೆನ್ನುತ್ತಾರೆ. ಇವುಗಳಿಗೆ ಯಾವುದೇ ಜಾತಿ ಅಥವಾ ವರ್ಣ ತಾರತಮ್ಯವಿಲ್ಲ; ಲಿಂಗ ಭೇದವಿಲ್ಲ; ವರ್ಗ ಬೇಧವಿಲ್ಲ ವಿವಿಧ ರೇಖೆಗಳು ಮೂಡಿಸುವ ವಿಭಿನ್ನ ವಿನ್ಯಾಸಗಳಿಂದ ಬೇರೆ ಬೇರೆ ಸೂಚನೆಗಳು ಜೀವನದಲ್ಲಿ.

ಯಾವ ರೇಖೆಯೂ ಸರಳ ರೇಖೆಯಲ್ಲ – ಚಂದ್ರನಂತೆ ಡೊಂಕಿದೆ, ಶಿಖರದಂತೆ ಏರಿದೆ, ಬಳಸುಗಳು ಇವೆ, ಏರು ತಗ್ಗುಗಳಿವೆ. ಹುಟ್ಟಿನಿಂದ ಸಾವಿನೆಡೆಗೆ ಸಾಗುವ ಜೀವನ ಪಯಣದುದ್ದಕ್ಕೂ ನಡೆಯಬಹುದಾದ ಎಲ್ಲ ವಿಷಯಗಳ ಬಗೆಗೂ ದಿಕ್ಸೂಚಿಯಾಗುತ್ತದೆ.
ದಿನಗಳೆದಂತೆ ರೇಖೆಗಳು ಬದಲಾಗುವುದೂ ಇಲ್ಲ; ಮಾಸುವುದೂ ಇಲ್ಲ. ಜೀವಿಯ ಅಂತ್ಯದವರೆಗೂ ರೇಖೆ ರೇಖೆಗಳ ನಡುವಿನ ಸಂಬಂಧ ಅಂತೆಯೇ ಸಾಗುತ್ತದೆ. ಇವು ಎಂದೂ ತಮ್ಮ ಪಥವನ್ನು ಬದಲಿಸಿ ಇನ್ನೊಂದನ್ನು ಸೇರಿಕೊಂಡು

ಗೆಳೆತನ ಮಾಡಿಕೊಳ್ಳುವುದಿಲ್ಲ. ಹೇಗಿದೆಯೋ ಹಾಗೆಯೇ ಒಂದಾಗಿ ಕಡೆಯವರೆಗೂ ಸಾಗುವುದೇ ಹಸ್ತರೇಖೆಗಳ ನಿಯಮ.

`ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ' ಎನ್ನುವಂತೆ ಇವನ್ನು ಯಾರೂ ಬರೆಯಲಾರರು; ಇದಕ್ಕಾಗಿ ಯುದ್ಧ ಮಾಡಲಾಗದು, ಗೋಳಾಡಲಾಗದು, ಇದನ್ನು ಆಯುಧಗಳಿಂದ ಕೊರೆಯಲಾಗದು, ವಿಭಾಗಿಸಲಾಗದು, ಬದಲಿಸಲಾರರು. ಗೆರೆಗಳು ಅಸೀಮ. ಇದರಲ್ಲಿ ಯಾರದೂ ಅತಿಕ್ರಮ ಪ್ರವೇಶವೇ ಇಲ್ಲ.

ಯಾರ ಹಸ್ತದಲ್ಲಿ ಏನಿದೆಯೋ ಅದು ಅವರಿಗೆ ಮಾತ್ರವೇ. ಇದು ಸೂಚಿಸುವ ಬದುಕು, ಸಂಪತ್ತು, ಸ್ವಭಾವ, ಆಯಸ್ಸು, ಆರೋಗ್ಯ, ಸಾಧನೆ, ಪ್ರೀತಿ, ಅಭಿಮಾನ, ಸ್ನೇಹ ಎಲ್ಲವೂ ಆಯಾ ಹಸ್ತಕ್ಕೆ ಸೂಚಿಸಿದ ಫಲಗಳು ಮಾತ್ರವೇ. ರಾಜನಿಗಾಗಲೀ, ಭಿಕ್ಷುಕನಿಗಾಗಲೀ ರೇಖೆಯ ಫಲಗಳು ಬೇರೆಬೇರೆ ಇರುವುದಿಲ್ಲ. ಈ ವಿಷಯದಲ್ಲಿ ಎಲ್ಲರೂ ಸಮಾನರು ಎನ್ನುತ್ತಿದೆ ಕವಿತೆ.

ಕವಿತೆಯ ಬಹಳಷ್ಟು ಭಾಗ ೩ ೪ ೩ ; ೩ ೪ ೩; ೩ ೪ ೩ ಮತ್ತು ೪ ೪ ಈ ಲಯದಲ್ಲಿದೆ. ಇಡಿಯಾಗಿ ಛಂದೋಬದ್ಧವಾಗಲ್ಲದಿದ್ದರೂ ಮುಕ್ತಛಂದದಿಂದ ಸಾಗುತ್ತದೆ. ಸರಳವಾದ ಪದಗಳು ಕವಿತೆಯ ಆಶಯವನ್ನು ಸಮರ್ಥವಾಗಿ ಬಿಂಬಿಸುತ್ತಿವೆ. ಅವರವರ ಜೀವನ ಅವರವರ ಕರ್ಮಾನುಸಾರ ಎಂದು ಹೇಳಲು ಇಲ್ಲಿ `ಹಸ್ತ ಸಾಮುದ್ರಿಕ' ನೆಪವೇ? ರೇಖೆಗಳನ್ನು ಓದಿ ಅರ್ಥೈಸಲು ಹಸ್ತ ಸಾಮುದ್ರಿಕ ಒಂದು ಲಿಪಿಯೇ? ಕವಿತೆಯಲ್ಲಿ ಕವಿ ಈ ಶಾಸ್ತ್ರವನ್ನು ಸರಿಯೆಂದೂ ಹೇಳುತ್ತಿಲ್ಲ; ಸುಳ್ಳೆಂದೂ ಹೇಳುವುದಿಲ್ಲ. ಇಡಿಯ ಕವಿತೆಯಲ್ಲಿ ವಸ್ತುವಿಗೂ ತನಗೂ ಒಂದು ಅಂತರವನ್ನು ಕಾಯ್ದುಕೊಂಡು `ಇದು ಹೀಗಿದೆ' ಎನ್ನುವುದನ್ನು ಮಾತ್ರ ಹೇಳುತ್ತಾರೆ. ಒಂದು ಪರಂಪರಾಗತವಾದ ನಂಬಿಕೆಯ ಬಗ್ಗೆ ನಿರ್ಭಾವುಕತನದಿಂದ ನಿರೂಪಿಸಿದರೂ ಓದುಗನಿಗೆ ಹತ್ತಿರವಾಗುತ್ತಾ ಹೋಗುವ ಜಾಣ್ಮೆಯನ್ನು ತೋರಿದ್ದಾರೆ.

ಕವನ - ಮತ್ತೆ ನಿನ್ನೆಡೆಗೆ - ಎನ್.ಶಂಕರ ರಾವ್

ಚೆಲುವೆ, ಬಂದಿದ್ದೇನೆ ಮತ್ತೆ ನಿನ್ನೆಡೆಗೆ -
ಕಂಬನಿದುಂಬಿ, ಎದೆ ಮುದುಡಿ,
ಕ್ಷಮಿಸು.
ಅಂದೆಲ್ಲವೂ ಚೆಲುವು, ಉಜ್ವಲ ಲೋಕ,
ಯೌವನದ ಜುಮ್ಮು ಮೊಗ್ಗು.
ನಿನ್ನ ಆ ಕಣ್ಣೋ, ಹೊಳವ ಕಾಮನಬಿಲ್ಲು,
ಮನಸು ಹಸುರಿನ ಬಳ್ಳಿ, ಒನಪು, ಕಿನ್'ಕಾಪು,
ಸುತ್ತೆಲ್ಲ ಚೆಲ್ಲಿದ ಬಣ್ಣ.
ನೀನಾಗ ನನ್ನವಳು, ಇಡಿಯ ಜಗವೇ ನೀನು, ನನ್ನದು.
ಉಳಿದೆಲ್ಲವೂ ಸುಳ್ಳು.
ನೀನೆ ಸರ್ವಸ್ವ.

ಸರಿದುಹೋಯಿತು ಅಂಥ ಅಮೃತ ಘಳಿಗೆ.
ದೂರ ಕರಗಿತು ಗಾನ.
ಹಿಡಿಯಲಾಗದ ನೂರು ಬಿಸಿಲುಗುದುರೆಗಳತ್ತ
ಓಟ.
ಕೆಂದೂಳು, ಬೆವರಿನ ಬುಗ್ಗೆ,
ಆವೇಶ, ಉಬ್ಬಸ.
ಬದುಕಿನ ಅರ್ಥ -
ನ್ಯಾಯಗಳ ಬಗ್ಗೆ ಕೋಲಾಹಲ,
ಮುಗಿಯದ ಚರ್ಚೆ, ಹಾಲಾಹಲ.

ಎಲ್ಲ ಮುಗಿದೀಗ ತಣ್ಣಗೆ.
ಹೊರಟಲ್ಲಿಗೇ ಮತ್ತೆ,
ನೆಟ್ಟಗೆ.
ಎಲ್ಲವು ವ್ಯರ್ಥ ?
ಬಿಡಿಸಲಾಗದ ಪ್ರಶ್ನೆ,
(ಮಾತಿಗೆಟುಕದ ಮಿಥ್ಯೆ?)
ಸುಕುಮಾರ ಸುಂದರ ಸ್ನಿಗ್ಧ ಜಾಲಗಳೆಲ್ಲ
ತುಂಡು -
ಗಾಳಿಯ ಲೀಲೆ -
ತೇಲಿ ಬಿಸಿಲಿಗೆ ಹೊಳೆದು
ಝಳಪಿಸಿವೆ ಕತ್ತಿ.
ಹೊತ್ತು ಬಂದಿದ್ದೇನೆ ನೂರು ಭಗ್ನಗಳ ಚಿತ್ರ ಭಿತ್ತಿ,
ಮತ್ತೆ ನಿನ್ನೆಡೆಗೆ,
ಕಂಬನಿದುಂಬಿ, ಎದೆ ಮುದುಡಿ,
ಕ್ಷಮಿಸು.

ವಿಶ್ಲೇಷಣೆ :

ಈ ಕವನ ನಮ್ಮ ನಿಮ್ಮೆಲ್ಲರ ಜೀವನದ ಅನುಭವದ ಸಾರ.
ಮದುವೆಯಾದ ಕೆಲವು ವರ್ಷಗಳ ಅನ್ಯೋನ್ಯತೆ, ಹೊಸ ಬಾಳಿನ ಅನುರಾಗ, ನಾನೆ ನೀನೆಂಬ ಭಾವ.
ಕಾಲ ಉರುಳಿದಂತೆ ಜೀವನದ ನಿರ್ವಹಣೆಗಾಗಿ ದೂರದ ಊರಿಗೆ ಪಯಣ.ಹೋರಾಟದ ಹಾದಿಯಲಿ ಅನಿವಾರ್ಯ ಸಂಘರ್ಷ. ಜೀವನ ಚಕ್ರ ತಿರುಗಿದಾಗ, ಮನಸ್ಸಿನಲ್ಲಿ ಪ್ರಶ್ನೆ ಗಳು. ಕನಸು ನನಸುಗಳ ವಾಸ್ತವತೆಯ ಅನಾವರಣ.
ದುಡಿಮೆಯ ಸಮಯದಲ್ಲಿ ಸಹಚರಿಯನ್ನು ಸರಿಯಾಗಿ ನೋಡಿಕೊಳ್ಳಲಾಗಲಿಲ್ಲ ಎಂಬ ನೋವು.
ಆತ ಹಿಂತಿರುಗಿ ಬಂದು ಕಂಬನಿ ತುಂಬಿ ಮಡದಿಯಲ್ಲಿ ಕ್ಷಮೆ ಯಾಚಿಸುವ ಚಿತ್ರಣ ಕವನದ ಶ್ರೇಷ್ಠತೆಯನ್ನು ನಿರೂಪಿಸುತ್ತದೆ.

ಕವನ - ರಾಘವಾಂಕನನ್ನು ನೆನೆದು - ಜಗದೀಶ್ ಭಟ್ಟ್

ನಮ್ಮೆರಡು ಮನೆ ನಡುವೆ ನೂರು ಮಾರೇ ದೂರ,
ಒಂದೇ ಕೂಗಳತೆಗೂ ಬಲು ಹತ್ತಿರ.
ನಮ್ಮ ಮನೆಯೊಗ್ಗರಣೆ ಘಮಲು ಚುರುಚುರು ಸದ್ದು
ನಿಮ್ಮ ಮನೆಯಂಗಳಕೆ ನಿತ್ಯ ಭೇಟಿ.
ನಿಮ್ಮ ಮಲ್ಲಿಗೆ ಕಂಪು, ಪೂಜೆ ಘಂಟೆಯ ರಣನ -
ಎಲ್ಲಕ್ಕು ನಮ್ಮ ಮನೆ ತಂಗುದಾಣ.
ಎರಡು ಮನೆಗಳ ಕೇಕೆ ಕಾಕು ಕಲರವ ಹೆಣೆದು.
ನವಿಲ ಜಾಗರದಂತೆ ಸೋಗೆ ಕುಂಜ.
ನಿನ್ನ ಕಣ್ಣಾಲಿಯಲಿ ನನ್ನ ರೂಪದ ಗೂಡು,
ನನ್ನ ಸೊಲ್ಲಿಗೆ ತೂಗು ನಿನ್ನ ಮನದೊಟ್ಟಿಲು.
ಮುಟ್ಟಿದರೆ ಮುನಿಯಂತೆ ಮುದುಡಿ ಸಾಗುವುದೇಕೆ
ನಾಲ್ಕು ಕೂಡಿರುವಾಗ ಒಂದು ಬೇರೇಕೆ ?

ಕವನ - ಒಂದು ಹಿಡಿ ಬೆಳಕು - ಗುರುಪ್ರಸಾದ್ ಹಾಲ್ಕುರಿಕೆ

ಒಂದು ಹಿಡಿ ಬೆಳಕು :
ಮುಷ್ಟಿಯೊಳಗಡೆ ಅಂಕುಡೊಂಕು ವಂಕಿ -
ಮುತ್ತು, ಹವಳ ಪಚ್ಚೆ ಕೆಂಪು ವೈಡೂರ್ಯ.
ಸಪ್ತಾಶ್ವ ಹೂಡಿದ ತೇರು,
ಏರಿಸಿದ ಬಾವುಟ.
ರಂಗುರಂಗಿನ ಬೆಡಗು,
ಹನಿಗೊಂಚಲು.
ಮಿನುಗು ನೊರೆ,
ತೆಳು ಗುಳ್ಳೆ ಗಾಳಿಯಲೆಯಲೆ ಮೇಲೆ
ತೇಲಿ ಮೇಲೇರಿ ಸೂರ್ಯಕಿರಣಕ್ಕೇ
ನೇರ ಕಚಕುಳಿಯಿಕ್ಕಿ
ಕಿಲಕಿಲ ನಗುವ ಲೀಲೆ.

ಮಳೆಹುಳು,
ಪಟ್ಟೆ ಪಟ್ಟೆಯ ಚಿಟ್ಟೆ,
ಕನಸಿನ ಮೊಟ್ಟೆ,
ಚಿಪ್ಪೊಡೆದು ಚಂಗನೆ
ಚಿಗಿದ ಮಾಯಾಮೃಗಕ್ಕೆ
ಒಂಬತ್ತು ಕೊಂಬು,
ಪಾರದರ್ಶಕ ಒಡಲು, ಗಾಜು ಕೋಶ.
ಕೋಶವನ್ನೂ ದಾಟಿ ಹರಡಿಕೊಂಡಿವೆ ಸುತ್ತ -
ಹಾಡು,
ಬೆಳಕು -
ತನಗೆ ತಾನೇ ಉರಿದು
ಹಬ್ಬಿಸಿದ ಕಂಪು.

ಕತ್ತು ಕೊಂಕಿಸಿ, ಕಣ್ಣ
ಮಿಟುಕಿಸುತ್ತಿದ್ದಂತೆ
ಹೊತ್ತಿ ಬೆಳಗುವ ನೂರು
ಹೂಬಾಣ, ಮತಾಪು.
ಕೋಶದೊಳಗಣ ತಂತಿ
ಬಲು ಗಟ್ಟಿಮುಟ್ಟು,
ಸಾವಿರ ಗಂಟೆ ಆಯುಸ್ಸು :
ತಯಾರಕನೇ ಸ್ವತಃ ಬರೆದುಕೊಟ್ಟಿದ್ದುಂಟು
ಈ ಮಾಲಿಗೆ ಖಾತರಿ.
ನಡುಮನೆಯ ಬಾಗಿಲಿಗೇ ತೂಗುಬಿದ್ದಿದೆ ನೋಡಿ.
ಆತನೇ ನೀಡಿದ್ದ ಮುಚ್ಚಳಿಕೆ ಪತ್ರ. ಸ್ವರ್ಣಾಕ್ಷರದ ಸುತ್ತ

ಹೊಳೆವ ಚೌಕಟ್ಟು.

ಇಷ್ಟೆಲ್ಲ ಇದ್ದರೂ
ಒಳಗೊಳಗಿನಿಂದಲೇ
ತೆವಳಿ ಬಂದಿದೆ ಗಾಳಿ.
ಕಡಲುಕ್ಕಿ ಅಪ್ಪಳಿಸಿ
ಹರಿದ ತಂತಿ :
ಬೆಳಕು ಚೆಲ್ಲಾಪಿಲ್ಲಿ.
ಅಮೃತತ್ವಕ್ಕೆ ಕೂಡ ಅಲ್ಪ ಆಯುಸ್ಸು.
ಕ್ಷಣ ಹಿಂದೆ ಮಾತ್ರವೇ ಕ್ಷಣಕ್ಷಣವೂ ಅನಂತ,
ಈಗದರ ದುರಂತ !
ಆಗ ಹಿಡಿ ಬೆಳಕು.
ಈಗ ಬರಿ ಮಣ್ಣು.

ವಿಶ್ಲೇಷಣೆ :

ಒಂದು ಹಿಡಿ ಬೆಳಕು ಕವನವು ಪ್ರಾಚಾರ್ಯ ಎಚ್ಚೆಸ್ಕೆ ಅವರ ಪ್ರಥಮ ಕವನ ಸಂಕಲನ - "ದವನದ ಕೊನೆ" ಯಲ್ಲಿ ಹನ್ನೊಂದನೇ ಕವನವಾಗಿ 1989ರಲ್ಲಿ ಪ್ರಕಟಿತಗೊಂಡಿದೆ. ಇಷ್ಟರಲ್ಲಾಗಲೇ ಎಚ್ಚೆಸ್ಕೆ ಅವರು ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೃಷಿಯನ್ನು ಮಾಡಿ ಮೊದಲಿನಿಂದಲೇ ಕವನ ರಚನೆಯಲ್ಲಿ ತೊಡಗಿಕೊಂಡಿದ್ದು ಅನೇಕ ಕವನಗಳನ್ನು (ಕೆಲವು ಹಸ್ತ ಪ್ರತಿಯಿಲ್ಲದೆ ಇನ್ನೂ ಕೆಲವು ತಮ್ಮ ಸ್ವಸಂತೋಷಕ್ಕಾಗಿ ಹಾಗೂ ಮತ್ತೆ ಕೆಲವು ಸಂಕೋಚದಿಂದ ಯಾರಿಗೂ ತೋರಿಸದೆ) ಬರೆದಿದ್ದರು. ಈ ಕವನಗಳನ್ನು ಎಚ್ಚೆಸ್ಕೆ ಅವರು ಹಲವಾರು ಬ್ಯಾಂಕಿಂಗ್ ಕಮ್ಮಟಗಳಲ್ಲಿ ಓದಿದ್ದುಂಟು. ಈ ಕವನ ಸಂಕಲನವು ಹೊರಬರಲು ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಮನ್ವಯ ಸಮಿತಿಯು ಅತಿ ಮುಖ್ಯ ಪಾತ್ರವಹಿಸಿದೆ ಎಂದರೆ ಅತಿಶಯೋಕ್ತಿಯಾಗಲಾರದು ಹಾಗೂ ಸಮನ್ವಯ ಸಮಿತಿ -ಕನ್ನಡವೇ ಸತ್ಯ ವೇದಿಕೆಯ ಅನೇಕ ಸದಸ್ಯರಿಗೆ ತಿಳಿದಿಲ್ಲದಿರಬಹುದು.

ಈಗ ಕವನ "ಒಂದು ಹಿಡಿ ಬೆಳಕು" ಬಗ್ಗೆ ನನ್ನ ಕೆಲವು ಅನಿಸಿಕೆಗಳನ್ನು ಈ ಕೆಳಗೆ ವಿವರಿಸಲು ಇಚ್ಛಿಸುವೆ :-

ಇದು, ಹಠಾತ್ತನೆ ತೀರಿಕೊಂಡ ಪ್ರಖ್ಯಾತ ಹಾಗೂ ಪ್ರತಿಭಾನ್ವಿತ ನಟಿಯೊಬ್ಬಳನ್ನು ನೆನೆದು ರಚಿಸಿದ ಕವನ.

ಅನಿರೀಕ್ಷಿತವಾಗಿ ನಡೆದು ಹೋದ ಘಟನೆಯ ಬಗ್ಗೆ ಕವಿಯು ತನ್ನ ಪ್ರತಿಕ್ರಿಯೆಯನ್ನು ನವಿರಾದ ಪದಗಳ ಸಹಾಯದಿಂದ ಓದುಗರ ಭಾವನೆಗಳನ್ನು ಬಡಿದೆಬ್ಬಿಸುವಂತೆ ನೇರವಾಗಿ ನೀಡಿದ್ದಾರೆ.

ಸೃಷ್ಟಿಕರ್ತನೇ ಆಯುಸ್ಸನ್ನು ಇಷ್ಟು ಎಂದು ಖಾತರಿಯಾಗಿ ಸುವರ್ಣ ಚೌಕಟ್ಟಿನೊಳಗೆ ಬರೆದು ಕೊಟ್ಟಿದ್ದರೂ, ಎಲ್ಲೋ ಒಂದು ಕಡೆಯಿಂದ ವಿಧಿಯು ನುಸುಳಿ ಬಂದು ಜೀವ ತಂತಿಯನ್ನು ಹರಿದು ಒಂದು ಕ್ಷಣ ಹಿಂದೆಯೇ ಜೀವನವು ಅನಂತ ಎಂದು ನಂಬಿದ್ದ ಮನುಷ್ಯನಿಗೆ ಹಿಡಿ ಬೆಳಕಿನ ಬದಲಾಗಿ ಬರಿ ಮಣ್ಣನ್ನು ಕೊಡುವುದರ ಮೂಲಕ ದುರಂತವನ್ನೇ ಸೃಷ್ಟಿಸಿದ.

ಕವನದ ಬಹುಪಾಲುಗಳ ಸಾಲುಗಳ ಮೂಲಕ ಕವಿಯು ಮನುಷ್ಯನ ಭವ್ಯ ಹಾಗೂ ವೈಭವೋಪೇತ ಜೀವನದ ಬಗ್ಗೆ ವಿವರಿಸುತ್ತಾ ಹೋಗುತ್ತಾರೆ.

ಮನುಷ್ಯನ ಜೀವವು ಒಂದು ಹಿಡಿ ಬೆಳಕಿನಂತೆ ಹೃದಯವೆಂಬ ಮುಷ್ಟಿಯೊಳಗೆ ಅಂಕುಡೊಂಕಾಗಿ ಅಡಗಿರುತ್ತದೆ. ಇದೇ ಪ್ರಾಣವಾಯು. ಇದು ಎಷ್ಟು ಪ್ರಾಮುಖ್ಯವಾದದ್ದೆಂದರೆ ಇದು ಮುತ್ತು, ಹವಳ ಇತ್ಯಾದಿ ಬಹಳ ಬೆಲೆಬಾಳುವ ವಸ್ತುಗಳಿಗಿಂತ ಮಿಗಿಲಾದದ್ದು. ನೋಡಿ :

ಮುಷ್ಟಿಯೊಳಗಡೆ ಅಂಕುಡೊಂಕು ವಂಕಿ -
ಮುತ್ತು ಹವಳ......

ಮುಂದುವರೆದು ಈ ಒಂದು ಹಿಡಿ ಬೆಳಕು ಹೃದಯ ಗಹ್ವರವೆಂಬ ಸಪ್ತಾಶ್ವ ಹೂಡಿದ ತೇರಿನಲ್ಲಿ ವಿರಾಜಮಾನವಾಗಿರುವುದು.
ಮಳೆಹುಳು, ಪಟ್ಟೆ ಪಟ್ಟೆಯ ಚಿಟ್ಟೆಗಳು ಜೀವಿಯ ನಶ್ವರತೆಯನ್ನು ಪ್ರತಿಬಿಂಬಿಸಿದರೆ, ಮಾಯಾಮೃಗದ ಒಂಬತ್ತು ಕೊಂಬುಗಳು ಮನುಷ್ಯನ ಜೀವವು ಹೊರಹೋಗುವ ನವರಂಧ್ರಗಳನ್ನು ನೆನಪಿಸುತ್ತದೆ. ಹಾಗೆಯೇ ಒಡಲಿನ ಪಾರದರ್ಶಕತೆ ಹಾಗೂ ಗಾಜಿನಿಂದ ಕೂಡಿದ ಕೋಶ (ಶರೀರ) ಅವುಗಳು ಎಷ್ಟು ರಕ್ಷಿತವಾದದ್ದು ಎಂಬುದನ್ನು ತೋರುವುದು. ಇಂತಹ ಶರೀರದ ಸುತ್ತ ವೈಭವೋಪೇತವಾದ ಭೋಗ ಭಾಗ್ಯಗಳು ಸುತ್ತಿಕೊಂಡು ಹೂಬಾಣ ಮತಾಪುಗಳ ಮೂಲಕ ಬೆಳಗುವುದು. ಇದೆಲ್ಲದರ ಮಧ್ಯೆ ತನ್ನ ಜೀವವು ಗಟ್ಟಿಮುಟ್ಟಾದದ್ದೆಂದು ಹಾಗೂ ದೀರ್ಘ ಆಯಸ್ಸುಳ್ಳದ್ದೆಂದು ಭ್ರಮಿಸುವ ಮನುಷ್ಯ. ಈ ಕೋಶವನ್ನು ಸೃಷ್ಟಿಕರ್ತನೇ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ಹೊಳೆವ ಚೌಕಟ್ಟಿನಲ್ಲಿ ಪ್ರದರ್ಶಿಸುತ್ತಾ ಮನುಷ್ಯನು ತಾನು ಅಮರನೆಂದು ಭಾವಿಸುತ್ತಾನೆ.

ಇಷ್ಟೆಲ್ಲಾ ಅಂದರೆ ವೈದ್ಯಕೀಯ ವಿಜ್ಞಾನದ ಸಹಾಯಗಳು ಇದ್ದರೂ ಒಳಗಿಂದೊಳಗೇ ಸಾವೆಂಬ ಗಾಳಿಯು ಮನುಷ್ಯನಿಗೆ ಅರಿವಿಲ್ಲದೆ ತೆವಳಿಕೊಂಡು ಬಂದು ಸಮುದ್ರದ ಅಲೆಯಂತೆ ಅಪ್ಪಳಿಸಿ ಜೀವವೆಂಬ ತಂತಿಯನ್ನು ಹಠಾತ್ತನೆ ಹರಿದು (ಹೃದಯಾಘಾತ!) ಜೀವವೆಲ್ಲವು ಚೆಲ್ಲಾಪಿಲ್ಲಿಯಾಗುವುದು. ಅಂದರೆ ಮನುಷ್ಯನು ಆಧುನಿಕ ವಿಜ್ಞಾನದ ಸಹಾಯದಿಂದ ತಾನು ಅಮರನೆಂದುಕೊಂಡಿದ್ದರೂ ಅದಕ್ಕೂ ಅಲ್ಪ ಆಯುಸ್ಸೆಂದು ನೆನಪಿಸುತ್ತಾ ಜೀವನವು ಎಷ್ಟು ನಶ್ವರ ಎಂಬುದನ್ನು ಈ ಕವನವು ಸಾರಿ ಸಾರಿ ಹೇಳುತ್ತದೆ.
ಪ್ರಾಚಾರ್ಯ ಎಚ್ಚೆಸ್ಕೆ ಅವರು ಈ ನಿತ್ಯ ಸತ್ಯವನ್ನು ಅರ್ಥಗರ್ಭಿತ ಪದಪುಂಜಗಳ ಬಳಕೆಯ ಮೂಲಕ ವ್ಯಕ್ತಪಡಿಸಿದ್ದಾರೆ. ಇದೇ ರೀತಿಯ ನಶ್ವರತೆಯನ್ನು ಸಾರುವ ವಿಷಯವನ್ನು ಪ್ರಾಚಾರ್ಯ ಎಚ್ಚೆಸ್ಕೆಯವರು ತಮ್ಮ ಲಲಿತ ಪ್ರಬಂಧಗಳೊಂದರಲ್ಲಿ ಈ ರೀತಿ ವ್ಯಕ್ತಪಡಿಸಿರುವುದನ್ನು ಗಮನಿಸಬಹುದು. ಅದು ಹೀಗಿದೆ :-

"ಜೀವನವೆಂಬುದು ದೇವರು ಮನುಷ್ಯನಿಗೆ ಕೊಟ್ಟ ಪನ್ನೀರು ದಾನಿ, ಪೌಡರಿನ ಡಬ್ಬ. ಅದರಿಂದ ಪನ್ನೀರನ್ನೆರಚಬಹುದು, ಪೌಡರನ್ನು ಉದುರಿಸಬಹುದು. ಈ ಪನ್ನೀರು ಪೌಡರಿನ ವಿತರಣೆ ಹೇಗಾಯಿತೆಂಬುದು, ಸುಗಂಧ ಸೌಂದರ್ಯ ಹೇಗೆ ಪಸರಿಸಿದುವೆಂಬುದು, ಸುತ್ತಣ ಗಾಳಿಯ ಯಾವಯಾವ ವಸ್ತು ಇದರೊಡನೆ ಸೇರಿ ಏನೇನು ಪರಿಣಾಮ ಆಯಿತೆಂಬುದು-ಇದಿಷ್ಟೇ ಮುಖ್ಯ. ಈ ಕೆಲಸ ಆದಮೇಲೆ ಈ ಪನ್ನೀರುದಾನಿ ಪ್ರಯೋಜನವಿಲ್ಲ; ಪೌಡರು ಡಬ್ಬ ಬಿಸಾಡಬೇಕು. ಪನ್ನೀರು ಪೌಡರು ಇನ್ನೂ ಒಳಗೆ ಸ್ವಲ್ಪ ಉಳಿದಿರುವಾಗ ಈ ದಾನಿಯನ್ನು, ಡಬ್ಬವನ್ನು ಜೋರಾಗಿ ಒದರುವುದರಿಂದ ಫಲವಿಲ್ಲ. ಕೊನೆಯ ತೊಟ್ಟು, ಕೊನೆಯ ಚಿಟಿಕೆ ಉದುರುವ ವರೆಗೂ ಒದರುವುದರಲ್ಲಿ ಅಭ್ಯಂತರವಿಲ್ಲ. ಆದರೆ ಇದಕ್ಕಾಗಿ ಅತಿ ಪ್ರಯಾಸವೇಕೆ?"

ಕವನ - ಬನ್ನಿ ಅಮರಾವತಿಗೆ - ಬೆಂಶ್ರೀ ರವೀಂದ್ರ

ಇನ್ನೂರು ಕಿಲೋಮೀಟರಿನ್ನೂರೇ ನಿಮಿಷದಲ್ಲಿ
ಕ್ರಮಿಸಿರುವ ಬಸ್ಸು
ಕೊನೆಯ ಇಪ್ಪತ್ತಕ್ಕೆ ತಿಣುಕುತ್ತಿದೆ.
ಘಟ್ಟದೊತ್ತಿನ ಹಿಗ್ಗು-ಮುಗ್ಗು ಹೆದ್ದಾರಿ -
ರಿಬ್ಬನಿನ ಮಾದರಿ.

ಉದ್ದ ಚಾಚಿದ ತೋಳು ಒಂದು ಯೋಜನ ದೂರ,
ಹೊಟ್ಟೆಯಾಳದೊಳಕ್ಕೆ ಕುಸಿದು ಬಿದ್ದ ಮುಖ,
ಮುಖದೊಳಗೆ ಬಾಯಿ.
ತೋಳ ತೆಕ್ಕೆಗೆ ಸಿಕ್ಕಿ ಬಾಯೊಳಗೆ ಬೀಳುತಿದೆ
ಸಕಲ ಜೀವ ಪ್ರಪಂಚ.

ಬಸ್ಸಿನಲ್ಲಿ ಕುಕ್ಕರಿಸಿ ಕುಲುಕಿ ಭುಜ-ಭುಜ ತಾಕಿ
ಬೆವರು ಸುರಿಸುವ ಯಾತ್ರೆ ಸಾಕೋ ಸಾಕು !
ಮೇಲೆ ಭಣಭಣ ಬಿಸಿಲು,
ಕಾದ ಬಸ್ಸಿನ ನೆತ್ತಿ,
ಕೆಳಗೆ ರಣರಣ ಬೆಂಕಿ,
ನೆಲ ಬಾಣಲೆ.

ಸುಳಿಸುಳಿದು ಬೀಸುತಿದೆ ಹಾಳು ಸುಡುಗಾಳಿ,
ನೀಲಗಿರಿಗಳ ಸಾಲು ಒತ್ತಿದೆ ತಿದಿ.
ಬೇಸಗೆಯ ನಡುಹಗಲ ದೀರ್ಘ ಪ್ರಯಾಣ
ನಿಜಕು ಬಲು ತ್ರಾಸ.
ರಾತ್ರಿ ಪ್ರಯಾಣವೂ ಏನಂಥ ಸುಖವಲ್ಲ.
ಬಂಡೆ ಬೆಂಕಿಯ ಉಂಡೆ :
ಹಗಲು ಕಾದದ್ದಕ್ಕೆ ರಾತ್ರಿ ನಿಟ್ಟುಸಿರು.
ಆಕಾಶದೆತ್ತರದ ನಕ್ಷತ್ರಲೋಕಕ್ಕೆ

ಕಣ್ಣು ಹಾಯಿಸಿ, 'ಅಲ್ಲಿ
ಎಷ್ಟು ಹಾನೆಸೀತೊ !'
ಎಂದು ಕೊರಗುವುದಷ್ಟೆ
ಇರುಳು ಪಯಣದ ಲಾಭ.
ಹಗಲೋ, ರಾತ್ರಿಯೋ,
ಅಂತು ಮಾಡಲೇಬೇಕು
ಕಷ್ಟ ಪ್ರಯಾಣ.
ಇಂದ್ರನಮರಾವತಿಯ
ದರ್ಶನದ ಯೋಗಕ್ಕೆ

ಇದು ಸಣ್ಣ ತ್ಯಾಗ.

ಊರು ಇನ್ನೂ ದೂರ.
ಅಷ್ಟರಲ್ಲೇ ಅದರ ಮೊದಲನೆಯ ಅನುಭವ:
ದಿವಿಜ ನದಿ ದರ್ಶನ!
ರಭಸ ಆರ್ಭಟ.
ಕರಿ ನೀರ ಕಂಬಳಿಗೆ ಬಿಳಿ ನೊರೆಯ ಅಂಚು -
ಹುಳಿ ಹೆಂಡ ಚೆಲ್ಲಿದಂತೆ.
'ತೆರ ತೆರದ ಕಲ್ಲೋಲ ಮಾಲೆ ಲೀಲೆ'ಯ ಮೇಲೆ
ಬೆಳ್ಳಕ್ಕಿ ಸಾಲು.
ಬೊಜ್ಜು ದೇಹದ ಹೆಣ್ಣು ಲಜ್ಜೆ ಹೆಜ್ಜೆಯನಿಟ್ಟು
ಹತ್ತಿರಕೆ ಬಂದು
ಹೆಗಲ ಮೇಲೇ ತನ್ನ ದಪ್ಪ
ಕೈಯಿಟ್ಟಂತೆ ದುರ್ಗಂಧದತಿ ಭಾರ !
ಗದರಿದರು ಹೊಗದೇ ಬಾಲ ಅಲ್ಲಾಡಿಸುವ
ಕಂತ್ರಿ ನಾಯಿಯ ಹಾಗೆ !
ಊರ ನೋಡಲು ಬಂದ ಉತ್ತುಕ ಜನಕ್ಕೆಲ್ಲ
ಪರಿಮಳ ಪುಷ್ಪಹಾರ !

ಅಷ್ಟರಲ್ಲೇ ನಮ್ಮ ಮುಂದೆ ಡ್ರೈವರ್ ಪಕ್ಕ
ಕೂತು ತೂಕಡಿಸಿದ್ದ ಮಾರ್ಗದರ್ಶಿ
ಪ್ರಭೃತಿ ಥಟ್ಟನರಚುತ್ತಾನೆ :
ನೋಡಿ ಮಹರಾಯರೆ,
ಇದೆ ನಮ್ಮ ವೈತರಣಿ ! ಕೋಟಿ ತೀರ್ಥ ಪವಿತ್ರ,
ನಗರವಾಸೀ ಜನರ ವಾಸನಾ ವಿಶೇಷ !
ಆಘ್ರಾಣಿಸಿ ಆನಂದಿಸಿ !

ಹೊರಟಾಗ ಕಣ್ಮುಚ್ಚಿ ಗೊರಕೆ ಹೊಡೆಯುತ್ತಿದ್ದು
ಧಿಗ್ಗನೆಚ್ಚರಗೊಂಡ ಮಾರ್ಗದರ್ಶಿ ಇದೀಗ
ಶಬ್ದ ಸಂದೋಹ.
ಹತ್ತಲಾರದೆ ಸುಸ್ತು ಹೊಡೆದ ಬಸ್ಸಿನ ಮಂದ್ರ.
ಅವನ ಧ್ವನಿ ತಾರಕ.
ಈಗ ತಾನೇ ತನ್ನ ಕರ್ತವ್ಯ ಆರಂಭ
ಎಂದು ಸಾರುವ ಹಾಗೆ
ಒಂದೆ ಸಮ ಕಿರುಚಾಟ.

ಚಾಲಕ ಮಾತ್ರ ಸ್ತಬ್ಧ, ನಿಶ್ಯಬ್ದ.
ಅವ ನಿದ್ದೆ ಮಾಡಿಲ್ಲ ಎಂದು ಹೇಳಲು ಬಸ್ಸು
ಅಪಘಾತವಾಗದೇ ಚಲಿಸುತ್ತಿರುವುದೇ ಸಾಕ್ಷಿ.
'ಜಗವೆಲ್ಲ ಮಲಗಿರಲು ಇವನೊಬ್ಬ ಎದ್ದ !'

ಮಾರ್ಗದರ್ಶಿಗೆ ಈಗ ಎಲ್ಲಿಲ್ಲದ ಸಂಭ್ರಮ.
ಭೋರ್ಗರೆದು ನುಗ್ಗುತಿದೆ ಮಾತು ಬಾಯ್ತುಂಬ.
ಸ್ತಬ್ಧ ಚಿತ್ರದ ಹಾಗೆ ಎದುರು ಶ್ರೋತೃವಂದ:
ತೆರೆದ ಕಿವಿ, ಬಿಟ್ಟ ಕಣ್ಣು.
ಹೊಕ್ಕ ಕ್ಲೋರೋಫಾರ್ಮ ತೀಕ್ಷ್ಣ ಗಂಧ ಕ್ಷತಿಗೆ
ಮತಿಗೆಟ್ಟು ಮಂಕಾಗಿ ಒರಗಿ ಶಸ್ತ್ರಕ್ರಿಯೆಗೆ ಸಜ್ಜಾದ
ರೋಗಿಗಳ ಸಾಲು ಸಾಲು :
ಮಧುಚಂದ್ರ ತೊಡಗಿರುವ ಹೊಸ ಗಂಡ ಹೆಂಡತಿ ;
ವೃದ್ಧ ನಾರಿ, ಪತಿ ; ಮಡದಿ ಮಕ್ಕಳ ಭಾರ ಹೊತ್ತ ಸಂಸಾರಿ;

ಬಿಡು ಬೀಸ ನಿಡು ಕೇಶಿ ಗಂಡುಗೋವಿ :
ಇಂದ್ರನಮರಾವತಿಯ ಕಾಣುವವಸರದಿಂದ
ಬಂದು ಬಸ್ಸನ್ನೇರಿ ಸೆರೆಯಾಗಿ ಕೂತ ಜನ.
ಉದ್ದನೆಯ ಭಾಷಣದ ರೀಲು ಬಿಚ್ಚುವುದಕ್ಕೆ
ಮಾರ್ಗದರ್ಶಿಗಿದೀಗ ಒಳ್ಳೆ ಸಮಯ.
ಅಗೋ ! ಅವನದೇ ಮಾತು -
ಕೇಳ್ರಪ್ಪಾ , ಕೇಳಿ !
ಆತ್ಮವಾಸಸ್ಥಾನವಾದ ಈ ದೇಹಕ್ಕೆ
ಅನ್ನಮಯ ಪ್ರಾಣಮಯ ಮನೋವಿಜ್ಞಾನಮಯ
ಆನಂದಮಯ ಕೋಶ ಇರುವ ಹಾಗೆ -
ಅಸ್ಥಿ, ಮಜ್ಜೆ, ಶುಕ್ರ, ತ್ವಕ್, ಮಾಂಸ, ಮೇದಗಳಂತೆ
ಇಂದ್ರನಮರಾವತಿಯ ಹಲವು ಕೋಶ.
ವಾಸನಾಮಯವಾದ ವೈತರಣಿ ಹೊರಗಿನದು.
ಮುಂದೆ ಬರಲಿವೆ ಉಳಿದ ಒಂದೊಂದು ಪದರ.
ತಾಳುವಿರ ? ತಾಳಿ ಬಾಳುವಿರ ?”

ರಸ್ತೆ ಗಜಿಬಿಜಿ.
ಕಾರು, ಬಸ್ಸು, ಟ್ರಕ್ಕು,
ಆಟೋರಿಕ್ಷಾ, ಗಾಡಿ,
ಕುದುರೆ ಬಂಡಿ -
ಹಲವು ಶತಮಾನಗಳ ಸಹಬಾಳ್ವೆ ಇಲ್ಲಿ :
ಬುರಕಿ ಹೆಣ್ಣಿನ ಪಕ್ಕ ಅರೆನಗ್ನ ವ್ಯಕ್ತಿ -
ಜೀವನದಿ ಸನಾತನ, ಅಷ್ಟೇ ಚಿರನೂತನ.
ಈ ಎಲ್ಲ ಗೊಂದಲದ
ನಡುವೆ ನುಸುಳಿದೆ ಬಸ್ಸು -
ಚಕ್ರಬಿಂಬನ ಕೋಟೆ
ಹೊಕ್ಕ ಅಭಿಮನ್ಯು !

ಬದಲಾಯಿತು ವಾಸನೆ.

ಜೊತೆಗೆ ಸಂವೇದನೆ.
ಕಣ್ಣು ಕಿವಿ ಮೂಗಿಗೆ
ಹೊಸ ಸಮಾರಾಧನೆ.
ಮುಗಿಲೆತ್ತರಕ್ಕೇರಿ
ಮಜ್ಜನಕ್ಕಣಿಯಾದ
ನಗ್ನ ಮೂರ್ತಿಗಳಂತೆ
ಬಹು ಮಹಡಿ ಮನೆ ಸಾಲು :
ಅಮರಾವತೀ ಪುರದ
ಭವನಗಳಿಗೂ ಕೂಡ
ಇಂದ್ರನಿಗೆ ಇರುವಂತೆ
ಮೈಯೆಲ್ಲ ಕಣ್ಣು -
ಕಣ್ಣು ಕಣ್ಣಿಗು ಕಾಮ.
ರೆಪ್ಪೆಯುದ್ದಕು ಜೋತು -
ಬಿದ್ದ ವಸ್ತ್ರ -
ಸೀರೆ ರವಿಕೆಯ ಜೊತೆಗೆ
ಅಂಗಿ ಲುಂಗಿ.

ಬಗಲಲ್ಲೆ ನಿಂತಿದೆ -
ತಾಜಮಹಲ ಮಿನಾರು -
ಮುಗಿಲಿಗೆತ್ತಿದ ಸೊಡರು ;
ದೈತ್ಯ ಕೊಳವೆ :
ಮಖ ಧೂಮ.
ಹೊಗೆಯೊಂದಿಗೆ ಬಂದ
ಹೊಸ ಬಗೆಯ ಗಂಧ ;
ಬಿಸ್ಕತ್ತು, ಬೀರ್, ಹ್ವಿಸ್ಕಿ,
ದನಮೇವು, ಗಂಧಕ,
ಚರ್ಮಶಾಲೆಯ ಜುಮ್ಮ್ -
ದಟ್ಟಿಸುವ ಗಮಗಮ.

ಅಲ್ಲಲ್ಲಿ ಮಡುಗಟ್ಟಿ -
ದೊಳ್ಳೆ ರೆಯ ಹೊಂಡ -
ದಲ್ಲಿ ಬಿದ್ದೊದ್ದಾಡು -
ತಿರುವ ಅರೆ ನಗ್ನ
ಚೆಳ್ಳೆಪಿಳ್ಳೆಗಳ ಕ್ರೀ -
ಡಾ ವಿನೋದ !

ಎತ್ತರದ ಕಾಂಕ್ರೀಟು ಬಲೆಯ ಬದಿಬದಿಗೇ ಹಬ್ಬಿದೆ ವಿಶಾಲ -
ಗುಡಿಸಿಲುಗಳ ಬಯಲು ;
ಕುರುಚಲುಗಳ ಕಾಡು.
ಕಣ್ವರಾಶ್ರಮದಲ್ಲಿ

ಹುಲಿ ಹುಲ್ಲೆ ಹಾವು ಮುಂಗುಸಿ ಕಪ್ಪೆ ಜೊತೆಜೊತೆಗೆ ವಾಸ, ಗ್ರಾಸ.
ಕೊಳಗೇರಿ, ಹೊಳಗೇರಿ ಎಂಬ ಭಿನ್ನತೆಯಿಲ್ಲ -
ಇಲ್ಲಿ ಅಮರಾವತಿಯ ಸ್ವರ್ಗದಲ್ಲಿ.
ಬದುಕುವುದೆ ನಿಜಧರ್ಮ, ಉಳಿದದ್ದು ಗೌಣ ;
ಕನಿಷ್ಠಸ್ತರದಲ್ಲೂ
ಜೀವಿ ಸಂತಾನಕ್ಕೆ ಬೆಳವಣಿಗೆ ಸಾಧ್ಯ -
ಎಂಬ ಮಾತಿನ ಸತ್ಯ
ಮನವರಿಕೆ ಮಾಡಲೇ
ಇಲ್ಲಿ ಬದುಕಿದೆ ವಿವಿಧ
ಜೀವಾವಳಿ :
ಮನುಕುಲದ ಒತ್ತಿಗೇ
ಜಿರಲೆ, ಬಡಕಲು ನಾಯಿ,
ಹಂದಿ, ಕೋಳಿ, ಬೆಕ್ಕು -
ಎಲ್ಲಕ್ಕು ಹಕ್ಕು.
ಇಂದ್ರನಗರಿಯ ಸಭೆಯ
ಭವ್ಯ ಸೌಧಕ್ಕೆ

ಮೆಟ್ಟಿಲಿನ ಕಲ್ಲು ಈ
ಜನಸ್ತೋಮ !

ನಿಮಿಷ ನಿಮಿಷಕು ಮಿಂಚಿ ಮರೆಯಾಗುತ್ತಿದೆ ನಮ್ಮ
ಕಣ್ಮುಂದೆ ಬಗೆಬಗೆಯ
ಚಿತ್ರಮಾಲೆ.
ಅಂತೆ ಸಾಗಿದೆ ನಮ್ಮ
ಮಾರ್ಗದರ್ಶಿಯ ಮಾತು
ಮುಸಲಧಾರೆ.
ರಸ್ತೆಯಿಬ್ಬದಿಯಲ್ಲು
ಕಲ್ಲು ಹದಿಸಿದ ಕಿರಿದು
ಕಾಲುದಾರಿ.
ತಿರುವು ಮುರುವುಗಳಲ್ಲಿ
ಕಣ್ಣು ಕೋರೈಸುತಿವೆ
ಹಲವು ಜಾಹೀರು :
'ಬನ್ನಿ ಅಮರಾವತಿಗೆ ! ಭಾಗ್ಯದ ತವರೂರಿಗೆ !"
"ಇದು ನಿಮ್ಮದೇ ನಗರಿ ! ಚೊಕ್ಕಟವಾಗಿಡಿರಿ !'
'ನಿಮಗೆ ಎರಡೇ ಸಾಕು ! ನಿಮ್ಮ ಪತ್ನಿಗೆ ಎರಡು !'
-ಉಪದೇಶ ಒಂದೆ ಎರಡೆ ?
ಆದರೀ ಮಾತೆಲ್ಲ
ಬರಿ ವ್ಯರ್ಥ, ಬೇಡದೆಡೆ
ಚೆಲ್ಲಿದ ಮಳೆ.
ಹರಿದೆ ಇದೆ

ಕಣ್ಮುಂದೆ
ನಿರಂತರ ಪ್ರವಾಹ.
ಅದರಲ್ಲಿ
ಒಂದಾಗಿ
ಮುಂದುವರಿಯದೆ ಬೇರೆ
ಇಲ್ಲ ನಿರ್ವಾಹ.
ಎಲ್ಲೆಲ್ಲೂ ಜನ, ಜನ !
ತಡೆಯಿಲ್ಲದ ಓಟ.
ಏನೋ ಹುಡುಕಾಟ.
ಸಿಗದೆ ತಪ್ಪಿಸಿಕೊಂಡ
ಯಾವುದಕ್ಕೆ ಚಡಪಡ.
ಯಾವುದದು ?
ಗೊತ್ತಿಲ್ಲ :
ಅಲ್ಲಿ ಕೇಳಿ,
ಹೇಳಿಯಾರು -
ಎಂದೇ ಪ್ರತಿ -
ಯೊಬ್ಬರೂ
ನೀಡುವ ರೆಡಿ -
ಯುತ್ತರ !

“ಬಾ ಹತ್ತಿರ !' ಎನ್ನುತಾನೆ
ರಸ್ತೆ ಪಕ್ಕ ಮಾಟಗಾರ,
ಔಷಧ ಮಾರಾಟಗಾರ,
ನೆಟ್ಟ ಮಾವು ಓಟೆ ಮೊಳೆತು,
ಚಿಗಿತು ಹೂವು ಹಣ್ಣು ಬಿಟ್ಟು
ಅಗೋ !
ತಲೆಬುರುಡೆಕಾಯಿ !
ಬಿತ್ತು ಏಟು ಪಟಪಟ !
ಯಾರೋ ಏನೋ ಅಂದರೆಂದು ಯಾರೋ ಕನಲಿ ಕಾಳಗ !
ಯಾವುದದು ? ಏತಕದು ?
ಗೊತ್ತಿಲ್ಲ ;
ಅಲ್ಲಿ ಕೇಳಿ -
ಎಂದೇ ಪ್ರತಿಯೊಬ್ಬರೂ
ನೀಡುವ ರೆಡಿಯುತ್ತರ !

ಏನೋ ಕಾಡಿ ಏನೋ ತೀಡಿ
ಬಂತು ಮತ್ಸರ.
'ಒಂದು ನುಡಿ, ಒಂದು ಕಿಡಿ ಕೊನೆಗೆ ಕಾಟ್ಕರ್ಚು.'
ಒಂದೆ ಕ್ಷಣ -
ಎಲ್ಲಿಂದಲೋ

ಗೇರಾಯಿಸಿ
ಬಂದ ಜನ.
ಯಾರು ಬ -
ಲ್ಲರು ಎಲ್ಲ
ಪೂರ್ವನಿಶ್ಚಿತವೇನೋ !
ಇದ್ದರೂ ಇರಬಹುದು ಕೋಮು-ವಾರು !

ಈಗ ಬಸ್ಸಿನ ಜನರಿ -
ಗೆಲ್ಲ ಬಲು ಸುಸ್ತು..
'ಇದ ನೋಡಬೇಕೆಂದೆ
ಕೊಂಡೆವೆ ಟಿಕೆಟ್ಟು ?'
ಮಾಡಲಾಗದು ಏನು.
ಅಮರಾವತಿಯೇ ಹೀಗೆ -
ಕ್ಷಣ ಚಿತ್ರ ಕ್ಷಣ ಪಿತ್ಥ
ಸ್ವಸ್ಥ -ಅಸ್ವಸ್ಥ.
ಥಟ್ಟನೆಯೇ ಬ್ರಹ್ಮರಂಧ್ರ -
ಕೇರಿ ಆವೇಶ.
ಪ್ರತಿಭಟನೆ, ಪ್ರದರ್ಶನ ;
ಮದುವೆಗಾಗಿ ದಿಬ್ಬಣ ;
ಜೊತೆಜೊತೆಗೇ ಮಸಣದತ್ತ
ಮಾಡಿದ ಪಯಣ.
ಎಷ್ಟಾದರು ಏನು ? ಇದು
ರಾಜಧಾನಿಯಲ್ಲವೆ ?
ಆದ್ದರಿಂದ ಇಲ್ಲಿ ಸದಾ
ಕಳವಳ, ತಳಮಳ -
ನಾಡಿನ ಅಂತಃಕರಣ -
ದಂಚು ಮಿಂಚು ಗೊಂಚಲು.

ಹೀಗೆಂದು ಮಹಾಶಯ ಮಾರ್ಗದರ್ಶಿ ವ್ಯಾಖ್ಯಾನ
ನೀಡುತ್ತಿರುವಾಗಲೇ ಬಂತು ಕರಿ ವಾಹನ.
ಉದುರಿ ಧೋಪಧೋಪ ಖಾಕಿ -
ಯುಡುಪು ಕೋವಿ ಸನೀನು, ರಸ್ತೆಯೆಡಬಲವೆಲ್ಲ
ಭೀತಿ, ತಬ್ಬಿಬ್ಬು,
ಎತ್ತಲಿಂದಲೋ ಬಾಂಬು ಬಂದು ಬಿದ್ದಂತಾಗಿ
ಗುಂಪು ಚೆಲ್ಲಾಪಿಲ್ಲಿ, ರಸ್ತೆ ಮಬ್ಬು. 'ಓಡೋಡಿ,
ಎಡ ತಿರುಗಿ,
ಬಚಾವಾಗಿ ಬೇಗ !'
ಎಂದು ಬಂದ ಕೂಗು.
ಬಿದ್ದೆನೋ ಕೆಟ್ಟೆನೋ ಎಂದು ಓಡಿದೆ ಬಸ್ಸು ಗಲ್ಲಿ ಬಿದ್ದು !

ಕೆಲವೇ ನಿಮಿಷ ಹಿಂದೆ ಸಂತೆಗದ್ದಲವಿದ್ದ
ರಸ್ತೆಯೆಲ್ಲಾ ಈಗ-ನಿರ್ಜಿವ, ನೀರವ.
ರಸ್ತೆಯಾಚೆಗೆ ಎಲ್ಲೊ ಕೋಲಾಹಲ.
ಹಿಂದೆಯೇ ಬಂತೊಂದು ಪೊಲೀಸು ಡಂಗುರ -
'ಪ್ರಕ್ಷುಬ್ಧ ಸ್ಥಿತಿಯಿಗ,
ಸಭೆ ಗುಂಪು ನಿಷೇಧ.
ಎಲ್ಲರೂ ಬಲು ಬೇಗ ಮನೆ ಸೇರಿಕೊಂಡುಬಿಡಿ.
ನಾಳೆ ಬೆಳಗಿನ ವರೆಗು
ಉಂಟು ಕರ್ಫ್ಯೂ.'

ಅಂತು ಬಂದಿದ್ದೇವೆ
ನಾವು ಅಮರಾವತಿಗೆ !
ಕಂಡು ಕಾಣದ ಭಾಗ್ಯ
ತುಂಬಿದ ತವರೂರಿಗೆ !

ಉದ್ದ ಚಾಚಿದ ತೋಳು ಒಂದು ಯೋಜನ ದೂರ,
ಹೊಟ್ಟೆಯಾಳದೊಳಕ್ಕೆ ಕುಸಿದು ಬಿದ್ದ ಮುಖ,
ಮುಖದೊಳಗೆ ಬಾಯಿ.
ತೋಳ ತೆಕ್ಕೆಗೆ ಸಿಕ್ಕಿ ಬಾಯೊಳಗೆ ಬಿದ್ದಿದೆ -
ಸಕಲ ಜೀವ ಪ್ರಪಂಚ.

ಕವನ - ನೂರು ತುಣುಕು - ಶ್ರೀಮತಿ ಮನೋರಮಾ ವಿ.ಕೆ

ಹೊಸ ಹರಯ ಹೊರಟಾಗ ಬೀದಿಯುದ್ದಗಲಕ್ಕು
ಎಲ್ಲ ಹೆಂಗಳ ಕಣ್ಣು ಅದರ ಮೇಲೆ.
ಹಳೆ ಮುಪ್ಪು ಕುಳಿತಾಗ ಗೋಡೆಗೊರಗಿಸಿ ಬೆನ್ನ
ಅದರ ಕಣ್ಣೇ ಎಲ್ಲ ಹೆಣ್ಣುಗಳ ಮೇಲೆ !

ಇಂಥ ಹೆಣ್ಣಿನ ಗಂಡ ತಾನೆಂದುಕೊಳ್ಳಲಿಕೆ
ಒಂದು ಕಾಲಕ್ಕಿತ್ತು ಬಹಳ ಹೆಮ್ಮೆ.
ಅಂತೆ 'ಸೀತಾರಾಮ' ಅಂದು ಸೀತೆಯ ಗಂಡ.
ಇಂದೋ ? ತದ್ವಿಪರೀತ !-ರಾಮನ ಸತಿ !

ಕತ್ತಲಲಿ ಬತ್ತಲಾಗುವುದೇನೇನು ಹೆಚ್ಚಲ್ಲ -
ಬೆಚ್ಚನೆಯ ಸಖ್ಯದೇಕಾಂತದಲ್ಲಿ.
ನಿಚ್ಚಳಕ ಬಯಲಲ್ಲಿ ಬಟ್ಟೆದೊರೆವೆಯ ಹೇಳು -
ನೆಟ್ಟ ಕಣ್ಗಳ ಅನೇಕಾಂತದಲ್ಲಿ !

ವಿಶ್ಲೇಷಣೆ :

ಮಹಾ ಅಂಕಣಕಾರ ಹಾಗೂ ಕನ್ನಡ ಸಂಸ್ಕೃತಿಯ ಶ್ರೇಷ್ಠ ಸಂವಾಹಕರಾದ ಎಚ್.ಎಸ್. ಕೆ .ರವರ ಕವನ ಸಂಕಲನ, *ಧವನದಕೊನೆ* ಇಂದ ಆರಿಸಲ್ಪಟ್ಟ *ನೂರು* *ತುಣುಕು* ಕವನದ ಬಗ್ಗೆ ನನ್ನ ಅನಿಸಿಕೆಗಳನ್ನು ತಿಳಿಸ ಬಯಸುತ್ತೇನೆ.

ಈ ಕವನದಲ್ಲಿ ಕವನಕಾರರು ಮನುಷ್ಯನ ಸ್ವಭಾವ ಮತ್ತು ವ್ಯಕ್ತಿತ್ವವ ನ್ನು ಕುರಿತು ಬರೆದಿದ್ದಾರೆ. ಹೊಸ ಹರೆಯದಲ್ಲಿ ಮೈಯಲ್ಲಿ ಶಕ್ತಿ ಇರುವಾಗ ಜನರ ನಿರೀಕ್ಷೆ ಬಹಳ ಇರು ವುದು. ಶಕ್ತಿ ಇಲ್ಲದಾಗ ದೀನ ವಾಗಿ ಸಹಾಯಕ್ಕೆ ಬೇರೆಯವರ ನ್ನ ಅವಲಂಬಿಸ
ಬೇಕಾಗುತ್ತೆ.
ಮನುಷ್ಯನ ಹತ್ತಿರ ಎಲ್ಲಿಯ ತನಕ ಹಣ, ಅಧಿಕಾರ, ಸಿರಿವಂತಿಕೆ ಇರುವುದೋ "ದುಡ್ಡೇ ದೊಡ್ಡಪ್ಪ"ಎಂಬಂತೆ ಎಲ್ಲರೂ ಅವರ ಹಿಂದೆ ತಮ್ಮ ಕಾರ್ಯ ಸಾಧನೆ ಗಾಗಿ ಹಿಂಬಾಲಿಸುವರು.
ಅದು ಇಲ್ಲದಿದ್ದಾಗ ಯಾರೂ ಅವರ ಕಡೆ ತಿರುಗಿ ಕೂಡ ನೋಡುಡುವುದಿಲ್ಲ ಎಂಬ ಭಾವ ಕೂಡ ವ್ಯಕ್ತ ವಾಗುತ್ತದೆ.
ಮನುಷ್ಯನೆಷ್ಟು ಅವಕಾಶ ವಾದಿ, ಸಮಯ ಸಾಧಕ ಎಂದೆನಿಸುತ್ತದೆ.
ಹಳೆ ಮುಪ್ಪು ಕುಳಿತಾಗ ಗೋಡೆ ಗೊರಗಿಸಿ ಬೆನ್ನ...ಶಕ್ತಿ ಇಲ್ಲದಾಗ ಧೀನವಾಗಿ ಇತರರಿಂದ ಸಹಾಯವನ್ನು ನಿರೀಕ್ಷಿಸು ವ ಪರಿಸ್ಥಿತಿ ಬರುತ್ತದೆ.ಎಂಬುದು ಅವರ ಅಭಿಪ್ರಾಯ ಇರಬಹುದೆ?

ಮುಂದೆ ಕವನ ಕಾರರು ಅಂದಿನ ನಾರಿ ಹಾಗೂ ಇಂದಿನ ಮಹಿಳೆಯ ಪರಿವರ್ತನೆಯ ಬಗ್ಗೆ ಬಣ್ಣಿಸಿದ್ದಾರೆ.ಅಂದು ಸೀತೆ ಸ್ತ್ರೀ ಸಚ್ಚಾರಿತ್ರ್ಯ ದ ಪ್ರತಿರೂಪ ವಾಗಿದ್ದಳು.ಸಮರ್ಪಣೆ,ಸ್ವಯಂತ್ಯಾಗ, ಧೈರ್ಯ ಮತ್ತು ಶುದ್ಧತೆಗೆ ಹೆಸರಾಗಿದ್ದಳು. ಶ್ರೀ ರಾಮನನ್ನು ನೆರಳಿನಂತೆ ಹಿಂಬಾಲಿಸುತಿದ್ದಳು. ಅಂತಯೇ *ಸೀತಾರಾಮ* ಎಂದು ರಾಮನನ್ನು ಕರೆಯುತ್ತಾರೆ. ಆದರೆ ಇಂದು ಎಲ್ಲಾ ತದ್ವಿರುದ್ದ! ಅಂದು ಸಂಬಂಧಗಳು ಧೀರ್ಘ ಕಾಲ ಉಳಿಯುತ್ತಿತ್ತು.ಆದರೆ ಇಂದಿನ ಸಂಬಂಧಗಳು,

ಆದರ್ಶಗಳು ಸಮಯಕ್ಕೆ ತಕ್ಕಂತೆ ಬದಲಾಗುತ್ತಿವೆ.ಜೀವನದ ಮೌಲ್ಯಗಳು ಮರೆಯಾಗುತ್ತಿದೆ,ಈ ಕಾರಣಕ್ಕಾಗಿ ಹೆಣ್ಣನ್ನು ಕುರಿತು ಈಗ *ರಾಮನ* *ಸತಿ* ಎಂದು ಕವನ ಕಾರರು ಅಭಿಪ್ರಾಯ ಪಟ್ಟಿರಬಹುದೆ?ಅದೇನೇ ಇದ್ದರೂ,
ಇಂದಿನ ಮಹಿಳೆ ಬಹಳಷ್ಟು ಬದಲಾಗಿದ್ದಾಳೆ.
ಪುರುಷ ಪ್ರಧಾನ ವಾಗಿದ್ದ ಸಮಾಜ ಇಂದು ಬದಲಾಗಿದೆ.ಇಂದಿನ ಸ್ತ್ರೀ ಅಬಲೆಯಲ್ಲ.'ವಿದ್ಯೆ ಕಲಿತ ನಾರಿ ದೇಶಕ್ಕೆ ದಾರಿ ' ಎಂಬಂತೆ ,
ಪ್ರತಿಯೊಂದು ಪುರುಷನ ಯಶಸ್ಸಿನ ಹಿಂದೆ ಒಂದು ಮಹಿಳೆ ಇರುತ್ತಾಳೆ ಎಂದರೆ ತಪ್ಪಾಗುವುದಿಲ್ಲ.....

ಮುಂದೆ ಕವನ ಕಾರರು ಯಾರೇ ಆಗಲಿ, ನ್ಯಾಯ ವಾದುದನ್ನು,ತಮಗೆ ಸರಿಯಾಗಿ ಕಂಡಿದ್ದನ್ನು ಯಾವ ಹಿಂಜರಿಕೆ ಇಲ್ಲದೇ ಎಲ್ಲರ ಎದುರಿಗೆ ಹೇಳಬೇಕು.ಸಾಮಾನ್ಯ ವಾಗಿ ಮನುಷ್ಯನ ಸ್ವಭಾವ ಹೇಗೆಂದರೆ ಎಲ್ಲರ ಸರಿ ತಪ್ಪುಗಳನ್ನು ಬೆನ್ನ ಹಿಂದೆ ಟೀಕೆ ಮಾಡುವುದುಂಟು.
ಹಲವು ಬಾರಿ ನಾವೇ ಮಾಡಿದ ತಪ್ಪನ್ನು ಒಪ್ಪಿಕೊಳ್ಳದೆ ಮನದಲ್ಲೇ ಪರಿತಪಿಸಿ ಕೊರಗುತ್ತೇವೆ.ಎಲ್ಲರೆದುರಿಗೆ ನಮ್ಮ ತಪ್ಪನ್ನು ಒಪ್ಪಿ ಕೊಳ್ಳುವುದೇ ದೊಡ್ಡತನ... ನಿಬ್ಬೆಳಕ ಬಯಲಲ್ಲಿ ಬಟ್ಟೆ ದೊರೆವೆಯ ಹೇಳು..ನೆಟ್ಟಕಂಗಳ ಅನೇಕಾಂತದಲ್ಲಿ...ನ್ಯಾಯ ಮತ್ತು ಸತ್ಯ ವಾದು ದನ್ನು ಯಾವ ಹಿಂಜರಿಕೆ ಇಲ್ಲದೇ ಎಲ್ಲರ ಎದುರಿಗೆ ಹೇಳುವ ಛಲ ವಿರಬೇಕು ಎಂಬುದು ಕವನ ಕಾರರ ಅಭಿಪ್ರಾಯ ವಾಗಿರಬಹುದು.

ಕವನ - ಬಿಡುಗಡೆಯ ದಿನ - ಕೆ.ಆರ್.ಎಸ್ ಮೂರ್ತಿ

ನಟ್ಟಿರುಳು.
ದಟ್ಟ ಕತ್ತಲ ನಡುವೆ ಮೂಡಲೋಕುಳಿಯಾಟ -
ಹಾರಿ ಥಟ್ಟನೆ ನೆತ್ತಿ ಮೇಲೇರಿ ವಿಸ್ತರಿಸಿ,
ಹರಿಸಿ ಬೆಂಕಿಯ ಲಾವ, ಹೊಗೆ ಉಗುಳಿ, ತಿರ್ರನೆ ತಿರುಗಿ
ಒಡೆದು ಇಪ್ಪತ್ತಾರು ಸರಳಾಗಿ, ಈಟಿಯ ರೀತಿ
ಎದೆ ಎದೆಗೆ ನಾಟಿ ಚಿಮ್ಮಿಸುತಿತ್ತು ರಕ್ತದ ಕೋಡಿ,
ಜಗವೆ ಮಲಗಿದ್ದಾಗ ಬಿದ್ದ ಕನಸನ್ನೆಲ್ಲ ಅಳಿಸಿ ಖೋಡಿ !
ಪಾಂಡವರ ಪಾಳೆಯಕೆ ನುಗ್ಗಿ ಮಕ್ಕಳ ರುಂಡ
ಚೆಂಡಾಡಿ, ದೌಪದಿಯ ಸಿರಿಮುಡಿಗೆ ಕೈ ನೀಡಿ,
ಸೆಳೆದು ಸೀರೆಯ ಸೆರಗ ಬೀಗಿ ಗಹಗಹ ನಕ್ಕು
ಸ್ವಚ್ಛಂದವಾಗಿ !

ಖಾಂಡವದ ಹೋಳಿ ಹುಣ್ಣಿಮೆ ಜೊತೆಗೆ ಕುಂಭದ್ರೋಣ
ಧೋ ಧೋ ಧೋ ನಾಯಿ ಬೆಕ್ಕು !
ಚೀರು ಬಗುಳಿಕೆ ಸಿಡಿಲು, ಆಲಿಕಲ್ಲಿನ ಎರಚು,
ಹಿಮಗಿರಿಯ ಜಡೆಯಿಂದ ಹರಿದ ಭೀಕರ ಮಹಾ -
ಪೂರದಬ್ಬರ ರಭಸ, ಬಡತನ ರೇಖೆ -
ಯಳಿಸಿ ಜೋಪಡಿ ಸಾಲು ನೆಲಸಮ :

ಸಮತೆಯ ಕೆಲಸ !
ಕೇಳಿದೆಯ ತುತ್ತೂರಿ ?
ಹುತಾತ್ಮರ ಗೌರವ !
ಡೋಲು, ಡಮರು, ಕುಶಾಲು
ತೋಪು, ಬಿಡುಗಡೆ ಹಾಡು.
ಹೆಣ್ತನದ ಸೀಮೆಯುಲ್ಲಂಘನೆಯ ಸ್ವಾತಂತ್ರ್ಯ

ಮುರಿದ ಗುಡಿಸಿಲ ನೆಮ್ಮ -
ದಿಯ ಗೋರಿ ಮೇಲೆದ್ದ
ಹೊಸ ಸೃಷ್ಟಿಕಾರ್ಯ !
ಮತ್ತೆ ಚಕ್ರದ ಉರುಳು.
ಏಳು, ಕಣ್ಣೊರೆಸಿಕೊ.
ನಗಲಾರೆಯಾ, ಹೇಳು !

ವಿಶ್ಲೇಷಣೆ :

ನನ್ನ ಅಭಿಪ್ರಾಯದಲ್ಲಿ ಈ ಕವನದಲ್ಲಿ ಎಚ್ಚೆಸ್ಕೆ ಅವರು ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಿದಾಗ
ಅಂದರೆ ಭಾರತ ಅವರ ಕಟ್ಟುಗಳಿಂದ ಬಿಡುಗಡೆ ಹೊಂದಿ ಸ್ವತಂತ್ರವಾದಾಗ ದೇಶ ವಿಭಜನೆಯಾಗಿ,
ಭುಗಿಲೆದ್ದ ಕರಾಳ ದಿನಗಳ ನೆನಪು ಕಾಡಿ
ಅದು ಎಂಥಹ ಬಿಡುಗಡೆ ಎಂದು ತಮ್ಮ ನೋವನ್ನು ತೋಡಿಕೊಂಡಿದ್ದಾರೆ.

ಭಾರತಾದ್ಯಂತ ನಡೆದ ಕೋಮು ಗಲಭೆಯಲ್ಲಿ
ಎದ್ದ ಜ್ವಾಲಾಮುಖಿ ಆಗಿನ ರಾಜರ ಅಳ್ವಿಕೆಯ ೧೭ ಪ್ರಾಂತ್ಯಗಳಲ್ಲಿಯೂ ಹಗೆಯ ಹೊಗೆ ಹೊತ್ತು
ಊರೂರುಗಳಲ್ಲಿ ಬಡವರು, ಬಲ್ಲಿದರು, ಹೆಂಗಸರು ಮಕ್ಕಳೆನ್ನದೆ ಲಕ್ಷಾಂತರ ಅಮಾಯಕರನ್ನು
ಸಜೀವವಾಗಿ ಸುಟ್ಟು ಬೂದಿ ಮಾಡಿದ್ದು - ಅವರಿಗೆಲ್ಲ ಜೀವನದಿಂದ ಬಿಡುಗಡೆಯ ದಿನ ಆಯಿತೇನೋ
ಎಂಬಂತೆ ಕಂಡಿದ್ದಾರೆ. ಆಗ ನಡೆದ ಅತ್ಯಾಚಾರ, ಹಿಂಸಾಚಾರಗಳನ್ನು
ಅವರು ಮಹಾಬಾರತದ ಉಪಪಾಂಡವರ ಸಂಹಾರ, ದ್ರೌಪದಿಯ ಅಪಮಾನಗಳಿಗೆ ಹೋಲಿಸುತ್ತಾರೆ.
ಆ ದುರುಳುತನಕ್ಕೆ ಇದು ಸಮಾನ ಎನ್ನುವಂತೆ.

ಭಾರತ ಕತೆಯಲ್ಲಿ ಬರುವ ಖಾಂಡವ ದಹನದ ಚಿತ್ರ ಕಟ್ಟಿಕೊಡುತ್ತ ಜನರು ಅಂದಿನ ದಿನಗಳಲ್ಲಿ
ಗುಡುಗು, ಸಿಡಿಲಿನ ಅಬ್ಬರದ ನಡುವೆ ನಾಯಿ- ಬೆಕ್ಕುಗಳ ಕಚ್ಚಾಟದಂತೆ ಕಲ್ಲು ತೂರಾಡಿ ಕಚ್ಚಾಡಿದ್ದನ್ನು
ನೆನಪಿಸಿಕೊಳ್ಳುತ್ತಾರೆ.

ಒಳಗೊಳಗೇ ಹೆಪ್ಪುಗಟ್ಟಿದ ದ್ವೇಷ ಮಹಾಪೂರದಂತೆ ಹರಿಯುತ್ತ ಮನೆ-ಮಾಡುಗಳ ನೆಲಸಮ
ಮಾಡಿದ್ದನ್ನು ಸಂಕಷ್ಟದ
ಬಿಡುಗಡೆಗೆ ಹೋಲಿಸಿ
ಈಗ ಅದೋ ... ಎಲ್ಲ ಸಮ, ಸಮ ಎಂಬ ಸಮತೆಯ ವಿಡಂಬನೆ ಮಾಡಿದ್ದಾರೆ.

ಇಷ್ಟೆಲ್ಲಾ ಆದಮೇಲೆ ಸ್ವಾತಂತ್ರ್ಯ ಸಂಭ್ರಮಾಚರಣೆ ಇಲ್ಲದಿದ್ದರೆ ಹೇಗೆ? ಹುತಾತ್ಮರಿಗೆ ಗೌರವ,
ಕುಶಾಲ ತೋಪು,
ತುತ್ತೂರಿ, ಡೋಲು, ಹೊಡೆಯಲೇಬೇಕಲ್ಲ...
ನವ-ನಿರ್ಮಾಣವಾಗಬೇಕಲ್ಲ...

ಮಸಣದಲ್ಲಿನ ಗೋರಿಯಮೇಲೆ ಈ ಕಾರ್ಯ!
ಕಾಲ ಹಳೆಯದನ್ನು ಮರೆಸುತ್ತಾ ಹೊಸಬದುಕಿನೆಡೆಗೆ ಸಾಗುತ್ತದೆ. ಕಣ್ಣೀರಿಡುವ ಬದಲು ಈಗ
ನಗಬಾರದೇಕೆ ಎಂಬ ನೋವು ತುಂಬಿದ, ಪರಿಹಾಸ್ಯದ ಮಾತಿನಲ್ಲಿ ಕವನಕ್ಕೆ ಮುಕ್ತಾಯ ಹೇಳುತ್ತಾರೆ.

ಕವನ - ನನ್ನ ಬಗ್ಗೆ - ಕೆ.ವೆಂಕಟಸುಬ್ಬಯ್ಯ

ಯಾರೆ ಒಪ್ಪಲಿ ಬಿಡಲಿ
ನನ್ನ ಬಗ್ಗೆ ನನಗೊಪ್ಪಿಗಿ,
ಹಿಡಿಸಲೊಲ್ಲದು ತಲೆಗೆ
ಬೇರೊಬ್ಬರ ಟೊಪ್ಪಿಗೆ.

ನಾನೆ ನನ್ನ ಮೊದಲ ಪ್ರೀತಿ,
ಇಲ್ಲ ನನಗೆ ಭೀತಿ,
ನನ್ನ ಬಗೆಯೆ ಅಧಿಕ ನನಗೆ.
ಅದೇ ನನ್ನ ಕೊಪ್ಪರಿಗೆ.

ನಡು ಬೀದಿಯ ಧೂಳು ಗಲಭೆ
ಹಮ್ಮು ಬಿಮ್ಮು ಕೆಸರಾಟ
ಹೆಸರು ಕೀರ್ತಿ ಬರೀ ಭ್ರಾಂತಿ
ಕಡಲ ತೆರೆಯ ರೀತಿ.
ಎಲ್ಲ ಬರಿಯ ಆರ್ಭಟ.

ನನಗೆ ನನ್ನ ಗೆಳೆತನ.
ಇದರಲ್ಲೇ ಹೊಸತನ.
ಬೇಕೆಂದುದು ಸಿಕ್ಕದೇನು ?
ಬಯಸಿದ್ದೇ ಬೇಕೇನು ?
ದೊರಕೀತು ನೀಲಿ ಬಾನು :
ಹಗಲು ಬೆಳಕ ಹೊನ್ನು,

ಇರುಳು ಬೆಳ್ಳಿ ಕಣ್ಣು,
ಹಗಲು ಇರುಳು ಬೆರಗು ನೋಟ -
ಇಷ್ಟು ಸಾಲದೇನು ?

ಇಳೆಯ ಕೆಳೆತನವನ್ನು
ಗೌರವಿಸಿ ಪ್ರೀತಿಸಲು
ಅದಕೆ ಮಿಗಿಲೇನು ?
ಬದುಕು ಇಷ್ಟಲ್ಲದೆಯ
ಬೇರೆ ಏನು ?

ಬೇಕೆಂದುದು ಬೇಕು ಏಕೆ ?
ತಿಳಿಯಬಲ್ಲೆ ಅದನ್ನು ಹೇಗೆ ?
ನನ್ನ ನಡೆ, ನನ್ನ ನುಡಿ
ಬೇರೆ ಜನಕೆ ಹಿಡಿಸದಿರಲು

ಅದಕೆ ಚಿಂತೆ ಏಕೆ ?

ಬಯಸಿದ್ದು, ಬಯಸದ್ದು,
ದೊರಕಿದ್ದು, ದೊರಕದ್ದು,
ಹಿಡಿಸಿದ್ದು, ಹಿಡಿಸದ್ದು,
ದ್ವೇಷಿಸಿದ್ದು -
ಎಲ್ಲವನ್ನೂ ನಾನು
ಪ್ರೀತಿಸುವುದನ್ನೇ
ಕಲಿತುಕೊಂಡಿದ್ದೇನೆ,
ಅಂತೆ ನಡೆದಿದ್ದೇನೆ.

ಏನೆ ಬಂದರು ಬರಲಿ,
ಏಕೆ ಬೇಡೆನಲಿ ?
ಎಲ್ಲಕ್ಕು ಎದೆಯಲ್ಲಿ
ಸ್ಥಾನವಿರಲಿ.

ಕವನ - ಗುಲ್ಮೊಹರು - ಶ್ರೀಮತಿ ಮಾಲತಿ ಶ್ರೀನಿವಾಸನ್

ನೆಲದ ಪದರುಗಳಿಂದ ಎದ್ದು ಕಾಡುತ್ತಿವೆ,
ನೋವುಗಳ ಸಾವುಗಳ ಹಲವೆಂಟು ನೆನಪು ;
ಹುದುಗಿ ಅಸ್ತವ್ಯಸ್ತ ಹೊಂಚುಕಾಯುತ್ತಿವೆ,
ನೀಲ ಮಲಗಿದ ನೆರಳು, ಗೋರಿಯಡಿ ತಂಪು.

ಬಿಸಿಲ ಚುರುಕಿನ ನಡುವೆ ಚಳಿ ನಡುಕ ಬೇಸರ,
ಕಿಟಕಿಯಾಚೆಗೆ ನೆಳಲು-ಬೆಳಕುಗಳ ಹಂದರ.
ಪಸರಿಕೊಂಡಿದೆ ಅಲ್ಲಿ ಹಸುರುಡಿಗೆ ಹೆಮ್ಮರ,
ಕೊಂಬೆ ರೆಂಬೆಯ ಹೆಣಿಕೆ, ಗಿಲಿಕೆ ದನಿ ಚಪ್ಪರ,
ಎಳೆ ರಾಗದ ನೂಪುರ,
ವೀಣೆ ಮೆಟ್ಟಿಲ ಮೇಲೆ
ಬೆರಳಾಡಿದ ಸಪುಳ.

ಗುಲ್‌ಮೊಹರು, ದಿಲ್ ಮಹಲು
ಜಗ ಜಗ ಜಗ ಜಗವೆಲ್ಲ.
ನಾಡೆ ಕಾಡಾಯಿತೋ,
ಕಾಡೆಲ್ಲ ಉರಿಯಿತೋ,
ಕಾಡ ದೇವಿಯೆ ಚೆಲುವು
ತಂಬಿ ಉರಿಯುವ ತೇರ
ಏರಿ ಹೊರಟಳೊ ಯಾತ್ರೆ
ಎನ್ನುವ ತರ.

ಆದರೇನೋ ಒಳಗೆ
ಹೇಳಲಾಗದ ನೋವು,
ಬೇಸರ, ಕಾತರ
ನೆನಪಿನಾಳದೊಳೆಲ್ಲೊ
ಪದರು ಪದರಿನ ನಡುವೆ
ದಟ್ಟ ಹಬ್ಬದ ಸೆರಳು,
ನೀಳ ಮಲಗಿದ ಗೂಢ
ಕಂಕಾಲ ಸಾಲು.

ವಿಶ್ಲೇಷಣೆ :

ಈ ಕವನದಲ್ಲಿ ಕವಿ ಕಾಡಿನಲ್ಲಿ ಹೆಮ್ಮರವಾಗಿ ಬೆಳೆದು
ವರುಷದಲ್ಲಿ ಕೇವಲ ಚೈತ್ರವೈಶಾಖದಲಿ ಕೆಂಪುಹಳದಿ
ಹೂವಿನ ಸುಂದರತೆಯಲಿ,ಮೆರೆವ ಗುಲ್ಮೊಹರ ಮರದ ಬಗ್ಗೆ ಹೇಳುತ್ತಾ, ಅದರ ಸುಂದರತೆ,ಸಂಭ್ರಮದ ಅರಳುವಿಕೆಯ
ಕ್ಷಣಿಕತೆಯನ್ನು ಮನದ ಭಾವಗಳ ಏರುಪೇರಿಗೆ ಜೀವನದಲ್ಲಿ ವಿನೋದ ವಿಷಾದಗಳ

ಆಟಕ್ಕೆ ಹೋಲಿಸಿದ್ದಾರೆ.
ಬದುಕಿನಲ್ಲಿ ,ವೈರುಧ್ಯಗಳಾದ ಸುಖ ದುಃಖ,ನೋವು ನಲಿವು ,ಸಂತಸ ವಿಷಾದದ ಭಾವಗಳು ಒಂದೇ ನಾಣ್ಯದ ಎರಡು ಮುಖಗಳಂತೆ ಒಂದರ ಹಿಂದೆಇನ್ನೊಂದು ತಣ್ಣನೆ ಮನದಾಳದ ಪದರುಗಳಲಿ ಅಡಗಿ,ಮನಕೆ ಎಷ್ಟೊಂದು ಸಿಹಿ ಕಹಿ ನೆನಪುಗಳ ಭಾವ ತುಂಬಿ,ಮನದ ಸಂತುಲತೆ ಅಸ್ತವ್ಯಸ್ತಗೊಳಿಸಲು ಹೊಂಚುಹಾಕುತ್ತಿರುತ್ತವೆ ಇದನ್ನು ಮಾರ್ಮಿಕವಾಗಿ ಮುಂದಿಟ್ಟಿದ್ದಾರೆ.

ಈ ರಂಗು ರಂಗಿನ ಜೀವನದಲ್ಲಿ ಸುಖ ಸಂತಸದ ಸಂಭ್ರಮದ ಹಿಂದೆ(/ಜೊತೆ) ದುಃಖ ,ನಿರಾಶೆ ಹಾಗೂ ವಿಷಾದದ ಛಾಯೆ. ಹಚ್ಚಹಸುರಿನ ಮರದಹಿಂದಿರುವ
ಕರಿನೆರಳ ಛಾಯೆಯಂತೆ ಮನವ ಹಿಂಬಾಲಿಸುವುದು ,
ಸಾಲಾಗಿ ಮಲಗಿರುವ ಗೋರಿಗಳೊಳಗಿನ ಹೆಣಗಳ ಅವಶೇಷಗಳಂತೆ ,ನೆನಪಿನ ಪದರುಗಳಲಿ ಹುದುಗಿ,
ಬದುಕಿನ ಪ್ರತಿಹಂತದಲ್ಲೂ ಮನಸ್ಸನ್ನು ಕಾಡುವುದು
ಸತ್ಯ.

ಪ್ರಕೃತಿಯಲ್ಲಿ ಸುಂದರ ಸಸ್ಯಗಳು ನಳನಳಿಸುತ್ತಿದ್ದರು
ಜೊತೆಯಲ್ಲಿ ನೆರಳಿನ ದಟ್ಟ ಛಾಯೆ ಕತ್ತಲ ಹರಡುವಂತೆ
ಹೊರನೋಟಕ್ಕೆ ಸಂತಸ ಸಂಭ್ರಮವೆನಿಸಿದರು, ಭಾವನೆಗಳ ಬೆಚ್ಚನೆಯ ಕಾವಿನಲ್ಲಿ ಮನ ಚಿಂತನೆಗೆ
ಸರಿದಾಗ ಮನದಾಳದ ಕಿಂಡಿಯಿಂದ, ನೂರಾರು
ಸಿಹಿಕಹಿನೆನಪುಗಳ ಚಿತ್ರಣ.
ಮನಕೆ ಹತ್ತಿರ ಇದ್ದವರೊಡನೆ ಕಳೆದ ಮಧುರ ಕ್ಷಣಗಳ
ನೆನಪು ಶ್ರುತಿ ಲಯ ಸೇರಿ ಹಿತವಾಗಿ ವೀಣೆಯತಂತಿಗಳ ಮೇಲೆ ಬೆರಳಾಡಿಸಿದಾಗ ಝೇಂಕರಿಸಿದ ನಿನಾದದಂತೆ ಮನದಲ್ಲಿ. ಇದು ಕ್ಷಣಿಕ.
ವರುಷಕೊಮ್ಮೆ ಚೈತ್ರವೈಶಾಖದಲಿ ಅರಳಿ, ಬೆಂಕಿಯ ಕೆನ್ನಾಲಿಗೆ ಸಿಡಿದಂತೆ ಪೂರ್ತಿ ಮರವನ್ನು ಅಕ್ರಮಿಸಿ ಮೆರೆಯುವ ಗುಲ್ಮೊಹರ ಹೂವಿನಂತೆ. ಊರದೇವಿ/ವನರಾಣಿ ಹೂವಿನ ತೇರಲ್ಲಿ ಹೊರಟಂತೆ ಪ್ರಕೃತಿ ಜಗಜಗಿಸಿ ಮೆರೆದರು ಚಿತ್ರ ಬದಲಾವಣೆ ಅನಿವಾರ್ಯ

ಬದುಕಿನ ಎಲ್ಲ ಸಂಭ್ರಮದ ನಡುವೆಯೂ ನೆನಪಿನಾಳ ದಲಿ, ಹೇಳಲಾಗದ ನೋವು,ಬೇಸರ,ದಟ್ಟವಾಗಿ ಹರಡಿ ಮನಸ್ಸನ್ನುಕಾಡುವುದು.

ಕವನ - ಇದ್ದೂ ಇಲ್ಲದವರು - ರಾಜೇಂದ್ರ

“ಬನ್ನಿ, ಸ್ವಾಮಿ !
ಏನಿಷ್ಟು ಅಪುರೂಪ !'
-ಮನೆಯೊಡೆಯರ ಪಲುಕು.
ಬಾಯ್ತುಂಬ ಸುಗ್ಗಿ ನಗೆ,
ಗತ್ತು, ಹೆಗ್ಗಳಿಕೆ.
`ಬಂದಿರಲ್ಲಾ ಕೊನೆಗು
ಬಡವನ ಕುಟೀರಕ್ಕೆ !”

ನಕ್ಕು ಒಳಹೊಕ್ಕೆ.
ಕಂಬ ಬೋದುಗೆ ಹೊತ್ತ ಹಂಕಣದ ಹರಹು.
ಎತ್ತರದ ಜಗುಲಿಯ ಮೇಲೆ ಚಿತ್ತಾರದ ಬಾಗಿಲು.
ನೆಲವೆಲ್ಲ ಬಿಳಿಯ ಶಿಲೆ -
ಹಾಸು, ರಂಗಿನ ನಕ್ಕಿ.
ಪಕ್ಕ, ಮೂಲೆಗೆ ತೆಕ್ಕೆಹಾಕಿ ನಿಂತಿದೆ ಮೇಜು,
ಬಿದರಿ ಹೂದಾನಿ.
ಗೋಡೆಯ ಚಿತ್ರ ಸೀತಾರಾಮ,
ದಮಯಂತಿ -
ರವಿವರ್ಮನ ಕುಶಲಕರ್ಮ.

ನಡುಮನೆಯ ಬಾಗಿಲ ಮೇಲೆ
ಕಾಡೆಮ್ಮೆ ತಲೆ ಕೋಡು !
ಕೆಕ್ಕರಿಸಿ ನೋಡುವ ಕಣ್ಣು !
ಆಚೀಚೆ ಹುಲಿ ಚರ್ಮ -
ತಲೆ ಕಾಲು ಉದ್ದನೆಯ ಬಾಲದ ಸಮೇತ !

ಕಣ್ಣು ಹಾಯ್ದಲ್ಲೆಲ್ಲ
ಹಳೆಯ ಕಾಲದ ನೆನಪು ತರುವ ಪೀಠ ಪೆಠಾರಿ
ಬೆಡಗು ಗೈರತ್ತು !
ಕಾಲವೇ ನಿಂತಿಲ್ಲಿ ಹೊಡೆದಿದೆ ಸಲಾಮು !

ನಡುವೆ ಸೂರಿಗೆ ನೇತುಬಡಿದ ರಸಬುರುಡೆ,
ಗೊಂಚಲು ದೀಪ,
ಪಂಜರದೊಳಗೆ ಕುಳಿತ ಪಂಚರಂಗಿ ಗಿಳಿ,
ಕೆಳಗೆ ದಪ್ಪನೆ ಬೀಟೆ ದುಂಡು ಮೇಜಿನ ಸುತ್ತ
ಆನೆ ಕಾಲುಗಳು !
ಅವಕೆ ಹೊದಿಸಿದ ಚರ್ಮ ಜಿಂಕೆಯದು -
ಕೃಷ್ಣಾಜಿನ :

ಮಡಿಗೆ ಮಡಿ, ಷೋಕಿಗೆ ಷೋಕಿ,
“ಇವೆಲ್ಲಾ ಇರೋದೇ ಕೂರೋಕೆ !
ಅಳುಕದಿರಿ !”

“ಇನ್ನೂ ಸಂಕೋಚವೇಕೆ ?
ಹಿಹಿ ! ಬಡವನ ಮನೆ.
ಫಲಹಾರ ಸ್ವೀಕರಿಸಿ.
ಹೆಚ್ಚಿಲ್ಲ –

ಬಾಳೆ ಕಿತ್ತಳೆ ಸೇಬು ಸಿಹಿಕಾರ ರಸಪಾನಕ.
ನನ್ನದೇನಿದೆ ಹೇಳಿ ! ಎಲ್ಲ ಒರಿಯರ ಪುಣ್ಯ.
ಮನೆ ಮಾರು ಹೊಲ ಗದೆ ಎಲ್ಲ ಧರ್ಮಕೆ ದತ್ತಿ.
ನಾನದರ ಸೇವಕನಷ್ಟೆ ! ಗೊತ್ತಾಯಿತೆ ?

ಕವನ - ದೇವರು - ನಾರಿ - ಜೂಕ್ ಬಾಕ್ಸ್ - ವಿಠಲ್ ಇಜೇರಿ

ಹೊನ್ನ ಮೂರ್ತಿಗೆ ಸದಾ ಚೋರರರ ಭಯ.
ಅದಕಾಗಿ ಕತ್ತಲೆಯ ಕೋಣೆ, ಬೀಗಮುದ್ರೆ.
ಜಗದೊಡೆಯನಿಗು ಕೂಡ ಸೆರೆಯ ನಿರ್ಬಂಧ.
ದೇವ ಭಕ್ತಾಧೀನ,
ಭಕ್ತನಿಗೆ ಚೆನ್ನದ ಧ್ಯಾನ.

ನಾರಿ ದೇವರ ರೀತಿ.
ಸ್ತ್ರೀ ಪೂಜೆಗೊಳುವಲ್ಲಿ ದೇವರಿಗು ಆನಂದ.
ಕೇಳಿಲ್ಲ ಆರ್ಷವಾಣಿ ?

ಒಲಿದು ವರಿಸಿದ ಮಡದಿ ಚೆಲುವಿನ ಗಣಿ.
“ನೀನೇ ನನ್ನ ಚೆನ್ನ !' ಎಂದರೇನೇ ಚೆನ್ನ -
ಅವಳ ಇನಿಯನಿಗೆ !
ಅಬಲೆ ತನ್ನವಳೆಂಬ ಹೆಮ್ಮೆ ಗಂಡಿಗೆ ಸದಾ.
ಅವಳು ಆಸ್ತಿ-ಕಳತ್ರ.
ಹೊರ ಜನರ ಕಣ್ಣಿಂದ ಅವಳ ರಕ್ಷಣೆಯೇ
ಮಹಾ ಭಾರ ! -
ಸರ್ವದಾ ಭಾರ್ಯೆ!
ಕರಿಯ ಪಾವಡ ಪರದೆ ಅವಳ ಮೈ ಪೂರ !
ಮನವೊಂದು ಮರ್ಕಟ!
ಅದರಿಂದ ಎಚ್ಚರ !

ಮದಿರೆ ಮನದನ್ನೆ.
ಬಾರಿನೇಕಾಂತದಲಿ ಬೀರು ಹೀರುವ ಸಮಯ
ಕೋಣೆ ಮೂಲೆಯ ಜೂಕು ಪೆಟ್ಟಿಗೆಯ ನೆನಪು.
ಸೀಳುಗಂಡಿಯೊಳಕ್ಕೆ ನಾಣ್ಯವೊಂದನು ತೂರಿ
ಇಷ್ಟಗಾನದ ಸಂಖ್ಯೆ ಗುಂಡಿಯೊತ್ತಲು ಸಾಕು,
ಬಡಬಡಿಸತೊಡಗುತದೆ ಬಯಸಿ ಬೇಡಿದ ಹಾಡು -
ಸ್ವರ್ಗಕ್ಕೆ ನೇರ ಜಾಡು.

ಹೆಣ್ಣು ಕೂಡಾ ಒಂದು ಜೂಕು ಬಾಕ್ಸು
ಜೋಕು ಪೆಟ್ಟಿಗೆ,
ಆಕರ್ಷಕ ಆಟಿಕೆ !
ಗುಂಡಿಯೊತ್ತಲು ಗಂಡು,
ಹಾಡು ಕುಣಿತ !
ಆಟ ಮುಗಿದೊಡನೆಯೇ
ಆಟಿಕೆ ಸುಭದ್ರ -

ಪೆಟ್ಟಿಗೆಯ ಮುಚ್ಚಿ ಬಡಿದ
ಬೀಗಮುದ್ರೆ !

ವಿಶ್ಲೇಷಣೆ :

ಆತ್ಮೀಯರೇ, ನಾನು ಎಚ್ಚ. ಎಸ್.ಕೆ. ಅವರ ಕವನ " ದೇವರು - ನಾರಿ, ಜೂಕ ಬಾಕ್ಸ್ " ವನ್ನು ವಾಚನಕ್ಕೆ ಆರಿಸಿ ಕೊಂಡಿದ್ದೇನೆ. ಈ ಕವನದಲ್ಲಿ ಎಚ್ಚ.ಎಸ್ .ಕೆ. ಅವರು ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ದೇವರ ಬಗ್ಗೆ , ಸ್ತ್ರೀಯರ ಬಗ್ಗೆ ಜನರು ಹೇಗೆ ವರ್ತಿಸುತ್ತಾರೆ ಎಂಬುದನ್ನು ತಿಳಿಸುತ್ತಾರೆ.

ದೇವರು ಸಂಪತ್ತಿನ ಪ್ರತೀಕ.ಸಂಪತ್ತಿನ ಒಡೆಯ. ಆಸ್ತಿಕರು ದೇವರಿಗೆ ಚಿನ್ನದ ಮೂರ್ತಿ, ಚಿನ್ನದ ಆಭರಣಗಳಿಂದ ಶ್ರಂಗರಿಸುತ್ತಾರೆ. ನಾಸ್ತಿಕರು ಈ ಸಂಪತ್ತಿಗೆ ಕನ್ನ ಹಾಕಲೂ ತಯಾರು . ಆದುದರಿಂದ ಅಂಥವರಿಂದ ಸಂಪತ್ತು ಕಾಪಾಡಲು ದೇವರನ್ನು ಕತ್ತಲೆಯ ಗರ್ಭ ಗುಡಿಯಲ್ಲಿ ಭದ್ರವಾಗಿ ಬಾಗಿಲು ಮುಚ್ಚಿ ಬೀಗ ಹಾಕಿ, ದೇವರನ್ನೇ ಬಂದಿಯಾಗಿಸಿ ಬಿಡುತ್ತಾರೆ.

ಇನ್ನು ಸ್ತ್ರೀಯರ ಬಗ್ಗೆ ವಿವಿಧ ವರ್ಗದ ಜನರ ಅನಿಸಿಕೆಗಳನ್ನು ಹೀಗೆ ಪಟ್ಟಿ ಮಾಡುತ್ತಾರೆ. ಸ್ತ್ರೀಯರನ್ನು ಪೂಜ್ಯ ಭಾವದಿಂದ, ಗೌರವದಿಂದ ಕಾಣುವ, ಎಲ್ಲಿ ಸ್ತ್ರೀಯರಿಗೆ ಗೌರವ ಇದೆಯೋ ಅಲ್ಲಿ ದೇವರ ಅಸ್ತಿತ್ವವಿದೆ ಎಂದು ನಂಬಿದವರದು ಒಂದು ವರ್ಗ. ಇನ್ನು ಕೆಲವರು ಸ್ತ್ರೀಯರ ಅಂದ ಚಂದಗಳನ್ನು ನೋಡಿ ಮದುವೆಯಾಗುವರು, ನಂತರ ಆ ಚೆಂದದ ಚೆಲುವೆ ತನ್ನ ಆಸ್ತಿ, ಆಕೆ ಅಬಲೆ ಆಕೆ ಬೇರೆಯವರ ಕಣ್ಣಿಗೆ ಬೀಳದಂತೆ ಕಾಯುವವರದು ಇನ್ನೊಂದು ವರ್ಗ. ಮತ್ತೂ ಒಂದು ವರ್ಗವಿದೆ ಅವರದು ಐಷಾರಾಮಿ ಜೀವನ. ಸಂಜೆ ಬಾರುಗಳಲ್ಲಿ ಮದಿರೆ, ಮಾನಿನಿಯರ ಸಂಗದಲ್ಲಿ ಕಾಲ ಕಳೆಯುವರು. ಅಲ್ಲಿಯ ಹಾಡಿನ ಪೆಟ್ಟಿಗೆಗೆ ನಾಣ್ಯ ಹಾಕಿ ಮಾದಕ ಹಾಡು ಕೇಳುತ್ತ ಸ್ವರ್ಗ ಸುಖ ಅನುಭವಿಸುವರು. ಅವರ ಪಾಲಿಗೆ ಅಲ್ಲಿರುವ ಪರ ಸ್ತ್ರೀ ಕೂಡ ಒಂದು ಯಂತ್ರ. ಹಣ ನೀಡಿ ಆಕೆಯೊಂದಿಗೆ ಕುಣಿದು ಕುಪ್ಪಳಿಸುವರು. ಹೀಗೆ ಜನರ ಮನೋಭಾವವನ್ನು ತೆರೆದಿಡುವ ವಿಬಂಡನಾತ್ಮಕ ಕವನ ಇದು.

ಕವನ - ಶಿವರಾಮ ಕಾರಂತ - ಬಿ.ಎಸ್.ಶ್ರೀನಿವಾಸ್

ನಿಮಿಷಕ್ಕೆ ನೂರು ಪದ, ಹತ್ತಾರು ವಿಚಾರ.
ಎಚ್ಚರ ತಪ್ಪಿದರೆ ಲತ್ತೆ, ಮೈ ಮನಕೆ ಚುರುಕು.
ಮೂಕ ಕನಸಿನ ಲೋಕ ಅವರದಲ್ಲ.
ಪದ್ಮಾವರಣವನ್ನೆ ಶುದ್ಧಿಕರಿಸುವ ಛಲ.
ಎತ್ತಿ ಕೊಡಲಿಯ ಧ್ವಜದ ತೆರದಲಿ ಮೇಲೆ,
ಒತ್ತಿ ಬರುವ ಅನಿಷ್ಟ ಕೊಚ್ಚಿಹಾಕುವ ಲೀಲೆ,
ಯಕ್ಷಲೋಕದ ಕುಣಿತ ಬಣ್ಣ ಭಣಿತ.

ದೇವತೆಗಳು ಬೆದರುವಲಿ ನೇರ ನುಗ್ಗುವ ದಿಟ್ಟ.
ಮೂರ್ಖತೆಯದೇನಲ್ಲ. ಬೇರಾರು ಮಾಡದಿರೆ
ಮಾಡಲೇಬೇಕಲ್ಲ ? ಶೂನ್ಯ ಬಿಡುವುದು ಸಲ್ಲ.
ಅವರೊಬ್ಬರೇ ಎಲ್ಲ - ಸಕಲ ಚತುರಂಗಬಲ.
ಎಲ್ಲ ತೆರದಲು ಅವರು ಏಕಾಂಗವೀರ.

ಉಕ್ಕು ತಂತಿಯ ರೀತಿ ನೀಳ ದೇಹ,
ನೀಳ ಮುಖ, ನೀಳ ಮೂಗು :
ಅಗಲ ಹಣೆ, ಹೊಳೆಗಣ್ಣು -
ಪಾತಾಳಗರಡಿ !
ಹಿಂದೆ ಚಾಚಿದ ನೀಳ ಕೂದಲ ಹಲ್ಲೆ -
ಅನಿಸಿದ್ದನ್ನಾಡಬಲ್ಲ ದಿಟ್ಟಗಾರಿಕೆ.

ಅನ್ಯಾಯವಾದಾಗ ತಡೆಯಲಾರದ ಕ್ರೋಧ,
ಬಿಚ್ಚುಮಾತಿನ ಕೆಚ್ಚು
ದರ್ಪ ಬಡಿವಾರಕ್ಕೆ ಸೋಲಿಲ್ಲದ ಸಡ್ಡು :
"ತೆಗೆದುಕೋ ನೀ ಕೊಟ್ಟ ಎಲ್ಲ ಬಾವಲಿ ಬಿರುದು !'
ವ್ಯವಸ್ಥೆಯ ಮುಖಕ್ಕೆ ಅದನು ರಾಚುವ ಗಡುಸು
ದಾಕ್ಷಿಣ್ಯಕೆ ಬಸಿರಾಗಿ ಸತ್ಯ ಮಾಚುವುದೇಕೆ ?
ಆದರೂ ಕ್ಯೂ ಕಟ್ಟಿ ನಿಂತ ಪರಾಕು ಸಾಲು !
ಬಾಯಿ ಮುಚ್ಚಿಸಲೆಂದೆ ಈ ಎಲ್ಲ ಗರ್ನಾಲು.
ಆದರೆಲ್ಲಾ ಸೋಲು.

ಈ ವ್ಯಕ್ತಿ ಹುಷಾರು !
ಕೋಟ ಜಗದೊಳಗೇ ಅವರ ಹುಟ್ಟು
ಇಡೀ ಲೋಕವೆ ಮುಂದೆ ಗಂಡು ಮೆಟ್ಟು.
ಪ್ರಕೃತಿಯಲ್ಲಿಯ ವ್ಯಕ್ತಿ, ವ್ಯಕ್ತಿಯೊಳಗಿನ ಪ್ರಕೃತಿ
ಚಿತ್ರಿಸುವ ಕೃತಿಮಾಲೆ -
ತಿರುತಿರುಗಿ ಮಣ್ಣಿನೆಡೆ ಹರಿದ ನೋಟ.

ಚೋಮ, ಬೆಟ್ಟದ ಜೀವ, ಎಂದು ಮುಗಿಯದ ಯುದ್ಧ,
ಮೈಮನಸುಗಳ ಸುಳಿಗೆ ಸಿಲುಕಿ ಗಿರುಗಟ್ಟೆ ;
ಅಳಿದ ಮೇಲೂ, ಮೊದಲು
ಬದುಕಿನಾರೊಹಣವ,
ಅವರೋಹಣವನೆಲ್ಲ
ಅರಿವ ಮನಸಿನ ಅಳವು -
ಅವರ ಕಾಣ್ಕೆಯದೊಂದು ಬತ್ತದ ತೊರೆ :
ನಗೆ, ಹದಿರು, ಹೊಗೆ, ಹೊನಲು,
ಧಗೆ, ದಿಗಿಲು, ಅಳಲು :
ನೆನಪು ನಂದಾದೀಪ, ನೆನಕೆ ಅನುಕಂಪ ;
ಕನಸು ಕನವರಿಕೆಗಳು, ದಿಟದ ಬಾಳು -
ಕೃತಿಯ ರಂಗಸ್ಥಳದ ಎತ್ತರದ ವೇದಿಕೆಯೇರಿ
ನೆಳಲು ಬೆಳಕಿನ ಆಟ ಸಾಲು ಸಾಲು

ನೀಲ ಕಡಲ ವಿಶಾಲ ಮೇಲು ಪದರದ ಮೇಲೆ
ಕಾಣುವ ಹಿಮದ ಬಗ್ಗೆ ಒಂದು ಮಡಿ ಮಾತ್ರ
ನೀರಿನಾಳದ ಕೆಳಗೆ ಕಾಣದೆಯ ಅಡಗಿದ್ದೊ ?
ಏಳು ಮಡಿ ಗಾತ್ರ !
ಬಾಳ ಸಾಹಸ ಕಥೆಯ ಕೃತಿಗಳಲ್ಲಿ ಕಾಣಿಸಿದ್ಯೋಂದಿಷ್ಟೆ -
ಸಾಸಿವೆಯ ಕಾಳು !

ಅವರು ಸಂಪಾದಿಸಿದ ಅನುಭವದ ರಾಶಿಯೋ -
ಹಲವು ಪಾಲು !
ಕಲೆ ನಾಟಕ ಕಾದಂಬರಿ, ವಿಡಂಬನೆ, ವಿಜ್ಞಾನ,
ಶಿಕ್ಷಣ, ಉದ್ಯಮ, ಶಿಶುಲೋಕದೊಡನಾಟ -
ಅಬುವಿಂದ ಬರಾಮಕ್ಕು, ಅಪೂರ್ವ ಪಶ್ಚಿಮಕು,
ಆಚೀಚೆ ನಾಡಿಗೂ ಸರ್ವದಾ ಅಲೆದಾಟ,
ಹುಚ್ಚು ಮನಸು ಅದೊಂದು !
ಅದಕೆ ಹತ್ತು ಮುಖ,
ಅವರ ಕಲೆಗಾದರೂ -
ಅನಂತಾನಂತ ಮುಖ !

ಹಠ ಬಿಡದ ವಿಕ್ರಮನಂತೆ
ಸದಾ ಯಾವದೂ ಒಂದು
ಬೇತಾಳವನೆ ಹೊತ್ತು,
ಏನನೋ ಹುಡುಕುತ್ತ,
ಬೇರೇನಸೋ ತಡಕಿ
ನಡೆಯುವಾಟ ವರಾತ.
ಕಡಲ ರೀತಿಯ ಅವರ
ತವಕ ಮೊರೆತ.

ವೈಚಾರಿಕ ಪರಶು ಹಿಡಿದು
ತಳಮಳಿಸಿದ ಅವಧೂತ.

ವಿಶ್ಲೇಷಣೆ

ಈ ಕವನದಲ್ಲಿ ಪ್ರಾಚಾರ್ಯ ಎಚ್ಚೆಸ್ಕೆ ಯವರು ಕನ್ನಡ ನಾಡು ಕಂಡ ಅತ್ಯಂತ ಬಹುಮುಖ ಪ್ರತಿಭೆಯ ಮೇರು ವ್ಯಕ್ತಿತ್ವ ಶ್ರೀ.ಕೋಟ ಶಿವರಾಮ ಕಾರಂತರ ಹಲವು ಮುಖಗಳ ಪರಿಚಯವನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ.ಸಾಹಿತ್ಯ, ಯಕ್ಷಗಾನ,ಪರಿಸರ ಕಾಳಜಿ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ತಮ್ಮದೇ ಆದ ಗಾಢ ಪ್ರಭಾವವನ್ನು ಬೀರಿದ ಶಿವರಾಮ ಕಾರಂತರದು ದೈತ್ಯ ಪ್ರತಿಭೆ.ಪ್ರಾಚಾರ್ಯ ಎಚ್ಚೆಸ್ಕೆ ಯವರು ಶಿವರಾಮ ಕಾರಂತರ ವ್ಯಕ್ತಿತ್ವದ ಎಲ್ಲ ಮುಖಗಳನ್ನೂ ತಮ್ಮ ಕವನದಲ್ಲಿ ಸಮರ್ಥವಾಗಿ ಪಡಿಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.ಇಬ್ಬರು ಸಾಹಿತ್ಯ ದಿಗ್ಗಜರಿಗೂ ಅಭಿಮಾನಪೂರ್ವಕ ಅನಂತ ನಮನಗಳು

ಕವನ - ಕಾಲ ಬರುತ್ತಾನೆ- ಬಿ.ಎಸ್.ಚಂದ್ರಶೇಖರ

ಕಾಲ ಬರುತ್ತಾನೆ, ಸಾಯಂ -
ಕಾಲ ಬರುತ್ತಾನೆ :
ನೀಳ ಹಗಲಿನ ಲೀಲೆ ಮುಗಿಸಿ ಮಲಗಿದೆ ಜೀವ,
ಸುತ್ತ ಕುಳಿತಿವೆ ಎಲ್ಲ ನೋವು ಕಾವು.
ಕಂದು ಬೆಳಕಿನ ಹಣತೆ ಕಿಡಿ ಕೆದರುತಿದೆ ವ್ಯರ್ಥ.
ತೆರೆ ಸರಿಸಿ, ಒಳ ನುಸುಳಿ, ಗಾಳಿ ಕಿರಿಸುಳಿಯಾಗಿ,
ಮೈದಡವಿ, ಮುತ್ತಿಕ್ಕಿ, ತುಟಿಗೆ ತುಟಿ ಹಚ್ಚಿ,
ಮಧುರ ಮಾಯೆಯ ಚೆಲ್ಲಿ, ಉಸಿರೆಳೆದು ಮೆದುವಾಗಿ,
ಬಂದ ಸುಳಿವಿಲ್ಲದೆಯೆ ಮಾಯವಾಗುತ್ತಾನೆ.
ಕಾಲ ಬರುತ್ತಾನೆ, ಬದುಕಿನ ಸಾಯಂ -
ಕಾಲ ಬಂದೇ ಬರುತ್ತಾನೆ.

ಕಾಲ ಬರುತ್ತಾನೆ:
ದಿಢೀರನೆ ಎರಗುತ್ತಾನೆ.
ಮಿಂಚು ಬೀಸಿ, ಸಂಚು ಹೂಡಿ,
ಸಿಡಿಲು ಮಳೆ ಸುರಿಸಿ,
ಆಲಿಕಲ್ಲಿನ ಕವಣೆ ಗುರಿಯಿಟ್ಟು ಬೀಸಿ,
ಫಳಾರನೆ ಕೊಂಡೊಯ್ಯುತ್ತಾನೆ.
ಬೆಚ್ಚಿಬೀಳಿಸಿ, ಹುಚ್ಚೆಬ್ಬಿಸಿ ಹೊರಟುಹೋಗುತ್ತಾನೆ.
ಕಾಲ ಬರುತ್ತಾನೆ, ಹಾಡು ಹ -
ಗಲಿನಲ್ಲಿ ಗೋಳಿಡಿಸುತ್ತಾನೆ.

ಕಾಲ ಬರುತ್ತಾನೆ :
ಬೀದಿ ಬದಿಯಲ್ಲಿ, ರಂಗೋಲಿಯಡಿಯಲ್ಲಿ,
ರೈಲ ಹಳಿಯಲ್ಲಿ, ಡಬ್ಬಿಯ ಮೂಲೆಯಲ್ಲಿ,
ನಿಂಬೆಯ ಗರ್ಭದಲ್ಲಿ, ಎಳನಾಗರ ಹೆಡೆಯಲ್ಲಿ,
ಮಗ್ಗುಲ ಮುಳ್ಳಿನ ಹೊದರಿನಲ್ಲಿ
ಕಾಲ ಅವಿತಿರುತ್ತಾನೆ ;
ಮುಹೂರ್ತಕ್ಕೆ ಸರಿಯಾಗಿ,
ಆಮಂತ್ರಣ ನೀಡಿದಂತೆ,
ಹಣಿಕಿಕ್ಕುತ್ತಾನೆ,
ಕಿಚ್ಚು ಕಕ್ಕುತ್ತಾನೆ,
ಸಿಡಿದು ಚೆಲ್ಲಾಡುತ್ತಾನೆ,
ಕಾಲ ಬರುತ್ತಾನೆ.

ಕಾಲ ಬರುತ್ತಾನೆ :
ಪುಷ್ಪಗುಚ್ಛ, ಮೊನಚು ಹಲ್ಲು, ಚೂಪು ಗಲ್ಲ,

ಕಪ್ಪು ಪುತ್ತಳಿ, ಬಾಗಿದ ಶಿರ,
ಸರಿದ ಸೀರೆಯ ಸೆರಗು, ವೈಯಾರದ ಮೆರಗು,
ನಾಭಿಯಡಿಯಲ್ಲೇ ಹುದುಗಿಸಿದ ಹುನ್ನಾರು ;
ಸಿಡಿದ ಹಗೆ, ಭುಗಿಲು ಧಗೆ,
ತನ್ನೊಂದಿಗೆ ಎಲ್ಲವನೂ
ಸುಟ್ಟುರಿಸುವ ಬಗೆ:
ಎದೆ ಮನ ಕಾಲ್ಕೈ ,
ಇಡಿ ದೇಶದ ಕೈ ಮೈ
ಛಿನ್ನ ಛಿದ್ರ ಭೀಕರ !
ಕಾಲ ಬರುತ್ತಾನೆ -
ಕಾಳಿಯ ರೂಪದಲ್ಲಿ,
ಮುಂಗಾವಳ ಹೊತ್ತಿನಲ್ಲಿ.

ಕಾಲ ಬರುತ್ತಾನೆ -
ಹುಲಿ ವೇಷ, ಕರಡಿ ಕುಣಿತ,
ಪಂಜ ನಖ ಶಿಖೆ ದಂತ ಖಚಿತ.
ಬಣ್ಣ ಬಣ್ಣದ ಭಣಿತ,
ಮಂತ್ರ ಸ್ತೋತ್ರ,
ಘೋಷ ಆವೇಶ -
ನುಡಿಯೆ ಕಾಳ್ಗಿಚ್ಚು,
ಕೆನ್ನೀರ ಚೆಲ್ಲಾಟ, ತಲ್ಲೀನ ಸೈತಾನ :
ಕಾಲ ಬರುತ್ತಾನೆ -
ಪ್ರಳಯ ರುದ್ರನಾಗಿ !

ಕಾಲ ಬರುತ್ತಾನೆ -
ಕುಣಿಯುತ್ತ, ನಲಿಯುತ್ತ,
ಮಲೆತವರ ಮಣಿಸುತ್ತ,
ಶೂನ್ಯ ವಿಸ್ತರಿಸುತ್ತ,
ಕತ್ತಲನೆ ತುಂಬುತ್ತ,
ಹೊತ್ತು ಹೊತ್ತಿಗೆ ನಿತ್ಯ
ಹೊಸ ವೇಷ ತಳೆಯುತ್ತ,
ಹೊಸ ವಾಹನ ಏರುತ್ತ,
ಹೊಸ ಸಂಚು ಹೂಡುತ್ತ
ಕಾಲ ಬರುತ್ತಾನೆ, ಬರು -
ತ್ತಲೇ ಇರುತ್ತಾನೆ.

ಕವನ - ಎರಡು ನೋಟ - ಶಶಿಧರ ಹಾಲಾಡಿ

ಆಗಸದ ನೀಲಿಮೆಯ ಕೊಡೆಯ ತಳಗಡೆಯಲ್ಲಿ
ಕಂದು ಮೋಡಗಳ ಹರಕು ತೇಪೆ,
ಕೆಳಗೆ ಭೂಮಿಯ ಚಾಪೆ.

ಸಂಜೆಗಣ್ಣಿನ ಸೂರ್ಯ ಮುಳುಗಡೆಗೆ ಸಜ್ಜಾಗಿ
ತೊಟ್ಟುಕೊಂಡಿದ್ದಾನೆ ಈಜುನುಡಿಗೆ.
ಕೊಳದ ಆಳಕ್ಕೇ ತೋಳು ಚಾಚಿವೆ ಕಿರಣ,
ಎತ್ತಿ ಚೆಲ್ಲಿವೆ ನೂರು ನೀರಿನ ಹನಿ;
ಬೆಳಕಿನೆದುರಿಗೆ ಒಡೆದು ಏಳೇಳು ಬಣ್ಣಗಳ
ನೇದುಕೊಂಡಿವೆ ಹೊಳೆವ ನಿಡುಗೊಂಚಲು.
ನೆಲದಿಂದ ಭುಗಿಲೆದ್ದು ಆಕಾಶದೆತ್ತರಕೆ
ನೆಗೆಯುತ್ತಲಿದೆ ಜ್ವಾಲೆ -
ಖಾಂಡವ ವನ.

ಎದುರಿಗೇ, ಈ ತುದಿಗೆ, ನೆಲದ ಮೇಲೆಯೆ ನೀಳ
ಮಲಗಿರುವ ಕಪ್ಪನೆಯ ಮುಗಿಲ ರಾಶಿ :
ಗಿರಿಪಂಕ್ತಿ-ಹಿಮವಂತ ? ಕಿಲಿಮಾಂಜರೋ ?
ಎವರೆಸ್ಟು, ಗಿರಿಶಿಖರ -
ಹಿಮಗೋಪುರ ?

ಸೈಂಧವನ ಧಾಂಡಿಗನ, ಅಗಲ ಹೆಗಲಿನ ಮೇಲೆ
ನೀರ್ಗಲ್ಲ ತಲೆಬುರುಡೆ !

ಪ್ರಾಣವಾಯುವೆ ವಿರಳ, ನಿರ್ವಿಣ್ಣ, ನೀರವ -
ಕೊರೆವ ಶೀತ.
ಮೈಯೆಲ್ಲ ಉರಿಯೂತ
ಹಿಮದ ವ್ರಣ.

ಹೆಗಲಿನ ಅಡಿಯ ದೇಹ ಪಟ್ಟೆ ಪಟ್ಟೆಯ ಪಚ್ಚೆ
ಪೀತಾಂಬರ -
ಪುಷ್ಪರಾಜಿ.
ನಿತ್ಯಹರಿತ, ಉದುರುವೆಲೆ, ಸೂಜಿಮೊನೆ, ದಾರು,
ಕುರುಚಲು, ಪೈನ್, ಸಾಲ, ಪಾಚಿ, ಬರಡು -
ಮೆಟ್ಟಿಲೋ ಮೆಟ್ಟಿಲು !
ಕಂಡು ಕಾಣದ ನೀಳ ದೇಹಧಾರಿ ಯತಿ !

ಅತ್ತ, ಪಶ್ಚಿಮದಂಚು, ಪ್ರಳಯಕಾಲದ ಬೆಂಕಿ,

ಬಡಬಾಗ್ನಿ, ಕುಡಿಕೆ ಬಾಣ.
ಇತ್ತ, ಪೂರ್ವದ ಎಲ್ಲೆ, ದೈತ್ಯ ಪರ್ವತ ಶ್ರೇಣಿ,
ಹಿಮದ ಶಿಖರ -
ನೆಲದಿಂದ ದಿವಕೆಗರಿದ ಮೇಘ ಮೈನಾಕ.
ನಡುವೆ ತಳಮಳಿಸುತಿದೆ ತಿರೆಯ ವಿಸ್ತಾರ -
ಸಂಸಾರ ಪಾರಾವಾರ !

ಕವನ - ಭಾರತ ಜಯಗಾಥೆ - ಶ್ರೀಮತಿ ಪ್ರಮೋದಾ ಮೂರ್ತಿ

ಭಾರತ ಮಾತೆಯ ಜಯಗಾಥೆ
ಮೊಳಗಿದೆ ತಾರಾಪಥದಾಚೆ,
ಚೆನ್ನದ ಚೆಲುವಿನ ದಿವ್ಯ ಪ್ರಭೆ
ಬೆಳಗಿದೆ ಲೋಕದಿ ಎಲ್ಲರೆದೆ.

ಕೇಸರಿ ಪಚ್ಚೆ, ನಡುವೆ ಬಿಳಿ,
ಮೋಹದ ಬೆಡಗಿನ ಚೆಲುವು ಸಿರಿ,
ತ್ಯಾಗದ ಭೋಗದ ದಿವ್ಯಾಗಾರ
ಈ ನಲ್ ನಾಡಿನ ಮೌಲ್ಯಾಧಾರ.

ಇದೊ ಮೊಳಗಿದೆ ! ಇಗೊ ಮಿಂಚಿದೆ !
ಕತ್ತಲ ಸೀಳುತ ಹೊಮ್ಮುತಿದೆ !
ಭಾರತ ಬಿಡುಗಡೆ ಸಾರುತಿದೆ.

ಬಿಟಿಷರ ತಂತ್ರದ ಕತ್ತಿ ಮೊನೆ
ಹರಿಸಿದೆ ರಕ್ತದ ಕೋಡಿಯನೆ.
ಉಮ್ಮಳಿಸಿದೆ ಮನ, ಮುಳಿದ ಜನ,
ಹಬ್ಬಿದೆ ಎಲ್ಲೆಡೆ ದುಮ್ಮಾನ.

ಏನೀ ಘೋರ ! ಎಂಥ ದುರಂತ !
ಬಡಬಾಗ್ನಿಗೆ ಬಲಿ ಗಾಂಧೀ ತಾತ !
ಇನ್ನೆಲ್ಲಿಯ ಗುರಿ ! ಏನು ಗತಿ !

ಎದೆಗೆಡೆಲೊಲ್ಲದೆ ಏಳುವೆವು !
ನಾಡಿನ ಗುಡಿಯನ್ನು ಎತ್ತುವೆವು !
ರೇಖಾಲೇಖವ ತಿದ್ದುವೆವು !
ಕಟ್ಟೆ ಕಾರ್ಖಾನೆ ಕಟ್ಟುವೆವು !

ಅಣು ಸಿಡಿಸಿ, ನಭಕೇರಿ,
ಬಾರಿಪೆವೆಲ್ಲೆಡೆ ಜಯಭೇರಿ !
ನಾಡಿನ ಕೀರ್ತಿಯ ಎಲ್ಲೆಡೆ ಸಾರಿ !

ಭಾರತ ಮಾತೆಯ ಜಯಗಾಥೆ
ಮೊಳಗಿದೆ ತಾರಾಪಥದಾಚೆ.
ಚೆನ್ನದ ಚೆಲುವಿನ ದಿವ್ಯ ಪ್ರಭೆ
ಬೆಳಗಿದೆ ಲೋಕದಿ ಎಲ್ಲರೆದೆ.

ವಿಶ್ಲೇಷಣೆ :

ಶ್ರೀ ಮಾನ್ಯ ಎಚ್ಚೆಸ್ಕೆ ಅವರ ಕವನ ವಾಚನ. ಕವನದ ಶೀರ್ಷಿಕೆ "ಭಾರತ ಜಯಗಾಥೆ" ಈ ಕವನವನ್ನು "ತಿಂಗಳೂರಿನ ತೇರು" ಸಂಕಲನದಿಂದ ಆಯ್ದುಕೊಳ್ಳಲಾಗಿದೆ.
ಕವನ ವಾಚಿಸುತ್ತಿರುವವರು ಪ್ರಮೋದಾ ಮೂರ್ತಿ.

ಭಾರತದ ಸ್ವಾತಂತ್ರ್ಯ ಸುವರ್ಣೋತ್ಸವ ಸಂದರ್ಭದಲ್ಲಿ ಕವಿ ಈ ಕವನವನ್ನು ಬರೆದದ್ದು. ಇದರಲ್ಲಿ ಕವಿ ಭಾರತಕ್ಕೆ ಸ್ವಾತಂತ್ರ್ಯದ ಘೋಷಣೆಯಾದಾಗ, ಆ ವಿಜಯದ ಕಹಳೆಯ ದುಂದುಭಿನಾದ ತಾರಾಲೋಕಗಳನ್ನು ದಾಟಿ ಕೇಳುತ್ತಿತ್ತು ಎಂದು ಅತಿಶಯೋಕ್ತಿಯಿಂದ ನುಡಿದಿದ್ದಾರೆ. ಆ ದಿವ್ಯಪ್ರಭೆ ಪ್ರತಿ ಭಾರತೀಯನ ಹೃದಯದಲ್ಲೂಬೆಳಕನ್ನು ಬೀರಿ ಪ್ರಜ್ವಲಿಸುತ್ತಿತ್ತು ಎಂದು ಸುಂದರವಾಗಿ ವರ್ಣಿಸಿದ್ದಾರೆ. ಎಂತಹ ಕಷ್ಟದ ಸಮಯದಲ್ಲೂ ಎದೆಗುಂದದೆ, ಗುರಿ ಬಿಡದೆ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರೆದು ದೇಶದ ಕೀರ್ತಿಪತಾಕೆಯನ್ನು ಹಾರಿಸುವ ಕವಿಯ ಆಶಾಭಾವ ಇಲ್ಲಿ ವ್ಯಕ್ತವಾಗುತ್ತದೆ.

ಕವನ - ಒಂದು ಭಾಷೆಯ ಸಾವು - ಪ.ರಾಜಗೋಪಾಲ

ಪೆಸಿಫಿಕ್ ಸಾಗರದಲೊಂದು
ನಡುಗಡ್ಡೆ -

‘ಅವೊರೆ'.
ಅಲ್ಲೊಬ್ಬ ಪ್ರಜೆಯಿದ್ದ -
ಎಪ್ಪತ್ತಾರರ ವೃದ್ಧ,
ಅವನೇ 'ರೆಡ್
ಥಂಡರ ಕ್ಲೌಡ್ !'
'ಗುಡು ಮೋಡ ! ಸುಡುಕೆಂಡ !!

ಬುಡಕಟ್ಟು `ವನವಾಟು '.
ಮಾತು ಪಟಪಟ ! -
ಒನಪು ವೈಯಾರ,
ಕನಸು ಕಾಮನಬಿಲ್ಲು -
ಗತಕಾಲದ ರೀಲುರೀಲು !

ನುಡಿಯ ಜ್ಯೋತಿರ್ಲಿಂಗ,
ಆದರದಕೇ ಭಂಗ,
ಮೃತ್ಯು ಸಂಗ !
ಕೊನೆಗು ಉಳಿದಿದ್ದಾತ,
ಆ ಮಾತು ಬಲ್ಲಾತ,
ಒಬ್ಬನೇ ಒಬ್ಬ !
ಅವನೇ 'ರೆಡ್
ಥಂಡರ ಕ್ಲೌಡ್ !' `ಗುಡು ಮೋಡ ! ಸುಡುಕೆಂಡ !”

ಆದರವನೂ ಸತ್ತ !
ಅವನೊಂದಿಗೆ ಆ ಮಾತು, ಆ ಭಾಷೆ
ಪೂರ ನಿಶ್ಯಬ್ದ !
ಆಧುನಿಕ ಜೀವನದ
ಮಾರಿಹಲುಬೆಯ ಚಕ್ರ -
ದಂತ ಪಂಕ್ತಿಗೆ ಸಿಲುಕಿ
ನಜ್ಜುಗುಜ್ಜು !

ಇನ್ನಿಲ್ಲ ಆ ನುಡಿಯ ಬಣ್ಣಬಣ್ಣದ ಮಾಲೆ -
ಒಕ್ಕಣೆಯ ಉಯ್ಯಾಲೆ !
ನೋವುಗಳ ಕಾವುಗಳ ಏಳುಬೀಳುಗಳ
ಕಥನ ಕವನಗಳಿನ್ನು ಕೇಳಿಸುವುದೇ ಇಲ್ಲ !

ಇದಕಾಗಿ ಅಳುವವರು ಯಾರು ಇಲ್ಲ !
ದಿನಾ ಸಾಯುವ ಭಾಷೆಗಾಗಿ
ಅಳುವವರು ಯಾರು ?
ಅಳುವಂಥದೇನಾಯ್ತು ?
- ಉತ್ತರವಿಲ್ಲ.
ನರಳಾಟ ಯಾರಿಗೂ
ಕೇಳಿಸಲೇ ಇಲ್ಲ!

ಕವನ - ಕಣ್ಣು ಮುಚ್ಚಾಲೆ - ಗೋನ್ವರ್ ಕಿಶನ್ ರಾವ್

ಬಾನಿನಂಗಳದಲ್ಲಿ ಚೆಲ್ಲಾಟ ಮೇಲಾಟ :
ರುಂಡ ಮುಂಡ ಜೋಡಿ ಸೂರ್ಯಚಂದ್ರರ ಕಾಡಿ
ಓಡಿ ಹಿಡಿಯುವ ಖೋಡಿ, ಆಗಸದ ಮೋಡಿ.

ನಿಶಿಯ ಬೋಗುಣಿಯಲ್ಲಿ ಕೈಗೆ ಸಿಲುಕದೆ ಓಡಿ
ಮೋಡದಲಿ ಮರೆಯಾದ ಚಂದ್ರನ ಸೋಕಿ ತಾಕಿ
ನುಂಗಿಬಿಡುವಾಸೆ -
ಓಮ್ಮೆ ರಾಹುವಿಗೆ, ಇನ್ನೊಮ್ಮೆ ಕೇತುವಿಗೆ,
ನೆರಳು ಬೆಳಕಿನ ಲಾಳಿಯಲ್ಲಿ ಸಿಲುಕಿದ ಚಂದ್ರ
ಮ್ಲಾನ ? ದುಮ್ಮಾನ ?

ಸೂರ್ಯನನ್ನೂ ಬಿಡದ ರಾಹುಕೇತು ದ್ವೇಷ :
ನೆಳಲ ರಾಕ್ಷಸ ವೇಷ -
ತೆರದು ಬಾಯ ಪಿಪಾಯಿ, ಕಪ್ಪನೆ ಬಾಲ ಬೀಸಿ,
ವ್ಯೋಮದುದ್ದಗಲಕ್ಕೂ ಹಾಡುಹಗಲಲೆ ನೇದ
ಇರುಳ ಕತ್ತಲ ಜಾಲ.
ಕ್ಷಣದಲ್ಲೆ ಎಲ್ಲೆಲ್ಲು ಬಟಾಬಯಲಂಧಕಾರ,
ಎಲ್ಲ ಮಸಿ ಚಿತ್ತಾರ !
ಮನೆ ಮಹಲು ಗಿಡಗಂಟೆ ಕೋಟೆ ಕೊತ್ತಳ ಗೋಪುರ.
ಹಕ್ಕಿಗಳು ತಬ್ಬಿಬ್ಬು,
ಮಂಪರ ;
ಗೂಡು ಸೇರುವುದಕ್ಕೆ
ಆತುರ.

ಅಂಧಕಾಸುರ ತನ್ನ ನೀಳ ತೋಳ್ಗಳ ಚಾಚಿ
ಸುತ್ತೆಲ್ಲ ಕತ್ತಲೆಯ ಮಂಕುಬೂದಿಯ ಚೆಲ್ಲಿ
ಗೋಳಿಡಿಸುವ ಹುನಾರ ?
ಸೈಂಧವನ ಕೊಲ್ಲಿಸಲು
ಕೃಷ್ಣ ತಂತ್ರ?
ಅಥವಾ -
ತನ್ನ ಹಿಡಿಯಲು ಬಂದ ಹನುಮನ ಕಪಾಳಕ್ಕೆ
ಸೂರ್ಯ ಬಿಗಿದದ್ದಕ್ಕೆ
ವಾನರ ಪ್ರತೀಕಾರ ?

ಬದಲಾದ ಚಿತ್ರ:
ಕಪ್ಪು ಪರದೆಯ ಮೇಲೆ ಬೆಳಕುಗಳ ಬೊಟ್ಟು;
ನಿರಾಶಯ ನಡುವೆಯೇ

ಆಸೆಯ ಹನಿ.
ಮೆಲ್ಲ ಮೆಲ್ಲಗೆ ಕರಗಿ
ಹೋಗುತಿದೆ ಮಬ್ಬು.
ಕಪ್ಪು ತಟ್ಟೆಯ ಸುತ್ತ ಹೊನ್ನಿನ ಬಳೆ,
ಬಂಗಾರದುಂಗುರಕೆ ವಜ್ರ ಹರಳು !

ಮತ್ತೆ ಹಬ್ಬಿದ ಬಿಸಿಲು.
ಬೀಸುತಿದೆ ಸುಳಿಗಾಳಿ.
ಬಂತು ಜೀವ !
ಅರಳಿದಲರುಗಳೆಲ್ಲ ಥಟ್ಟನಂತರ್ಧಾನ.
ಹಗಲು ಮೂಡಿರುವಾಗ ಕನಗನಿದೆ ಕೆಲಸ?

ಕವನ - ಅಂಕದ ಪರದೆ - ಸಿದ್ದರಾಮ ಜಾಲವಾದಿ

ಸಮಭಾಜಕ ವೃತ್ತದೆಡೆ
ಭೂದೇವಿಯ ಸೊಂಟ ಸಿರಿ -
ಬಂಗಾರದ ಡಾಬಿನಂಚು
ಬಿಳಿ ಮುತ್ತಿನ ಸೊಗಸು.
ರುದ್ರ ರಮ್ಯ ಸೊಕ್ಕು ಸೌಮ್ಯ
ಗಳಿಗೆಗೊಂದು ದಿರಸು.

ಸೂರ್ಯ ನೆತ್ತಿಗೇರಿದಂತೆ
ಬಿರುಬಿಸಿಲಿನ ಚುರುಕು -
ಗಾಳಿ ಭಾರ ಕಡಲಿನೂಟ,
ಇಳಿಹೊತ್ತಿಗೆ ಮುಗಿಲಾರ್ಭಟ,
ಸೆಳೆಮಿಂಚಿನ ಸೆಳಕು.
ಧೋ ಧೋ ಧೋ ವರ್ಷ ವೃಷ್ಟಿ,
ಹಗಲೆ ಕತ್ತಲು.
ಸಂಜೆ ಮತ್ತೆ ಎಲ್ಲ ಬದಲು
ಬೆಳಕು ಎತ್ತಲೂ.

ಮೋಹಿನಿ ನೀ ಇಳೆಯಂತೆಯೆ -
ಮಾಯಾವಿನಿ ಚೆಲುವೆ.
ಒಮ್ಮೆ ಬಿರುಸು, ಒಮ್ಮೆ ಬಿಸಿಯುಸಿರು,
ಬವಣೆ ಬೇಗೆ ಹದಿರು.
ಪಟಪಟ ಉದುರಿದ ಬಿಸಿ ಹನಿ,
ಮರುಗಳಿಗೆಯೆ ಇನಿ ದನಿ.

ಶುಭ್ರ ವದನ ಮುಗ್ಧ ನಗೆ,
ಕಿಂಕಿಣಿಯಿಂಪು.
ಕೋಪ ತಾಪ ಎಲ್ಲ ಮಾಯ,
ಬೆಳುದಿಂಗಳ ತಂಪು.

ಎಂದಿನಂತೆ ಭೂ ನಾಟಕ
ಸಾಗಿದೆ ಎಡೆಬಿಡದೆ.
ನಿನ್ನ ನಾಟಕಕ್ಕೆ ಮಾತ್ರ
ಅಂಕದ ಪರದೆ.

ಕವನ - ಅನುಪಮದನುಭವ - ಪ್ರಾಣೇಶ್ ರಾವ್ ಡಿ.ಬಿ

ಅಪರಿಚಿತ ಲೋಕಕ್ಕೆ ನೇರ ಇದಿರು -
ಎದೆಗೂಡಿನ ಅದಿರು :
ಧುತ್ತೆಂದು ನಿಟ್ಟಿಸುತ ನಿಂತಿದೆ ಕಣ್ಮುಂದೆ
ಉತ್ತುಂಗ ಗಿರಿಮಾಲೆ -
ಖೇಚರಿಯ ಎದೆ ಮೊಲ್ಲೆ !
ನಕ್ಷೆ ಭೂಪಟ ಚಿತ್ರ ಮಾರ್ಗದರ್ಶಿಯ ಸೂತ್ರ
ಎಲ್ಲ ವ್ಯರ್ಥ !
'ಇದುವರೆಗೆ ನಮ್ಮ ಹೊಣೆ.
ಇನ್ನು ನೀನಾಯ್ತು,
ನಿನ್ನ ಪಾಡಾಯ್ತು !'

ಪಾಡು ಹಾಡಿನ ಜಾಡು ಹಿಡಿದು ಸಾಗುವ ಯತ್ನ -
ರಸ್ತೆ ಡುಬ್ಬದ ಕುಣಿತ ಧೈಥಕಧಿನ !
ಸಾವಧಾನ !
ಏರಿಳಿದು ಗುಂಡಿಯೊತ್ತಿದರಾಯ್ತು ಕೆಲಸ :
ತೆರೆಯುವುದು ಹೊಸದು ಜಗ -
ಮುಂದುವರಿಯುವ ಮುನ್ನ ಒಮ್ಮೆ ಇಣುಕುವ ಯತ್ನ:
ಒಳಗೆ ಹಬ್ಬಿದೆ ತಣ್ಣ ಮಂದ ಬೆಳಕು :
ಕೆನೆಗಟ್ಟಿದ ಸವಿ ಹಾಲು,
ಸುಖೋಷ್ಣ, ಹಿತೋಷ್ಣ.

ಕುಡಿಯಲೇಬೇಕೇನು ? -
ಸಾಕ್ರೆಟೀಸ್ ಬಟ್ಟಲ ವಿಷ
ಗಟಗಟನೆ ಕುಡಿದಂತೆ !
ಛೀ ! ಹುಚ್ಚು ಮನಸು !
'ಕುಡಿದುಬಿಡು ! ಮತ್ತೆ ನೀ -
ನಿತ್ತ ಬರಲಾರೆ !'
-ಖಯ್ಯ ಮನ ಉಪದೇಶ.

ಹಠಾತ್ತನೆ ವಿದ್ಯುತ್ತಿನ ಲಾವಾ ಪ್ರವಾಹ -
ಚುಂಬಕದ ಬರಸೆಳೆತ !
ಹರಿವ ಹೊಳೆ.
ಗಿರಗಿರನೆ
ತಿರುಗುತಿದೆ
ಹಿರಿ ಸುಳಿ !
ಉಂಗುರುಂಗುರದೊಳಗೆ ಇಳಿದ ಜೀವ -

ಜಾರುತಿದೆ ಆಳಕ್ಕೆ, ಪಾತಾಳ ಗರ್ಭಕ್ಕೆ -
ಆನಂದ ಲೋಕಕ್ಕೆ !
ಬಿಗಿದ ನರಗಳು ಸಡಿಲ !
ಪದರು ಪದರುಗಳೆಲ್ಲ ಕರಗಿ ಲೀಲಾಜಾಲ !
ಜಗವಲ್ಲ ನಾದಮಯ !
'ಆಗಿಲ್ಲ ಹೋಗಿಲ್ಲ ಮೇಗಿಲ್ಲ ತಳಗಿಲ್ಲ
ತಾಗಿಲ್ಲ ತಪ್ಪುತಡೆಯಿಲ್ಲ.'
ಇಲ್ಲವೆಂಬುದು ಇಲ್ಲ !
ಅನುಪಮದ ಅನುಭವ !

ವಿಶ್ಲೇಷಣೆ

ಪ್ರಾಚಾರ್ಯ ಹೆಚ್ಚೆಸ್ಕೆಯವರ ಕಾವ್ಯಾನು ಸಂಧಾನಕ್ಕೆ ನನಗೆ ಸಿಕ್ಕಿದ್ದು ಅವರ ತಿಂಗಳೂರಿನ ತೇರುಕವನ ಸಂಕಲನದ ಅನುಪಮದ ಅನುಭವಶೀರ್ಷಿಕೆಯ ಕವನ.

ಕವನಗಳ ವಿಚಾರದಲ್ಲಿ ನನಗೆ ಮುದ್ದಣನ ಪದ್ಯಂವಂದ್ಯಂ,ಗದ್ಯಂ ಹೃದ್ಯಂಸೂತ್ರವೇ ಪ್ರಿಯ.ಮೊದಲಿಗೆ ಸಂಕಲನ ಹೆಸರು,ತಿಂಗಳೂರು ಯಾವುದು? ಎಲ್ಲಿದೆ?ಚಂದ್ರ ಲೋಕವೇ?ಅಲ್ಲಿನ ತೇರು ಯಾವುದು?ಕವಿ ಬೆಂಗಳೂರನ್ನೇ ತಿಂಗಳೂರು ಎಂದು
ಕರೆದಿರುವರೇ? ಹಾಗಾದರೆ ತೇರು ಎಂದರೆ ಬೆಂಗಳೂರಿನ ಬದುಕೇ?

ಇನ್ನು ಕವನದ ಶೀರ್ಷಿಕೆಯ ವಿಚಾರ ಅನುಪಮ ಎಂದರೆ ತಹೋಲಿಕೆ.ಯಾವುದಕ್ಕೆ ಹೋಲಿಸಿದಾರೆ?ಅದರ ಅನುಭವವೇನು? ತಿಳಿಸುವ ಪ್ರಯತ್ನ ವೇ ?ಇಲ್ಲ
,ಹಾಗೆನಿಸುವುದಿಲ್ಲ.ಅಪರಿಚಿತ ಲೋಕಕ್ಕೆ ನೇರ ಇದಿರು ಎದೆಗೂಡಿನ ಅದಿರು ಎಂದರೆ ಹೃದಯದ ಬಡಿತವೇ? ಮುಂದಿನ ಸಾಲಿನ ಉತ್ತುಂಗ ಗಿರಿಮಾಲೆ,ಅಂದರೆ ಪರ್ವತಶ್ರೇಣಿ ,ಅಲ್ಲಿ ಖೇಚರಿಯ ಅಂದ ಭೂಪಟದ ನಕ್ಷೆಯ
ಚಿತ್ರದೊಡನೆ ಮಾರ್ಗದರ್ಶಿಯ ಸೂತ್ರವೂ ವ್ಯರ್ಥ ಎಂದರೆ ಎಲ್ಲಿಗೆ ಹೊರಟಿತ್ತು ಇವರ ಪಯಣ?ಮುಂದಿನ ಸಾಲಿನಲ್ಲಿ "ಇದುವರೆಗೆ ನಮ್ಮ ಹೊಣೆ.
ಇನ್ನು ನೀನಾಯ್ತು
ನಿನ್ನ ಪಾಡಾಯ್ತು"
ಯಾರಿಗೆ ಹೇಳುವುದು ?ಯಾರನ್ನು ಬೀಳ್ಕೊಡುವರು?
ಅಸ್ಪಷ್ಟ.
ಮುಂದೆ ರಸ್ತೆ ಡುಬ್ಬದ ಥೈ ಥಕ ನರ್ತನ ಮಾಡ್ತಾ ಸಾವಧಾನದ ಏರಿಳಿತಗಳಾದ ನಂತರ ಗುಂಡಿ ಒತ್ತಿದರೆ ಹೊಸದೊಂದು ಕಾಣಿಸಿದ ಜಗ ಯಾವುದು ?
ಅಲ್ಲಿ ಇಣುಕಿದರೆ ಮಂದಬೆಳಕಿನಲ್ಲಿ
ಕೆನೆಗಟ್ಟಿದ ಸವಿಹಾಲು ಸುಖೋಷ್ಣ,,ಹಿತೋಷ್ಣ
ಕುಡಿಯಲು ಬಲವಂತ ಮಾಡಿದವರು ಯಾರು,?
ಸಾಕ್ರಟೀಸನು ವಿಷದ ಬಟ್ಟಲನು ಎತ್ತಿ ಗಟಗಟನೆ ಕುಡಿದಂತೆ ಕುಡಿಯಲು ಹೇಳಿದ ಹುಚ್ಚು ಮನಸು ಯಾರದು?

ಮತ್ತೆ ನೀನಿತ್ತ ಬರಲಾರೆ ಎಂದು ಹೇಳುವ ಉಮರ ಖಯಾಮನ
ಉಪದೇಶ.ಹಾಗಾದರೆ,ಸುಖೋಷ್ಣ,ಹಿತೋಷ್ಣದ ಸವಿಹಾಲು ವಿಷವಾಯಿತೇಕೆ ? ಹೇಗೆ,?
ಕುಡಿಯುವುದರೊಳಗೆ ಧುತ್ತನೆ ಲಾವಾರಸದ ಹರಿದ. ಹೊಳೆ.
ಗಿರಗಿರನೆ ತಿರುಗುವಸುಳಿಗೆ ಸಿಕ್ಕ ಜೀವ ಪಾತಾಳಕ್ಕೆ ನಿಧಾನವಾಗಿ ಉಂಗುರ ಉಂಗುರವಾಗಿ
ಆನಂದಲೋಕಕ್ಕೆಜಾರಿದಾಗ,ಬಿಗಿದ ನರಗಳೂ ಸಡಿಲವಾಗಿ ಲೀನವಾಗಿ,ಮೇಲೆ,ಕೆಳಗೆ,ತಳ ಏನೂ
ಇಲ್ಲವೆಂಬುದು ಏನು?ಹೋಲಿಸಲಾಗದ ಅನಪಮದ ಅನುಭವ ಯಾರದು ? ಎಲ್ಲವೂ ಅಸ್ಪಷ್ಟ.
ಕವಿಯ ಅಂತರಂಗ
ಒಗಟು ಮಾತ್ರ.
ಕವಿ ಸಾವಿನ ನಂತರದ ಪಯಣದ ಬಗ್ಗೆ ಚಿಂತಿಸುತ್ತಿದಾರೆಯೇ ಎಂದು ಅನುಮಾನವಾಗುತ್ತದೆ

ಸರಿ,ನನಗೆ ರಾಬರ್ಟ್ ಬ್ರೌನಿಂಗ್ ನ ಜೋಕು ನೆನಪಾಗ್ತಿದೆ .ಅವನ ಒಂದು ಕವನವನ್ನು ನನ್ನನ್ತ ಓದುಗ ತೋರಿಸಿ ಅದರರ್ಥ ವಿವರಿಸಲು ಕೇಳಿದನಂತೆ. ಬ್ರೌನಿಂಗ್ When I wrote this poem, Only Two knew the meaning.First one is myself,Another is ALMIGHTY

ಕವನ - ಅನಿಸಿದ್ದು ಬರೆದುಬಿಡಬೇಕು - ಶ್ರೀಮತಿ ನಾಗರತ್ನಾ ಚಂದ್ರಶೇಖರ

ಮುಂಜಾನೆ ನಿಬ್ಬೆರಗು.
ಸಂಜೆಗಣ್ಣಿನ ಮೆರಗು.
ಬೆಳಗು ಹಗಲಿನ ಮೊಗ್ಗು, ಕನಸು ;
ಇಳಿಹೊತ್ತು ತನಿವಣ್ಣು, ನನಸು.

ನೀಲಿಯಾಗಸ, ದೂರ
ನೀಳ ಪರ್ವತಮಾಲೆ :
ಹೊಂಬಿಸಿಲಿನಡಿಯಲ್ಲಿ
ಬೆಣ್ಣೆ ಕರಗುವ ರೀತಿ
ಚಂಚಲಿಸುತಿದೆ ಚೆಲುವು,
ಹಕ್ಕಿಯುಲುಹು.
ಬಣ್ಣಬಣ್ಣದ ಚಿಟ್ಟೆ ಬಂಗಾರ,
ಎದೆ ಹಿಗ್ಗು !
ಇದೆ ಸಮಯ -
ಅನಿಸಿದ್ದು ಬರೆದುಬಿಡಲಿಕ್ಕೆ !

ಮನಸಿನಾಳದೊಳೆಲ್ಲೋ ಹುದುಗಿದೆ ದುಗುಡ ಪೂರ.
ಮೈಯೆಲ್ಲ ಚುಮುಚುಮು.
ಹಳೆ ನೆನಪು -
ತೆರೆದುಕೊಂಡಿದೆ ಹಿಂದೆ ತೋಪುಖಾನೆ :
ನಾಡ ಗಡಿ, ನೆಲದ ಎದೆ, ಕಿಕ್ಕಿರಿದ ಬೀದಿ,
ಮುರುಕು ಜೋಪಡಿ,
ರೈಲು ಸೇತುವೆಯ ತಳಭಾಗ,

ದೈತ್ಯಗಾತ್ರದ ಖಾಲಿ ಕಾನ್ ಕ್ರೀಟು ಕೊಳವೆ -
ಮುಲುಗುತ್ತಿದೆ ಎಲ್ಲೆಲ್ಲು ಹಾಳು ಬದುಕು -
ಅಳಲನ್ನೆ ಹಾಸಿ,
ಜೀವಕ್ಕೆ ಜೀವ ಹೇಸಿ,
ಜೀವ ಜೀವವ ಬಯಸಿ,

ಬೇಯಿಸಿ,
ಸೋಸಿ,
ಸಾಯಿಸಿ !
ಬೆಳಕು ಚೆಲ್ಲಾಪಿಲ್ಲಿ,
ಕಿರಿಚಾಟ,
ಕೆನ್ನೀರ ಸಿಂಪಡಣೆ,
ನರಳುವ ಧ್ವನಿ !

ಏನೆಂದಿರಿ ?
ಅನಿಸಿದ್ದು ಬರೆದುಬಿಡ -
ಬೇಕೆಂದೆ ?
ಹೌದಲ್ಲ !
ಬರೆದುಬಿಡಬೇಕಿನ್ನು -
ಎದೆಯ ಮಸಿ ಹಿಂಡಿ !

ವಿಶ್ಲೇಷಣೆ :

ಕವಿ ಪ್ರಸ್ತುತ ಕವನದಲ್ಲಿ ಹಗಲು ರಾತ್ರಿಗಳ ದೈನಂದಿನ ಚಟುವಟಿಕೆಗಳ ವೀಕ್ಷಕರಾಗಿ ತಮಗೆ ಅನಿಸಿದ್ದನ್ನೆಲ್ಲ ಬರೆದದ್ದು ಹೀಗೆ:

ಕವನದ ಮೊದಲ ಭಾಗದಲ್ಲಿ ಪ್ರಕೃತಿಯ ಸೊಬಗನ್ನು ಸವಿದು ಮನಸ್ಸು ಹಿಗ್ಗಿದಂತೆ ಸಾಗಿದರೆ ಕವನದ ಎರಡನೆಯ ಭಾಗದಲ್ಲಿ ನೋವಿನಿಂದ ಹಿಂಡಿದ ಎದೆಯಾಳದ ಚಿತ್ರ .ಅದು ಹೀಗೆ ಸಾಗುತ್ತದೆ.
ಮುಂಜಾನೆಯ ನಿಬ್ಬೆರಗು ಸಂಜೆ ಕಣ್ಣಿನ ಮೆರಗು
ಬೆಳಕು ಹಗಲಿನ ಮೊಗ್ಗು ಕನಸು ಇಳಿಹೊತ್ತು ತನಿವಣ್ಣು ನನಸು

ನೀಲಿ ಆಗಸ ದೂರ ನೀಳ ಪರ್ವತ ಮಾಲೆ
ಹೊಂಬಿಸಿಲಿನಲ್ಲಿ ಬೆಣ್ಣೆ ಕರಗುವ ರೀತಿ ಚಂಚಲಿಸುತ್ತಿದೆ ಚೆಲುವು ಹಕ್ಕಿಉಲಿವು
ಬಣ್ಣ ಬಣ್ಣದ ಚಿಟ್ಟೆ ಬಂಗಾರ ಹಕ್ಕಿ ಉಲಿವು ಎದೆ ಹಿಗ್ಗು
ಇದೆ ಸಮಯ ಅನಿಸಿದ್ದು ಬರೆದು ಬಿಡಲಿಕ್ಕೆ

ಮನಸಿನಾಳದೆಲ್ಲೋ ಹುದುಗಿದೆ ದುಗುಡದ ಮಹಾಪೂರ ಮೈಯಲ್ಲ ಚುಮುಚುಮು ಹಳೆ ನೆನಪು ತೆರೆದುಕೊಂಡಿದೆ ಹಿಂದೆ ತೋಪುಖಾನೆ

ನಾಡ ಗಡಿ ನೆಲದ ಎದೆ ಕಿಕ್ಕಿರಿದ ಬೀದಿ ಮುರುಕು ಜೋಪಡಿ ರೈಲು ಸೇತುವೆಯ ತಳಭಾಗ
ದೈತ್ಯಗಾರತ್ರದ ಕಾಂಕ್ರೀಟು ಕೊಳವೆ ಮುಲುಗುತಿದೆ ಎಲ್ಲೆಲ್ಲೂ ಹಾಳುಬದುಕು
ಅಳಲನ್ನೇ ಹಾಸಿ ಜೀವಕ್ಕೆ ಜೀವ ಹೇಸಿ ಜೀವ ಜೀವವ ಬಯಸಿ ಬೇಯಿಸಿ
ಸೊಸಿ ಸಾಯಿಸಿ ಬೆಳಕು ಚೆಲ್ಲಾಪಿಲ್ಲಿ ಕಿರಿಚಾಟ ಕೆನ್ನೀರ ಸಿಂಪರಣೆ ನರಳುವ ಧ್ವನಿ
ಏನೆಂದಿರಿ ಅನಿಸಿದ್ದು ಬರೆದು ಬಿಡಬೇಕೆಂದೆ ಹೌದಲ್ಲ ಅನಿಸಿದ್ದು ಬರೆದು ಬಿಡಬೇಕಿನ್ನು ಎದೆಯ ಮಸಿ ಹಿಂಡಿ.

ಕವನ - ಇನ್ನಾರು? - ಶ್ರೀಮತಿ ಪದ್ಮಾ ಕಲ್ಮಾಡಿ

'ವೆರಿ ಸಾರಿ ! ನಮ್ಮ ಕೈ -
ಲಾದ್ದೆಲ್ಲ ಮಾಡಿದೆವು.' ಕೈ ತೊಳೆದುಕೊಳ್ಳುತ್ತ
ಹೇಳಿದರು ಡಾಕ್ಟರು.

*ಅನಾಯಾಸ ಮರಣವಂತೆ.
ನಿಜಕ್ಕೂ ಪುಣ್ಯವಂತೆ.
ಕುಂಕುಮಭಾಗ್ಯಕ್ಕೆಣೆಯುಂಟೆ ?
ಶೋಕಿಸಬೇಡಿ. ಸುಮ್ಮನಿರಿ !"
ನೆರೆಮನೆ ವೃದ್ಧರ
ಗೊಗ್ಗರು ಗಂಟಲ
ಉದ್ಗಾರ.

"ಜಾತನಿಗೆ ಮರಣ ಧ್ರುವ.
ಮಿಂಚಿಹೊದ್ದಕ್ಕೆ ಚಿಂ-
ತಿಸಿ ಫಲವಿಲ್ಲ.
ಯೋಚಿಸಬೇಕಿನ್ನು ಮುಂ-
ದಿನ ವಿಚಾರ !"
ಬಾರ್ಹಸ್ಪತ್ಯ ಸೂತ್ರ.

'ಸತ್ತುಹೋಗುವುದೆಂದರೇನು ಗೊತ್ತೆ?
ಒಳಗೆ ಇತ್ತೊಂದು "ಸತ್ತು".
ಅದು ಹೋಯ್ತು– ಮಿತ್ತು!

'ಸತ್ತಿ'ದ್ದರೆ ಸತ್ತ್ವ :
'ಸತ್ತಿ'ರದಿದ್ದರೆ ನಿಸ್ಸತ್ವ.
ವಿರೋಧಾಭಾಸವೇನಲ್ಲ.'
ವೇದಾಂತಿಯ ಜಿಜ್ಞಾಸೆ.

'ಪತ್ರಿಕೆಗೆ ಕೊಡಬೇಕು.
ಚಿತ್ರವಿದ್ದರೆ ಚೆನ್ನು.
ಇಲ್ಲಿ ನಿಲ್ಲಿ, ಒಂದೇ ಕ್ಷಣ.
ಒಲ್ಲೆ ಎನಬೇಡಿ.'
ಚಡಪಡಿಸುವ ಪತ್ರಮಿತ್ರರ
ಅನುಕಂಪದನುನಯ.

ಬಂಧು, ಬಳಗ, ಎಲ್ಲಾ ಬಂದರು.
ಎರಡೂ ಕೈ ಹಿಡಿದರು, ಎಂದರು -

'ಜೀವನ ನಶ್ವರ. ಆದದ್ದಾಯಿತು.
ಹೆದರದ ಎದುರಿಸಿ ನಾವಿದ್ದೀವಿ !'

ತಜ್ಞವೃಂದವೇ ಎದುರಿಗಿದ್ದರೂ
ಆರಿಯೆಹೋಯಿತು ಕೆಂಡ.
ನಂಬಿದ ಸಂಗಾತಿಗೆ ನೀನೇ
ಇಂಬಾಗಿದ್ದ.
ಇನ್ನಾರು !

ವಿಶ್ಲೇಷಣೆ :

ಮಹಾ ಚೇತನ ಪೂಜ್ಯ ಎಚ್ಚೆಸ್ಕೆಯವರು.ಆ ಚೇತನಕ್ಕೆ ಆತ್ಮೀಯ ನಮನ.ಇಲ್ಲಿ ನಾನು ಕವಿತೆಯನ್ನು ಅರ್ಥ ಮಾಡಿಕೊಂಡಿರುವ ಇತಿ ಮಿತಿಯಲ್ಲಿ ಕೆಲವು ಮಾತುಗಳು..ತನ್ನ ಬಾಳಸಂಗಾತಿಯನ್ನು ಕಳೆದುಕೊಂಡ ಶೋಕ ತಪ್ತ ವಾತಾವರಣದ ಒಂದು ಚಿತ್ರಣ ಈ ಕವಿತೆಯದ್ದು.
ಕೈಲಾದದ್ದೆಲ್ಲಾ ಮಾಡಿದರು ಕೈ ತೊಳೆದುಕೊಂಡರು ಎನ್ನುವ ಪದಗಳು ಮನುಷ್ಯಪ್ರಯತ್ನದ ಇತಿಮಿತಿಗಳನ್ನು ಬಿಂಬಿಸಿವೆ.ಸಪ್ತಪದಿದಾಟಿ ಜೊತೆಯಾಗಿ ನೋವು ನಲಿವಿನಲ್ಲಿ ಹೆಜ್ಜೆಹೆಜ್ಜೆಹಾಕುತ್ತಾ ಬಂದವಳಿಗೆ ಮರಣ ಅನಾಯಾಸವಾಗಿ ಬಂತೆ?ಜೀವನದ ಸರ್ವಸ್ವ ವಾಗಿದ್ದ ಮಡದಿ ಮರೆಯಾದಾಗ ತಾನು " ನಿಸ್ಸತ್ವ" ನಾದೆ ಎಂಬ ಭಾವ.ಬದುಕಿದ್ದಾಗ ಅಲ್ಲಿ "ಸತ್ತು" ಈಗ "ಮಿತ್ತು" ಎಷ್ಟು ಅರ್ಥಪೂರ್ಣ.ತನ್ನೆದೆಯ ಗೂಡಿನಲ್ಲಿ ಬಚ್ಚಿಟ್ಟುಕೊಂಡಿದ್ದ ಆಕೆಯ ಪ್ರಾಣಪಕ್ಷಿ ಹಾರಿ ಹೋದ ಸುದ್ದಿಯನ್ನು ಪತ್ರಿಕೆಯಲ್ಲಿ ಪ್ರಕಟಿಸುವಂತಾದ ಗಲಿಬಿಲಿ.ಭಾರವಾದ ಮನಸ್ಸಿಗೆ "ಜೀವನ ನಶ್ವರ" ವೆನ್ನುವ ಬಿಟ್ಟಿ ಉಪದೇಶಗಳು.ಇನ್ನು "ಆರಿಯೆ ಹೋಯಿತು ಕೆಂಡ" ಈ ಸಾಲು ಮನತಟ್ಟುವ ರೀತಿಯಲ್ಲಿದೆ.ಸ್ತ್ರೀ ಅಗ್ನಿಸ್ವರೂಪಿ ಎನ್ನುತ್ತಾರೆ.ಶಕ್ತಿಯ ಪ್ರತೀಕ.ಅಗ್ನಿಕುಂಡದ ಎದುರು ಅಗ್ನಿಸಾಕ್ಷಿಯಾಗಿ ಸತಿ ಎನಿಸಿಕೊಂಡವಳು.ಏಳುಬೀಳುಗಳಲ್ಲಿ ಜೊತೆ ಜೊತೆಯಾಗಿ ಹೆಜ್ಜೆಹಾಕಿದಾಕೆ.ಬೇಕು ಬೇಡಗಳಿಗೆ ಒಪ್ಪಿಕೊಂಡವಳು.ಹಸಿವು,ನೀರಡಿಕೆಯ ಹಿಂಗಿಸುವ ಅನ್ನಪೂರ್ಣೆ ಆಕೆ.ಮನೆಯೊಳಗಿನ ಅಗ್ಗಿಷ್ಟಿಕೆಯಲ್ಲಿ ಅಗ್ನಿಯೆ ಇಲ್ಲ.ಆ ಜೀವ ಸುಟ್ಟು ಬೂದಿಯಾಗಿರುವಾಗ.ನನಗೆ ನೀನು ನಿನಗೆ ನಾನು ಎಂದು ಒಬ್ಬರಿಗೊಬ್ಬರು ಇಂಬು ಕೊಟ್ಟಿದ್ದರು ಈಗ ಅವಳ ಉಳಿಸಿಕೊಳ್ಳಲು ಆಗಲಿಲ್ಲ.ಎಲ್ಲರಿಗೂ ಇಂಬು ಕೊಡುವ ಶಕ್ತಿಯೆ ಇಂಬುಕೊಡದಿರಲು ಉಳಿಸಿಕೊಳ್ಳಲು "ಇನ್ನಾರು" ಇದ್ದಾರು ಎಂಬ ಪ್ರಶ್ನೆ ,ಪ್ರಶ್ನೆ ಯಾಗಿಯೆ ಉಳಿಯುತ್ತದೆ.

ಕವನ - ಜೋಗಿ - ಡಾ.ಆಶಾ

ಟಿಂ ಟಿಂ ಟಿಂ ಟಿಂ
ಮೈಯೆಲ್ಲಾ ಜುಂಜುಂ.
ತಂತಿ ಮೀಟುತ ಬಂದ
ಕತ್ತಲಾಳದೊಳಿಂದ
ಜೋಗಿ, ಬೈರಾಗಿ,
ನಾದಯೋಗಿ.

ಹೊಳೆಗಣ್ಣು, ನಿಡುಮೂಗು,
ಹಣೆಯ ಮೇಲಡ್ಡಡ್ಡ ಮೂರೆಳೆ ಗಂಧ.
ನಟ್ಟನಡುವೆ ಹಚ್ಚಿಕೊಂಡ
ಬಟ್ಟ, ಕುಂಕುಮ
ಕಪ್ಪುಮೊಗ, ಕರಿ ಕಲ್ಲ ಕಡೆದ ಮೂರ್ತಿ.
ಮಳೆ ಬಿಸಿಲು ಚಳಿಗಾಳಿ :
ಪಕ್ಕಾಗಿ ಸೊಕ್ಕಾಗಿ ಸೊರಗಿದ ಸೋರೆ ಮೋರೆ,
ದಿಟ್ಟ ಗೆರೆ, ಜಟಾಜೂಟ.
ತಿದ್ದಿ ತೀಡಿದ ಮೀಸ ಠೇಂಕಾರ -
ರಾಮನ ಬಿಲ್ಲು.
ಫಳಫಳ ಹಲ್ಲು -
ನಕ್ಕಾಗ ಕೊಕ್ಕರೆ !
ರೆಕ್ಕೆ ಬಿಚ್ಚಿದ ಬೆಳ್ಳಿ ಕುದುರೆ,
ಉಚ್ಚೈಶ್ರವಸ್ಸು !
ಅಗೋ ನೋಡಿ !
ಹಾಡುತ್ತ ಕುಣಿಯುತ್ತ ತಾಳ ಕುಟ್ಟುತ್ತ,
ಕಾಲ್ಗೆಜ್ಜೆ ಜಣಿರೆನಿಸಿ,
ತಂತಿ ಮೀಟುತ್ತ,
ಎದೆಯನ್ನೆ ಮಿಡಿಸುತ್ತ,
ದನಿಯೇರಿಸಿ ಹಾಡುತ್ತ
ಬರುತ್ತಿದ್ದಾನೆ ಜೋಗಿ, ಬೈರಾಗಿ, ನಾದಯೋಗಿ,
ಅವನ ಜೋಳಿಗೆ ತುಂಬ
ಕನಸುಗಳ ರಾಶಿ.
ಕನಸನ್ನೆ ನೇಯುತ್ತ,
ಕನಸನ್ನೆ ಹಾಡುತ್ತ,
ತಾನೂ ಕುಣಿಯುತ್ತ,
ಕುಣಿಸುತ್ತಿದ್ದಾನೆ
ಎಲ್ಲರನ್ನೂ

ಜಗವೇ ಪ್ರಸನ್ನ :

ಜೊನ್ನ ಮಳೆ, ಕ್ಷೀರಪಥ.
ಹರ್ಷ ಹಿರಿಹಿರಿ ಹಿಗ್ಗಿ
ಹೊನಲಾಗಿ ಭೋರ್ಗರೆದು
ಹಾದಿಗಡ್ಡಡ್ಡ -
ಹಾಲಿನ ಹಳ್ಳ,
ಆಚೀಚೆ
ಕಲ್ಲು ಸಕ್ಕರೆ ದಡ.
ಅದರಾಚೆಗೇ ಸ್ವರ್ಗ !
ದಾಟುವುದಸಾಧ್ಯ !
ಇಲ್ಲ ಸೇತುವೆ ದೋಣಿ ಹರಿಗೋಲು ಪಾಮರ !
ಚಿಂತೆ ಬಿಡಿ !
ಜೋಳಿಗೆಯ ತುಂಬೆಲ್ಲ ಅಡಕಿರುವ ನವಿಲುಗರಿ -
ಕನಸುಗಳ ರಾಶಿ.

ಅದರಲ್ಲಿ ಒಂದೆಸಳು ಸಾಕು ! ಬಿಡಿ !
ದೊರಕಿತಗೊ ಉಪಾಯ :
ಮುಗಿಲ ಕನ್ನೆಯ ಕೆನ್ನೆಸರ -
ಮಳೆಬಿಲ್ಲು ! -
ಅದನೆ ತಂದರೆ ಆಯ್ತು !
ಅದರೆರಡು ತುದಿಯನ್ನ
ಆಚೀಚೆ ದಡಗಳಿಗೆ
ನೆಟ್ಟರಾಯ್ತು !
ಸಿದ್ಧ ಸೇತುವೆ !
ಮಳೆಬಿಲ್ಲಿನ ಕಮಾನು !
ಹಿಗ್ಗಿ ನಡೆಯಿರಿ ಮುಂದೆ :
ಸ್ವರ್ಗ ಸಿಕ್ಕಿತು ಅಗೊ !
ಚಿಂತೆಯಿನ್ನೇನು?

ಎಲ್ಲ ಬರಿ ಕನಸಲ್ಲ.
ನಂಬದಿರುವುದು ಸಲ್ಲ ಜೋಗಿಯನ್ನ.
ಸಪ್ತಸಾಗರದಾಚೆ ಸುಪ್ತಸಾಗರ ಮಧ್ಯೆ
ಎಳೆಯ ನಾಗರ ಜಡೆಯ ಹೆಡೆಗೆ ಮುಡಿಸಿದ ಹೂವ
ಕಿತ್ತು ತಂದಿದ್ದಾನೆ,
ತಲೆಗೆ ಸಿಗಿಸಿದ್ದಾನೆ.
ಟಿಂ ಟಿಂ ಟಿಂ ಮೀಟುತ್ತ,
ಚಿನ್ ದಾಳ ಕುಟ್ಟುತ್ತ,
ಕಾಲ್ಗೆಜ್ಜೆ ಜಣಿರೆನಿಸಿ
ಕುಣಿಯುತ್ತಿದ್ದಾನೆ ಜೋಗಿ,
ಬೈರಾಗಿ

ನೆಲದಿಂದ ಮುಗಿಲೆತ್ತರ
ಬೆಳೆದು ಬೆಡಗೆರಚುತ್ತ,
ಕನಸ ಕಾಣುತ್ತ,
ಕಾಣಿಸುತ್ತ,
ಕುಣಿಯುತ್ತ,
ಕುಣಿಸುತ್ತ,
ಕನಸನ್ನೇ ನೇಯುತ್ತ,
ಮೋಡಿ ಬೀಸುತ್ತ,
ಆನಂದ ಸುರಿಸುತ್ತ,
ಸುತ್ತಮುತ್ತನ್ನೆಲ್ಲ ವಿವಶಗೊಳಿಸುತ್ತ -
ಕುಣಿಯುತ್ತಿದ್ದಾನೆ ಜೋಗಿ,
ನಾದಯೋಗಿ !

ಕವನ - ಬಿದ್ದೆದ್ದ ಬುದ್ಧ - ಶ್ರೀನಿವಾಸ ಗಟ್ಟು

ತಾಳಿ ತಾಳಿ ! ತಾಲಿಬಾನ್ !
ತಾಳಿದವ ಬಾಳಿಯಾನ್.
ತಾಳದೆಯೆ ತಳುವದೆಯ ಬಾಮಿಯಾನ್ ಭಂಜನಕೆ
ನೀಡದಿರಿ ಫರ್ಮಾನ್.

ತಳುವಿದರೆ ಬಾನ್ ತೆರೆದು
ಜಗದ ಅಂತಃಕರಣ
ಹನಿಗೂಡಿ ಸುರಿಸುರಿದು ಭೋರಿಟ್ಟು ತೊರೆಯಾಗಿ
ಕೊಚ್ಚುವ ಭಯ ?

ಸಾವಿರದಿಮ್ಮಡಿ ವರ್ಷ
ಮಳೆ ಬಿಸಿಲು ಚಳಿ ಚಿಟಿಲಿ -
ನೆದುರಿಗೆದೆಯೊಡ್ಡುತ್ತ
ಸಡ್ಡು ಹೊಡೆದು ನಿಂತಿದ್ದ -
ಗಟ್ಟಿ ಮುದುಕ !
ಸಹಿಸುವುದಸಾಧ್ಯ.
ಗುಹಾಂತರ್ಗಾಮಿ ಗುಮ್ಮ
ಗಮ್ಮನೆಯ ಕಂಪೆರಚಿ
ತಂಪ ಸಿಂಪಡಿಸಿ
ಮೋಹಗೊಳಿಸುವುದೆಂಬ
ಗಾಬರಿಯ ಕೋಮ.
ಜಗದ ಜಂಜಾಟದಲಿ
ಜಗ್ಗದೆ ನಿಂತ ಗುಂಡಿಗೆಗೆ
ಗುಂಡಿನೊಡ್ಡೋಲಗ !
ನಿರ್ವಾತ ವಲಯದಲಿ
ಅಡ್ಡಾಡಿದ ಸ್ಫೋಟಕ.

ಅಶರೀರಿ ಬುದ್ಧ :
ಜಗವೆಲ್ಲ ಮಲಗಿರಲು ಇವನೊಬ್ಬ ಎದ್ದಿದ್ದ.
ನೆಲದಿಂದ ಮುಗಿಲೆತ್ತರ ಎದ್ದು ನಿಂತಿದ್ದ !
ಬಿದ್ದ !
ಎಂಥ ಭೀಕರ ಕನಸು !
ನೀಲ ಬೋಗುಣಿಯೊಳಗೆ ಒಮ್ಮೆಗೇ ಕಾರ್ಮೋಡ
ಜಂಝಾವಾತ, ಭೂಮಿ ಕಂಪನ.

ನಟ್ಟನಡುವಲ್ಲೇ ನೆಟ್ಟ ಬೆಳಕಿನ ಬಟ್ಟ
ಲೊಳಗಿಂದ ಸ್ಪಂದಿಸಿದ ಗುಡುಗು ಧ್ಯಾನ :

ಒಡೆದ ಕನ್ನಡಿ ! ಬಿಂಬ ಮರೆ !
ಆದರೂ ಮೂಲಕ್ಕೆ ಇಲ್ಲ ಊನ !
ಶೂನ್ಯದಲ್ಲೂ ಬೆಳಕು ಸಾಕಾರ, ಸಹಸ್ರಾರ !
ಬುದ್ಧ ಅಗೊ ! ಬುದ್ದ ಇಗೊ ! ಬುದ್ಧ ಎಲ್ಲೆಲ್ಲೂ !
ಅಲ್ಲಿ ನಕ್ಕ ! ಇಲ್ಲಿ ನಕ್ಕ ! ಬುದ್ದ ಏಕೆ ನಕ್ಕ ?
ಕಲೆಯ ಹಿಚುಕಿ ಕೋಲುವನೆಂಬ
ಭ್ರಾಂತಿಗಾಗಿ ಬುದ್ದ ನಕ್ಕ !
ಮೊಳಗಿಸಿದ ಮೌನ ಕಹಳೆ :
'ಬಿದ್ದವನು ನಾನಲ್ಲ ! ನೀ, ತಾಲಿಬಾನ' !

ವಿಶ್ಲೇಷಣೆ :

ಇತಿಹಾಸದ ಕರಾಳ ಪುಟವೂ...
ಎಣೆ ಇಲ್ಲದ ಜ್ಞಾನಪ್ರಭೆಯೂ....

ಇತಿಹಾಸದಲ್ಲಿ ಕಪ್ಪು ಚುಕ್ಕೆಯಂತೆ ದಾಖಲಾಗಿರುವ ಇಸ್ಲಾಂ ಭಯೋತ್ಪಾದನೆಯ ಕ್ರೂರ ಮುಖವೊಂದನ್ನು ಎಚ್ಚೆಸ್ಕೆ ಅವರು ಈ ಕವನದಲ್ಲಿ ಮನ ಮಿಡಿಯುವಂತೆ ಚಿತ್ರಿಸಿದ್ದಾರೆ. 'ತಾಳಿದವನು ಬಾಳಿಯಾನು. . . ತಾಳು ತಾಳು ತಾಲಿಬಾನ, ಮೂರ್ತಿಭಂಜನಕೆ ಹೊರಡಿಸದಿರು ಫರ್ಮಾನು' ಎಂಬ ಕಿವಿ ಮಾತಿನೊಂದಿಗೆ ಆರಂಭವಾಗುವ ಕವಿತೆಯು ಹೃದಯಹೀನರ ನಿಕೃಷ್ಟ ನಡೆಯನ್ನು ಖಂಡಿಸುತ್ತಲೇ ಸಾಗುತ್ತದೆ.

ತಡ ಮಾಡಿದರೆ ಜಗತ್ತಿನ ಅಂತಃಕರಣವೆಲ್ಲ ಒಟ್ಟುಗೂಡಿ ಭೋರ್ಗರೆಯುವ ತೊರೆಯಂತೆ ಹರಿದು ಬರುವ ಸಾಧ್ಯತೆಯನ್ನೂ ಇಲ್ಲಿ ಕವಿ ಮನಗಾಣುವರು. ಗುಹಾಂತರ್ಗಾಮಿಯಾದ ಈ ಗುಮ್ಮನು ಗಮ್ಮನೆಯ ಕಂಪು ಸೂಸುತ್ತ, ತಂಪ ಸಿಂಪಡಿಸಿ ಜಗತ್ತನ್ನೇ ಸಂಮೋಹಗೊಳಿಸಿದರೆ ಹೇಗೆ ಎಂಬ ಗಾಬರಿಯೂ ದುರುಳರಿಗಿದೆ, ಹೀಗಾದರೆ ತನ್ನ ಫರ್ಮಾನು ವ್ಯರ್ಥವಾದೀತೆಂಬ ಆತಂಕಕ್ಕೆ ಸಿಲುಕಿದ ತಾಲಿಬಾನಿಗಳು ವಿವೇಕರಹಿತ ಕೃತ್ಯವನ್ನು ಅವ್ಯಾಹತ ನಡೆಸಿಯೇ ತೀರಿದರು.

ಆದರೆ ಈ ಕೊಚ್ಚುವಿಕೆಗೆ ಜಗ್ಗುವಷ್ಟು ಸಾಮಾನ್ಯನಲ್ಲ ಈ ಬುದ್ಧ! ಸಹಸ್ರಾರು ವರ್ಷಗಳಿಂದ ಬಿಸಿಲು, ಮಳೆ, ಸಿಡಿಲು, ಚಳಿಗೆ ಎದೆಯೊಡ್ಡಿ ಸೆಡ್ಡು ಹೊಡೆದು ನಿಂತ ಗಟ್ಟಿ ಮುದುಕ ಎಂದು ಕವಿಗಳು ಬುದ್ಧನನ್ನು ಬಣ್ಣಿಸುತ್ತಾರೆ.

ಜಗದ ಏನೆಲ್ಲ ಜಂಜಾಟಗಳಿಗೂ ಜಗ್ಗದ ಅಶರೀರಿ ಬುದ್ಧನ ಗುಂಡಿಗೆಗೆ ಸ್ಫೋಟಕಗಳ ಬಳಸಿ ಗುಂಡಿನ ಒಡ್ಡೋಲಗವನ್ನೇ ನಡೆಸಿದಿರಿ. ಜಗವೆಲ್ಲ ಮಲಗಿದರೂ ಇವನೊಬ್ಬನು ಎದ್ದಿದ್ದ; ನೆಲದಿಂದ ಮುಗಿಲೆತ್ತರಕೆ ಎದ್ದು ನಿಂತಿದ್ದ, ಇಂಥವನ ಬೀಳಿಸಿದಿರಿ. ನೀಲ ಆಗಸದಲ್ಲಿ ಕಾರ್ಮೋಡವೇ ಕವಿದು ಭೀಕರ ಆತಂಕದಲಿ ಭೂಮಿ ಕಂಪನವಾದಂಥ ಅನುಭವ. ಬುದ್ಧನ ಮೂರ್ತಿಗಳಿಗೆ ತಾಲಿಬಾನರು ನಿರಂತರ ಗುಂಡು ತಾಕಿಸಿದ ಸನ್ನಿವೇಶವನ್ನು ಕವಿ ಇಲ್ಲಿ ಭಾವುಕರಾಗಿ ಚಿತ್ರಿಸಿದ್ದಾರೆ.

ಹೃದಯಹೀನರ ನಡೆಯಿಂದ ಕನ್ನಡಿ ಒಡೆದು ಬಿಂಬ ಮರೆಯಾದ ಮಾತ್ರಕ್ಕೆ ಮೂಲವು ಎಲ್ಲಿಯೂ, ಎಂದಿಗೂ ಊನವಾಗಲ್ಲ. ಅದುವೇ ತಾನೇ ಬುದ್ಧ? ಶೂನ್ಯದಲ್ಲೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬೆಳಕಿನ ಸಾಕಾರ ಅವನು. ಅಲ್ಲಿಯೂ, ಇಲ್ಲಿಯೂ ಎಲ್ಲೆಡೆಗೂ ವ್ಯಾಪಿಸಿದ ಬುದ್ಧನು ಹೃದಯಹೀನರ ಈ ಅನರ್ಥ ನಡೆಯ ಕಂಡು ನಗುತ್ತಿದ್ದಾನೆ ಎನ್ನುತ್ತಿದ್ದಾರೆ ಕವಿ. ಹೌದು, ಕಲೆಯನ್ನು ಕತ್ತು ಹಿಚುಕಿ ಕೊಲ್ಲವೆನೆಂಬ ಅವರ ಭ್ರಾಂತಿಯ ಕಂಡೇ ಬುದ್ಧ ನಗುತ್ತಿದ್ದಾನೆ. ನೆಲಕೆ ಬಿದ್ದದ್ದು ತಾಲಿಬಾನಿಗಳೇ ಹೊರತು ಬುದ್ಧನಲ್ಲ, ಎಷ್ಟೇ ವಿಕಲ್ಪಗಳಿದ್ದರೂ, ದಿವ್ಯವಾದ ಬೆಳಕಿನ ಪ್ರಖರತೆಯು ಅಜ್ಞಾನದ ಕತ್ತಲನ್ನು ಕರಗಿಸದೇ ಇರದು, ಆ ಮೂಲಕ ಬುದ್ಧನು ನಿರಂತರ ಬೆಳಕಿನ ಸಾಕಾರ ಎಂಬುದನ್ನು ಮನಗಾಣಿಸುತ್ತಾರೆ.

ಅತ್ಯಂತ ಕಡಿಮೆ ಶಬ್ದಗಳಲ್ಲಿ ಹಿರಿದಾದ ಅರ್ಥವನ್ನು ಪೋಣಿಸಿ ಕೊಡುವಲ್ಲಿ ಎಚ್ಚೆಸ್ಕೆ ಅವರಿಗೆ ಎಚ್ಚೆಸ್ಕೆ ಅವರೇ ಸಾಟಿ! ಅವರ ಸುಂದರ ಪದ-ಬಂಧಗಳ ಸಾಮರಸ್ಯವು ನಮ್ಮ ಓದಿಗೆ ಹೆಚ್ಚಿನ ಹುರುಪನ್ನು ನೀಡುತ್ತದೆ. ಇಡೀ ಕವನವು ಇತಿಹಾಸದ ಕರಾಳ ಪುಟವನ್ನು ತೆರೆದಿಟ್ಟಂತೆ ಕಟ್ಟಿಕೊಟ್ಟರೂ, ಜ್ಞಾನದ ಪ್ರಭೆಯು ಎಂದಿಗೂ ಏನೆಲ್ಲ ಅನಿಷ್ಟಗಳನ್ನೂ ಮೆಟ್ಟಿ ನಿಲ್ಲಬಲ್ಲ ದಿವ್ಯ ಶಕ್ತಿಯನ್ನು ಹೊಂದಿದೆ ಎಂಬುದನ್ನು ಬಲವಾಗಿ ಪ್ರತಿಪಾದಿಸುತ್ತದೆ.

ಕವನ - ಋತ - ಅನೃತ - ಮಹಾಬಲ ಕೆ.ಎನ್

ಇಲ್ಲಿದ್ದಾನೊ ?
ಇಲ್ಲವೇ,
ಅಲ್ಲಿದ್ದಾನೆ ?
ಇಲ್ಲ ? ಅಲ್ಲಿಲ್ಲ ?
ಇಲ್ಲೂ ಇಲ್ಲ -
ಇಲ್ಲ ! ಇಲ್ಲಿಲ್ಲ.
ನೋಡಿ, ಸೋಲಿಲ್ಲ !
ಇಲ್ಲ ! ಹಿ ! ಇಲ್ಲಾ !

ಅಂತೂ ಇವನಲ್ಲ !

ಅಂದರೆ ಇವನೇ ಅಲ್ಲಾ !
ಹಾಂ ! ಅಲ್ಲವೇ ಅಲ್ಲಾ ?
ಸೋಜಿಗವಲ್ಲ !
ಗೋಡೆ ಬೋದುಗೆ ಶಿಖರ ಗೋಳಗುಮ್ಮಟ ಚಂದ್ರ -
ನೋಡಿರಲ್ಲ !
ಕಾಣುವುದಿಲ್ಲ ?

ಉರುಳಿತೆನುವಿರಲ್ಲ !
ಆ ತಹಲ್‌ನಿಂದ ಈ ತಹಲ್ ವರೆಗು
ಇದ್ದಾನೆ ಇಲ್ಲೇ ! ಅಲ್ಲಾ ?
ಸೂರ್ಯಚಂದ್ರರೆ ಸಾಕ್ಷಿ.
ಅರ್ಥವಾಯಿತಲ್ಲ ?
ತಥಾಸ್ತು !

ಅಸ್ತು ?
ಎಲ್ಲುಂಟು ಅಸ್ತಿತ್ವ ?
ಅಸ್ತಿನಾಸ್ತಿಯ ಕುಸ್ತಿ !
ಇದಕಾಗಿ ಏನೆಲ್ಲ
ಗೌಜು ಗದ್ದಲ ತಮಟೆ,
ಹಾರೆ ಗುದ್ದಲಿ ಜಾಗಟೆ !
ಭೋಂ ಭೋಂ ಭೋಂ ಶಂಖನಾದ !
ನೆತ್ತಿಗೇರಿದ ಖಾರಸೇವೆಯುನ್ಮಾದ !
ತಾವೇನು ಮಾಡುವರೊ ತಮಗೇ ಗೊತ್ತಿಲ್ಲ,
ಆ ಜನಕ್ಕೆ !
ಎಲ್ಲ ನಾ ಮೊಳಕ್ಕೆ !
ವಿಶ್ವಪುರುಷನ ಕ್ಷೇತ್ರ ಇಷ್ಟು ಸೀಮಿತವೆ ?

ನಾಲ್ಲೇ ಸುಖಮಸ್ತಿ !
ವೃಥಾ ಮಸ್ತಿ !
ಅರ್ಥವಿಲ್ಲದ ಕುಸ್ತಿ:

ಬನ್ನಿ ಜನರೆಲ್ಲ !
ನ್ಯಾಯವೆಂಬುದು ಯಾರ
ಮನೆಯ ಸೊತ್ತಲ್ಲ, ತೊತ್ತಲ್ಲ.
ಡೀ ಫ್ಯಾಕ್ಟೊ, ಡೀ ಜೂರಿ !
ವಾಸ್ತವವೆ ಸತ್ಯ, ನ್ಯಾಯ.
ಬೀಗ ಜಡಿದರೆ ಆಯ್ತು.
Possession is nine points of law.
ಗೊತ್ತಲ್ಲ ?
ಆಯಿತಲ್ಲ ರಾಯರೆ -
ನಾಟಕದ ಅಂತ್ಯ ?

ರಾಮ ರಾಮ |
ಗಿಳಿಯ ಪಂಜರದೊಳಿಲ್ಲ !
ಅಕ್ಕ ನಿನ್ನ ಮಾತ ಕೇಳಿ,
ಚಿಕ್ಕದೊಂದು ಗಿಳಿಯ ಸಾಕಿ,
ಬೆಕ್ಕು ಕೊಂಡು ಹೋಯಿತಲ್ಲ !
ಅಂತೂ ಅದು ನಿಜವಾಯ್ತಲ್ಲ.

ಅಂದರೆ ಯಾವುದು ನಿಜ ?
ಯಾವುದಲ್ಲ ?
ಇದು ಸರಿಯೆ ?

ಅದು ನ್ಯಾಯವೆ ?
ಇದು ಅಲ್ಲ. ಅದುವೂ ಅಲ್ಲ.
ದೇವರು ಖಂಡಿತ ಅಲ್ಲಾ ?

ಯಾವುದು ಋತ ?
ಯಾವುದನೃತ ?
ಇಲ್ಲವೆಂದರು ಅಲ್ಲ.
ಅಲ್ಲವೆಂದರು ಇಲ್ಲ.
ದಿಕ್ಕು ತೋಚದಲ್ಲ !

ಕವನ - ಕನ್ನಡದ ರಕ್ಷಾಮಣಿ - ಶ್ರೀಮತಿ ಸ್ನೇಹಲತಾ

ಹುಟ್ಟು ಕೆಸರಿನ ನಡುವೆ ;
ನೀರ್ಕೊರೆದು ಮೇಲೆದ್ದು ತಲೆಯೆತ್ತಿ ಹರಡುವುದು
ಪರಿಮಳದ ದಳ ಕಮಲ.

ನಾರಿಕೇಳದ ತಿರುಳ ಸಿಹಿನೀರಿನಾಗರಕೆ
ಚಿಪ್ಪು-ನಾರಿನ ಕೋಟೆ.

ಪನಸಕ್ಕೆ ಮೈಯೆಲ್ಲ ಮುಳ್ಳು ;
ಅಂತರಾಳದೊಳಗೆ ಜೇನಿನ ತೊಳೆ.

ಜೇನು ಹುಟ್ಟಿನ ಸವಿಯ ಭಂಡಾರ ಕಾವಲಿಗೆ
ಭಲ್ಲೆ ಧರಿಸಿದ ಭಟಸಮೂಹ.
ಕಂಟಕವ ಲೆಕ್ಕಿಸದೆ ಹೊಕ್ಕಾಗ ದಕ್ಕುವುದು
ಮಧುರ ರಸದಾನಂದ.

ಉಗಮ ಕುಗ್ರಾಮ :
ಹಗಲು ಹೊಂಬಿಸಿಲೆರಕ,
ಇರುಳು ತಿಂಗಳ ಬೆಳಕು.
ಆದರೂ ಎಲ್ಲೆಲ್ಲು ಪಸರಿಸಿದ ಕತ್ತಲು -
ಹಸಿವು,
ಅಜ್ಞಾನ,
ಜಾಡ್ಯ,
ವ್ಯಾಧಿ,
ನಿರಾಶೆ
ಕ್ಷುದ್ರ ಬದುಕು !

ತಿಳಿವಿಗೆ ವಿಮುಖ ಪಥ -
ಕುರಿಮಂದೆ ಲೋಕ,
ಕೌಮಾರ್ಯದ ಎದೆಯಾಳದಿ
ಹಂಬಲ,
ತುಮುಲ.

ದೂರ ಹರಿಸಿದ ನೋಟ :
ಹೊಳೆಮಿಂಚು.
ದಿಗ್ದಿಗಂತದ ಅಂಚು.
ಎಂಥದೋ ಆ ಬದುಕು ?
- ಬಲ್ಲವರು ಯಾರು ?

ಕಗ್ಗತ್ತಲ ಗುಡಿಸಿಲಿಂದ ಹೊರಕೆ ಚಿಮ್ಮಿದ ಜೀವ -
ಕೆಸರ ಕೊಡವಿ,
ಮೊಳಕೆ ಒಡೆದು,
ಚಿಪ್ಪ ಮುರಿದು,
ಭಲ್ಲೆ ಭಂಜಿಸಿ,
ಸಡ್ಡು ಹೊಡೆದು,
ಎದ್ದು ಹಾರಿದ ನಭಕೆ –
ಗಂಗೋತ್ರಿಗೆ !
ಮರಾಳರ ಜೊತೆಜೊತೆಗೆ
ಕೇಳಿಯಾಡುವುದಕ್ಕೆ !
ರಾಮಾಯಣ ಮಹಾಕಾವ್ಯ ರಸಾಮೃತವೀಂಟಿಸಿದ
ರಸಋಷಿಯ ಶ್ರೀರಕ್ಷೆ !

ಕಡದ ದೀಕ್ಷೆ !
ಜಾತಿವರ್ಗಗಳೆಂಬ ಭೇದಭಾವವನಳಿಸಿ
ಕನ್ನಡದ ಗುಡಿ ಕಟ್ಟಿ
ಹೊನ್ನ ಕಳಸವನಿಟ್ಟು
ಜ್ಞಾನದೇವಿಗೆ ತಾಯಿ -
ನುಡಿಯ ಸೇಸೆಯನಿಕ್ಕಿ
ಜಾನಪದದೈಸಿರಿಯ
ಭವ್ಯ ಚವರಿಯ ಬೀಸಿ
ಮೆರೆಯಿಸುವ ಸಂಭ್ರಮ !

ದನದ ಕೊಟ್ಟಿಗೆಯಿಂದ ಕುದಿವ ಕೊಪ್ಪರಿಗೆಗೇ
ನೆಗೆದು,
ಪಿಸುಣತೆಯೊಡನೆ ಸೆಣಸಾಡಿ,
ವಿದ್ಯೆಯ ಬೆಳಗಿ,
ಗದ್ಯಶಿಲ್ಪವ ಕಡೆದ ವಿನಯನಿಧಿ ಕೆಚ್ಚಿಗೆ !
ಸರಳತೆಯ ಸಾಕಾರ !
ಚಿಂತನಗಂಭೀರ !
ವಜ್ರಸಮ, ಮೃದುಕುಸುಮ !
ಮಣ್ಣಿನ ಸಂತಾನಕ್ಕೆ
ಅಮರತ್ವ ಬೋಧಿಸಿದ
ಕನ್ನಡದ ರಕ್ಷಾಮಣಿ !

ವಿಶ್ಲೇಷಣೆ :

ಕನ್ನಡದ ರಕ್ಷಾಮಣಿ - ಬೇರೆಯಾರೂ ಅಲ್ಲ, ಅವರೇ ದೇಜಗೌ. (ದೇವೇಗೌಡ ಜವರೇಗೌಡ). ಕುವೆಂಪು ಅವರ ಮಾನಸ ಪುತ್ರರೂ ಕೂಡ.

ಪ್ರಾಚಾರ್ಯ ಎಚ್ಚೆಸ್ಕೆ ಅವರ ಪರಮಾಪ್ತರು, ಮಾರ್ಗದರ್ಶಿ, ಕುಟುಂಬ ಸ್ನೇಹಿತರು. ಈ ಕವನವು ಎಚ್ಚೆಸ್ಕೆ ಅವರ ಮೂರನೇ ಕವನ ಸಂಕಲನವಾದ "ಜೀವರೇಖೆ"ಯಿಂದ ಆರಿಸಲಾಗಿದೆ.

ರಕ್ಷಾಮಣಿಯ ಮನಸ್ಸು ನಾಡಿನ ರಕ್ಷಣೆಗಾಗಿ, ವಿಕಾಸಕ್ಕಾಗಿ ಹಾತೊರೆಯುತ್ತಿದೆ. ಕವಿ ಪ್ರಕೃತಿಯಲ್ಲಿನ ಗೂಢ ತತ್ವ ಚಲನೆ ವಿಕಾಸಗಳಲ್ಲಿ ಜೀವನದ ಸತ್ಯವನ್ನು ಕಾಣುವ ಪ್ರಯತ್ನ ಮಾಡಿದಂತಿದೆ. ಸಮಸ್ಯೆ ಸಂಘರ್ಷಗಳೆಂಬ ಕೆಸರಿನಿಂದ ಮೇಲೆದ್ದ ವಿಕಸಿತ ವ್ಯಕ್ತಿತ್ವ ಸುತ್ತಲೂ ಸಮಾಜಕ್ಕೆ ಸುಗಂಧವನ್ನು ಹರಡುವಂತಾದರೆ...... ನಾರಿ ಕೇಳ (ತೆಂಗು ಬಾಳೆ) ತಿರುಳು ಪಡೆಯಲು, ಸಿಹಿನೀರಿನ ಆಗರವನ್ನು ತಲುಪಲು ಚಿಪ್ಪು ನಾರು ಗಳೆಂಬ ಕೋಟೆ ಭೇದಿಸಬೇಕು. ಹಲಸಿನ ಹಣ್ಣಿಗೆ ಮೈಯೆಲ್ಲಾ ಮುಳ್ಳು ಅದನ್ನು ಭೇದಿಸಿದಾಗ ಅಂತರಂಗದಲ್ಲಿ ಸಿಗುವುದು ಜೇನ ಸವಿಯ ತೊಳೆ. ಜೀವನ ಉತ್ಪತ್ತಿಯ ಸುಂದರ ಸವಿಯ ಪ್ರಾಪ್ತಿಗಾಗಿ ಸುತ್ತ ಜೇನ್ನೊಣಗಳ ಕಾವಲುಪಡೆಯ ಸಮೂಹ ಎಲ್ಲಾ ಕಂಟಕಗಳನ್ನು ಭೇದಿಸಬೇಕು ಆಗ ರಸಾನುಭವ ರಸಾನಂದ. ಆಗುವುದು.

ಇಲ್ಲಿ ಕವಿ ಅಜ್ಞಾನ ಮೌಢ್ಯಗಳಿಂದ ಕುಡಿದ ಈ ಸಮಾಜವನ್ನು ಒಂದು ಕುಗ್ರಾಮ ಎಂದಿದ್ದಾರೆ ಇಲ್ಲಿ ಹಗಲಿನಲ್ಲಿ ಹೊಂಬಿಸಿಲಿನ ಕಿರಣಗಳು ಜ್ಞಾನದ ಬೆಳಕು ಹರಿಯುತ್ತದೆ. ಇರುಳಿನಲ್ಲಿ ಬೆಳದಿಂಗಳ ಮಂದ ಬೆಳಕು ಕತ್ತಲ ಕೋಟೆ.

ಇಲ್ಲಿ ಕತ್ತಲೆಯೆಂದರೆ ಹಸಿವು ಅಜ್ಞಾನ, ಜಾಡ್ಯ ಮೌರ್ಯ ನಾನಾ ವ್ಯಾಧಿಗಳು ಇದೆಲ್ಲದರ ಪರಿಣಾಮ ಕ್ಷುದ್ರ ಬದುಕು ಜ್ಞಾನದ ಅರಿವಿನ ಹಾದಿಯನ್ನು ಬಿಟ್ಟು ಸಾಗಿದೆ. ಹಾದಿಯಲ್ಲಿ ಕುರಿಮಂದೆ ಯಂತೆ ಸಾಗುವ ಈ ಲೋಕದವರಿಗಾಗಿ ಕವಿಗೆ ಮರುಕವಾಗುತ್ತದೆ ಹೊಸ ದಾರಿಯಲ್ಲಿ ಸಾಗಬೇಕೆಂಬ ಅಂತರಂಗದ ಬಯಕೆಯು ಕವಿಗೆ ಆಗುತ್ತಿದೆ.

ಕವನ - ಜೀವರೇಖೆ - ವಿಜಯಕುಮಾರ್ ಸುರತ್ಕಲ್

'ಗಂಗಾ ಯಮುನಾ ಸಿಂಧು ಗೋದಾವರಿ ಸರಸ್ವತಿ,
ಕಾವೇರಿ ನರ್ಮದೆಯರೆ,
ಪ್ರಾಪ್ತವಾಗಲಿ ನಿಮ್ಮ ಸಾನ್ನಿಧ್ಯ ನಮಗೆ –
ಈ ಕೊಳದ ನೀರಿನೊಳಗೆ.'

'ಹುಚ್ಚು ಕನಸೇ ನಿಮಗೆ ?
ಗಂಗೆ ಕಶ್ಮಲ ರಾಶಿ.
ಯಮುನೆ ದೆಹಲೀ ಜನರ
ಬಚ್ಚಲ ಮನೆ !
ಭಯಗೊಂಡ ಸರಸತಿಯೋ -
ಪಲಾಯನ ಪಠಿಸಿದ್ದಾಳೆ
ನೆಲದ ಅಡಿಗೆ !
ನರ್ಮದಾ ಗೋದಾವರಿ ಕಾವೇರಿಯರ ಪಾಡು
ಕೇಳಬೇಕೆ ?
ಸಿಂಧುವೆಲ್ಲಿ ?'

ಆಧುನಿಕತೆಯ ರಾಡಿ
ಎಲ್ಲೆಲ್ಲು ಈಜಾಡಿ
ಕಳೆದುಕೊಂಡಿದೆ ನಮ್ಮ ಜಲರಾಶಿ
ಸ್ಪಟಿಕತನವನ್ನ.
ತೊಳೆದೀತು ಹೇಗೆ ಇದು
ಪಾಪವನ್ನ ?

ಇದಕ್ಕೆ ಪ್ರಾಯಶ್ಚಿತ್ತ ?
ಪ್ರಭು ಚಿತ್ತ !
ಹನಿಹನಿಯನೂ ಹಿಡಿದು
ಮೈ ತೊಳೆದು ಮಡಿಬಟ್ಟೆ
ತೊಡಿಸುವ ಪ್ರಯತ್ನ.

ಇಂಗ್ಲೆಂಡಿನ ಥೇಮ್ಸಿಗೂ ಮರುಹುಟ್ಟು,
ಕಾಯಕಲ್ಪ :
ಕಳೆದ ಕೊಳೆ, ತಳದ ಕಳೆ.
ಶುದ್ಧಿಕರಣಕ್ಕಾಗಿ ಎಷ್ಟೋ
ಲಕ್ಷ ಪವನು.
'ಅಬ್ಬ ! ಅಷ್ಟೋಂದೆ ?'

'ಥೇಮ್ಸ್ ಬರೀ ನದಿಯಲ್ಲ ಸ್ವಾಮಿ !
ಚಿರವಿಕಾಸದ ಲಾಸ್ಯ,
ಮನುಕುಲದ ಶುಭ ಗಸ್ತು.'
ತಾಯ ತಬ್ಬಿದ ಪುಟ್ಟ ಕಂದಮ್ಮನ ಬಟ್ಟಲಗಣ್ಣು
ತುಳುಕಿಸುತಿದೆ ವಿಸ್ಮಯ,
ಆನಂದ ತನ್ಮಯ
ನಗೆಯ ಅಲೆ, ಚಪ್ಪಾಳೆ.

'ಬರುವುದೆಲ್ಲಿಂದ ಈ ನಿರಂತರ ಧಾರೆ ?
ಹೋಗುವುದು ಎಲ್ಲಿಗೆ ?'
'ನದಿ ಮೂಲ ಕಂಡಂಥ ಮಂದಿ ಯಾರಿದ್ದಾರೆ ?
ಕಡಲನಂತತೆ ಬಲ್ಲರೆ ?

ಲಂಡನ್ ಸೇತುವೆಯಡಿಯ ಜಹಜುಗಳ ನಿಡಿದಾದ
ಸೀಳುದನಿಯಾಳದಲಿ
ಹುದುಗಿದೆ ಇದಕುತ್ತರ.

ನಿಲ್ಲದೆ ಹರಿದಿದೆ ಥೇಮ್ಸ್ -
ಯಥಾಪ್ರಕಾರ.
ಮಂದ ನಗೆ,
ಗತ್ತಿನ ನಡಿಗೆ,
ಜಣಜಣ ಕಾಲಂದುಗೆ,
ನವಿಲ ಸೋಗೆ.
ಬೆಲೆ ಕಟ್ಟಬಹುದೆ ಇದಕೆ -
ಈ ಸಂಪತ್ತಿಗೆ ?

ಅಂತೆ ಪಾವನ ನಮಗೆ
ಸಕಲ ಜಲ ಜೀವರೇಖೆ -
ತುಂಗಾ ನದಿಯ ಪಾನ,
ಗಂಗಾ ಸ್ನಾನ,
ಕಾವೇರಿಯುಲ್ಲಾಸ,
ಜೋಗದ ಹಾಸ.
ಹೊಳೆಹೊಳೆಯುತ್ತಿದ್ದರೆ ಈ
ನಿರಂತರ ಜಲಧಾರೆ,
ಬೆಳಗೀತು ಧರೆ,
ವಸುಂಧರೆ.

ವಿಶ್ಲೇಷಣೆ:

ಕವನದ ಬಗೆಗಿನ ನನ್ನ   ಅನ್ನಿಸಿಕೆ, ಅಭಿಪ್ರಾಯಗಳು.:

ಪ್ರಾಚಾರ್ಯರ ಈ ಕವನ ಸರಾಗವಾಗಿ ಓದಿಸಿಕೊಂಡು ಹೋಗುವ ಮುಕ್ತ ಛಂದದ ಸರಳ ಕವನ. ಇದರ ಆಶಯವು ಕೂಡ ನೇರಾನೇರ. ಕವಿ ಮಲಿನ ವಾಗುತ್ತಿರುವ ನಮ್ಮ ಹೊಳೆ ನದಿಗಳನ್ನು ಕಂಡು ವಿಡಂಬನೆ ಯ ಧ್ವನಿಯಲ್ಲಿ ತನ್ನ ಅಸಮಾಧಾನ ವನ್ನು ಹೊರಗೆಡವುತ್ತಾರೆ. ನಮ್ಮ ದೇಹ ಹಾಗು ದೇಶಕ್ಕೆ ಪರಿಶುದ್ಧ ಜಲ ಮೂಲಾಧಾರ. ಅದನ್ನೇ ಕವಿ 'ಜೀವ ರೇಖೆ' (Life line) ಎಂದು ಪರಿಭಾವಿಸುತ್ತಾರೆ.
ದೇಹ ಶುದ್ಧಿಯ ವೇಳೆ ಪಠಿಸುವ ಪವಿತ್ರ ನದಿಗಳ ಹೆಸರನ್ನು ಹೇಳಿ ಸಾನಿಧ್ಯೀಕರಿಸುವ ಸಂಪ್ರದಾಯವನ್ನು ಕವಿಯಿಲ್ಲಿ ಅಣಕವಾಡುತ್ತಾರೆ. ಅಂದ ಮಾತ್ರಕ್ಕೆ ಅವರೇನು ಸಂಪ್ರದಾಯ ವಿರೋಧಿ ಎಂದು ಭಾವಿಸ ಬೇಕಿಲ್ಲ.
ನಮ್ಮ ಕರ್ತವ್ಯ ಲೋಪದ ಬಗೆಗಿನ ವಿಸ್ಮೃತಿ ಯನ್ನು ಮರೆಮಾಚಿ ಮಂತ್ರ ದಿಂದ ಮಾವಿನ ಕಾಯಿ ಉರುಳುತ್ತದೆ ಎನ್ನುವ ಭ್ರಮೆಯಿಂದ ನಾವು ಹೊರ ಬರಬೇಕೆನ್ನುವುದೇ ಕವನದ ಆಶಯ.

ಕಶ್ಮಲಗಳ ರಾಶಿಯಿಂದ ಗಂಗಾ ನದಿ ತುಂಬಿ ಹೋಗಿದೆ. ಯಮನೆ, ದೆಹಲಿಯ ಜನರ ಬಚ್ಚಲ ಮನೆಯಂತಾಗಿದೆ, ಸರಸ್ವತಿ ನದಿ ಭೂಮಿಯಡಿಗೆ ಪಲಾಯನ ಮಾಡಿದ್ದಾಳೆ, ನರ್ಮದಾ ಗೋದಾವರಿ ಕಾವೇರಿ ನದಿಗಳು ಕೂಡ ಮಾನವನ ಅಸಡ್ಡೆಯಿಂದ ಮಲಿನಗೊಂಡಿವೆ. ಈ ಮಾನವ ಕೃತ ಅಪರಾಧಗಳಿಗೆ ಪ್ರಾಯಶ್ಚಿತ್ತ ವೇನು?

ನಾವು ಇದಕ್ಕಾಗಿ ಪಾಶ್ಚಾತ್ಯರಿಂದ ಪಾಠ ಕಲಿಯಬೇಕಿದೆ.
ಕೊಳೆ ಕಳೆಗಳಿಂದ ನಾರುತಿದ್ದ ಇಂಗ್ಲೇಂಡಿನ ಥೇಮ್ಸ್ ನದಿ ಇಂದು ಮರು ಹುಟ್ಟು ಪಡೆದಿದೆ. ಲಕ್ಷ ಲಕ್ಷ ವರಹಗಳನ್ನು ಖರ್ಚು ಮಾಡಿ ಆ ನದಿಯನ್ನು ಶುದ್ಧೀಕರಿಸಲಾಗಿದೆ. ಆಧುನಿಕತೆಯ ರಾಡಿಯಿಂದಾದ ಕೊಳೆ ಕಳೆದಿದೆ, ತಳ ಸ್ಪಟಿಕದಂತೆ ಹೊಳೆಯುತ್ತಿದೆ, ಚಿರವಿಕಾಸದ ಲಾಸ್ಯವಾಡುತ್ತಿದೆ. ಈ ಬದಲಾವಣೆ ವಿಸ್ಮಯ ಹುಟ್ಟಿಸುತ್ತದೆ, ಸಂತೋಷ ನೆಲೆ ನಿಲುವಂತೆ ಮಾಡಿದೆ.
ಈ ಸಾಧನೆ ನಮ್ಮ ಕಣ್ಣು ತೆರೆಸಬೇಕು. ನಮ್ಮ ನದಿ ಹೊಳೆಗಳಿಗೂ ಈ ಕಾಯಕಲ್ಪ ಅನಿವಾರ್ಯ.

ಮನುಕುಲದ ವಿಕಾಸಕ್ಕೆ ಜಲಸಂಪತ್ತು ಜೀವರೇಖೆ ಇದ್ದಂತೆ. ಅವು ಸ್ಪಟಿಕದಂತೆ ಶುದ್ಧವಾದಾಗ ನಮ್ಮ ನದಿಗಳು ಪವಿತ್ರ ವಾಗುತ್ತವೆ. ನಮ್ಮ ಭೂಮಿ ಪಾವನವಾಗುತ್ತದೆ. ಆಗ ಗಂಗಾ ಸ್ನಾನ, ತುಂಗಾ ಪಾನ ಎನ್ನುವ ಲೋಕೋಕ್ತಿಗೆ ಅರ್ಥ ಬರುತ್ತದೆ. ಕಾವೇರಿಯ ಉಲ್ಲಾಸದ ನಡಿಗೆ, ತುಂಬಿ ಹರಿವ ಜೋಗ ಜಲಪಾತದ ಸೌಂದರ್ಯ ಕಳೆಗಟ್ಟಿ ಭೂಮಿ ಬೆಳಗುತ್ತದೆ, ವಸುಂಧರೆ ಅನ್ವರ್ಥ ನಾಮವಾಗುತ್ತದೆ.

ಕವನ - ಡಯಾನ - ಶ್ರೀಪ್ರಕಾಶ್ ಹೆಚ್.ವಿ.

ಮುಗಿಲ ಮೋರೆಗೆ ಬಳಿದ ಕಿತ್ತಳೆಯ ರಂಗು,
ಉರಿದುರಿದು ಬಸವಳಿದ ದೊಂದಿಗೂ ನಂದುವಾಸೆ.
ಇಳಿಬಿಸಿಲು, ಬೆವರಸಾಲೆ.

ಮುಚ್ಚಂಜೆ
ಬಂತು ಗಾಳಿಯ ಪಾಳಿ :
ಬಿಲದಿಂದ ಚಿಮ್ಮಿರುವ ಕಳ್ಳನೋಟ.
ಇರುಳ ರಾಣಿಯ ಜೋಡಿ ಗುಪ್ತ ಚೆಲ್ಲಾಟ.
ಚಿಪ್ಪೊಡೆದು ಚೆಲ್ಲಾಡಿದ ತೋರಮುತ್ತಿನ ರಾಶಿ -
ಆಕಾಶ ಪೂರ.

ಕತ್ತಲಿನ ಕಡಲಲ್ಲಿ ಮೂಡಿತ್ತು ದುಂಡನೆ ದೀಪ :
ಮೊಲದ ಕೋಡಿನ ಬಿಲ್ಲು ಹೂಬಾಣ.
ಮುಂಚೂಣಿಯಲಿ ಸರಸಿ ಗಜಗಮನೆ ಡಯಾನಾ :
ಬೆಳ್ಮುಗಿಲ ನಿರಿಸೀರೆ ಚಿಮುಕು ನಡಿಗೆ ;
ಶಂಬೂಕ ಶೃಂಗ ಕಿರೀಟ, ಕೊಂಕು ಶಿರ,
ಕಣ್ಣೋಟ ಕೂರಲಗು, ನಗೆ ಬೆರಗು, ಕ್ಷೀರಪಥ -
ಶುಭ ಗಸ್ತು, ಚುಕ್ಕೆ ನೆರವಿ ಅಕ್ಕಪಕ್ಕ.
ಹಾಲಿನೋಕುಳಿ, ಬೆಳತಿಗೆಯ ಪಸರಿಸುವ ಕರ್ತವ್ಯಪಥಗಾಮಿನಿ.

ತಿಂತಿಣಿಯ ನಡುವಿಂದ ಜಿಗಿದನೊಬ್ಬ ಸೈಂಧವವ್ಯಾಧ -
ಮಿಂಚುಗಪ್ಪಿನ ತಂತಿ ಬಳುಕು -
ಹುರಿ ಮೀಸ, ತೊಂಡೆ ತುಟಿ ನಡುವೆ ಬಿಳಿ ದಾಳಿಂಬೆ ಹರಳು
ಸೂಜಿಗಲ್ಲಿನ ಬಂಡೆ.

ಸೂಜಿಯಾದಳು ಹುಡುಗಿ, ಕಣ್ಬೇಟ ಬೆರಗು ಪುಳಕ.
ಧಿಗ್ಗನೆದೆ ಸ್ವಲ್ಪ, ಮಿಡಿತ ನಿಶ್ಯಬ್ದ.
ಮುತ್ತಿನಪ್ಪುಗೆ, ಹೊತ್ತು ಸ್ಥಿತ.
ಬಿಳಿ-ಕಪ್ಪು ಕೋಮಲತೆ-ಕಾಠಿಣ್ಯ ಏಕೀಕೃತ.
ಪ್ರಳಯಗರ್ಭದೊಳಗೇ ಪ್ರೇಮಾಂಕುರ.
ಆಗಸದ ಕಣದಿಂದ ಡಯಾನಾ ದೂರ.

ಭಣಭಣಗುಟ್ಟಿತು ಬಾನು-ಡಯನಾ ವಿಹೀನ
ಚಂದ್ರನೇ ನಿಸ್ತೇಜ-ಮಾರ್ಗದರ್ಶನಹೀನ.
ಹರಿದು ಬರಲಿಲ್ಲ ಧರೆಗೆ ಕ್ಷೀರಧಾರೆ.
ಕಪ್ಪು ಕತ್ತಲ ರಾತ್ರಿ-ಧಾತ್ರಿ.
ನೀಲಪಟದಲ್ಲೆಲ್ಲ ಗಾಢ ನೀರವತೆ.

ಏನೀ ಅನಾಹುತ ! ವಿಶ್ವನಿಯಮಾತೀತ !
ಕರ್ತವ್ಯಪಥಚ್ಯುತ !
ಅಪೋಲೋ ಕುಪಿತ -
ಸೂರ್ಯಾಂಶಸಂಭೂತ, ಲೋಕನಾಥ.

'ಪ್ರೀತಿಯ ತಂಗಿ ಡಯಾನಾ ಹೀನಪ್ರಣಯೋನ್ಮಾದೆ !
ಅಧರ್ಮಪಥಗಮನೆ !
ಕೊನೆಗೊಳಿಸಲೇಬೇಕು ಈ
ವರ್ಣಸಂಕರವನ್ನ !
ಹೂಡಿದನಾಗ ಅಪೋಲೋ ಒಂದು ಉಪಾಯವನ್ನ :

'ತಂಗಿ, ಡಯಾನಾ ! ನೀ ಮಹಾ ಸಾಹಸಗಿತ್ತಿ,
ಅಪ್ರತಿಮ ಬಿಲ್ಗಾರ್ತಿ, ಗಂಡಿಗೆ ಸಮ.
ಈಗ ನಿನಗಿದೋ ಒಂದು ಪಂಥಾಹ್ವಾನ -
ಮುಂದಿರುವ ಗುರಿಯತ್ತ ಬಾಣ ಎಸೆಯುವ ಸ್ಪರ್ಧೆ.
ಮೊದಲು ನಿನ್ನದು ಸರದಿ, ಆಮೇಲೆ ನನ್ನದು.
ನಮ್ಮಿಬ್ಬರಲ್ಲಿ ಯಾರು ಗೆಲ್ಲುವರೋ, ಪರೀಕ್ಷೆ ಮಾಡೋಣ
ಒಪ್ಪಿಗೆಯಾ ?
ಡಯನಾ ಮೌನ ! ಏನಿಂದು ಈ ಸ್ಪರ್ಧೆ ?
ಅಣ್ಣನಿಗೆ ಹುಚ್ಚು ! ಆಗಲಿ, ನೋಡೋಣ.
'ಯಾವುದು ಗುರಿ ?
'ಹೇಳುತ್ತೇನೆ, ಕೇಳಿಸಿಕೋ, ಗಮನವಿಟ್ಟು.
ನೋಡು, ನಿಟ್ಟಿಸಿ ದಿಟ್ಟಿ
ಅಗೋ! ಅಲ್ಲಿ … ದೂರದಲ್ಲಿ.....
ಕಡಲ ಚೆಲ್ಲಾಟ, ಭೋರ್ಗರೆತ, ತುಂತುರಿನ ಜಳಕ,
ಮಬ್ಬು ತೆರೆ, ಸಾಲುಗಟ್ಟಿದ ಮುಗಿಲ ನಾದಲೀಲೆ.
ಕಾಣಿಸಿತೆ ಕೇಳಿಸಿತೆ ? -
ಅಲ್ಲಿ, ಅದರ ಬೆಂಗಡೆಗೊಂದು ಅಸ್ಪಷ್ಟ ಆಕೃತಿ –
ಕಂಡೂ ಕಾಣದ ರೀತಿ. ಗೊತ್ತಾಯಿತೆ ?
ಅಗೂ ! ಅಗೋ !
ಅಲೆಯ ಸಪುಳ ತಾಳ !
ಥಟ್ಟನೆ ಮರೆಯಾಯಿತಗೊ ಆ ರೂಪು !
ಅಗೊ ಮತ್ತೆ ಪ್ರತ್ಯಕ್ಷ :
ವೀಚಿಮಾಲೆಯ ಧರಿಸಿ ಥಕಥೈಥನ !
ಹಾಂ ! ಈಗ ನಿಚ್ಚಳ !
ಹೊಡಿ ಬೇಗ -
ನೇರ ಗುರಿ ಇಟ್ಟು,
ಆನಂದಿಸಲಿ ಎಲ್ಲ ಜನ -
ನೋಡಿ ನಿನ್ನ ಪ್ರತಾಪಾನ !!

ಅಪೋಲೋ ಸವಾಲಿಗೆ ಮರುಳಾದಳು ಡಯಾನಾ
ತೋರಿಸಲೆಬೇಕೀಗ ಅಪೋಲೋ ಅಣ್ಣನಿಗೆ -
ತನಗೆ ಯಾರೂ ಇಲ್ಲ ಸಮಾನ !
'ನೋಡಣ್ಣ!' ಎನ್ನುತ್ತ
ತೂರಿಬಿಟ್ಟಳು ನಾರಿ
ಬಾಣದ ಹಿಂದೆ ಬಾಣ !

ಒಡನೆ ಬಿರಿಯಿತು ಬಾನು !
ಸರಿದುಹೋಯಿತು ಮುಗಿಲು !
ಕಳಚಿಬಿತ್ತು ಅಪೋಲೋನ ಕಟ್ಟು ಮಾಯೆ.

ಅಬ್ಬ ! ಎಂಥ ದುರಂತ !
ಅಸ್ಪಷ್ಟ ಆಕೃತಿಗೆ ಆಯಿತು ಮರ್ಮಾಘಾತ !
ಹೆಣ್ಣ ಕೈಯ ಕೂರಂಬಿಗೆ ದೈತ್ಯ ದೇಹದ ಪಾತ !
ವ್ಯಾಧ ಮೃತ !
ಪ್ರೇಮ ಹತ !
ನೇಹ ಗತ !
ಕಡಲೆಲ್ಲ ಕೆನ್ನೀರು !
ಡಯಾನಾ ಕೆನ್ನೆ ಪೂರ ಕಣ್ಣೀರಿನ ಮಹಾಪೂರ !
ಕೈಯಾರ ಕೊಂದೆನಲ್ಲ ನಲ್ಲ ನನ್ನ ! ಎಂಥ ಘೋರ !
ಮುಗಿಲೆ ತೂತಾಯಿತೋ ಎಂದು ಹಾಹಾಕಾರ !
ಸುರಿಯಿತು ಸೋನೆ ಜೋರೋ್ರ -
ಎಂದು ಧಾರಾಕಾರ !
ಕಂತಿದುವು ಚುಕ್ಕಿಗಳು !
ಜಗವೆ ಮಬ್ಬು !

ಸತ್ತ ವ್ಯಾಧನಿಗಾಗ ವೀರಸ್ವರ್ಗ !
ನೇಹವಿಲ್ಲದ ನರಕ !
ಅವನೀಗ ನಕ್ಷತ್ರ !
ಉರಿಯುವ ಕೆಂಡ.
ತನ್ನ ತಾನೇ ಸುಟ್ಟು -
ಕೊಳ್ಳುತಿದ್ದಾನೆ ಸದಾ :
ಕಿಡಿ ಕೆದರಿ
ಬೆಂಕಿ ಸುರಿಸಿ
ಕೊರಗಿ
ಕಡ್ಡಿ !

ತಿಂಗಳಿಗೊಮ್ಮೆ ವ್ಯಾಧನೊಂದಿಗೆ
ಡಯಾನಾ ಮಿಲನ.

ಅವನೋ -
ಬೆಂಕಿಯ ಪಿಂಡ,
ಧಗಧಗ !
ಮುಟ್ಟಲಾಗದ ಬಿಸಿ !
ಕಣ್ಣಲ್ಲೆ ಕಾಮಸುಖ !

ಬಂದ ದಾರಿಗೆ ಇಲ್ಲ
ಯಾವುದೇ ಸುಂಕ !
ಚಿರದು:ಖಿನಿ ಡಯಾನಾ !
- ಅಣ್ಣನ ವರ !

ವಿಶ್ಲೇಷಣೆ :

ಡಯಾನಾ ಅದ್ಭುತ ಸುಂದರಿ.ರೋಮನ್ ಪುರಾಣ ಕತೆಗಳಲ್ಲಿ ಬರುವ ದೇವತೆ.ಈಕೆಯನ್ನು ಚಂದ್ರ (goddess of moon) ಮತ್ತು ಬೇಟೆಯ ರಾಣಿಯಾಗಿಯೂ ಬಿಂಬಿಸುವ ದಂತ ಕಥೆಗಳಿವೆ.ಅಪೋಲೋ ಇವಳ ಅವಳಿ ಸೋದರ. ತನ್ನ ತಂಗಿ ವ್ಯಾಧನನ್ನು ಪ್ರೀತಿಸುವುದನ್ನು ಇಷ್ಟಪಡದೆ ,ಬೇಟೆಯ ನೆಪದಲ್ಲಿ ಅವಳಿಂದಲೇ ಅವಳ ಇನಿಯ ಸಾಯುವಂತೆ ಮಾಡುತ್ತಾನೆ.ದುರಂತ ಪ್ರೇಮದ ಕತೆಯೇ ಈ ಕವನದ ಕಥಾವಸ್ತು.
ಸಂಜೆ ಕತ್ತಲುಗಳ ವರ್ಣನೆ ಪ್ರೇಮಿಗಳ ಹಿನ್ನೆಲೆಯಲ್ಲಿ ಬಹಳ ಸುಂದರವಾಗಿ ಮೂಡಿಬಂದಿದೆ.
ಆಗಸದಲ್ಲಿ ಡಯಾನಾ ಮೂಡಿ ಬರುವ ಪರಿ ಸುಂದರ.ವ್ಯಾಧನೊಂದಿಗಿನ ಮಿಲನ ,ನಂತರದ ಕೋಲಾಹಲ ,ಬೇಟೆಯಾಡುವ ಸನ್ನಿವೇಶ ಎಲ್ಲವನ್ನೂ ಆಯ್ದ ಪದಗಳೊಂದಿಗೆ ಚಿಕ್ಕ ಚಿಕ್ಕ ಸಾಲುಗಳಲ್ಲಿ ಕಟ್ಟಿಕೊಟ್ಟಿರುವ ಪರಿ ಸೊಗಸಾಗಿದೆ.ಕವನದಲ್ಲಿ ಅವರ ಅಗಾಧ ಶಬ್ದ ಸಂಪತ್ತಿನ ಪರಿಚಯವೂ ಆಗುತ್ತದೆ. ಮುಕ್ತ ಛಂದದ ಕವನವಾದರೂ ಅಲ್ಲಲ್ಲಿ ಪ್ರಾಸದ ಸೌಂದರ್ಯವೂ ಗಮನ ಸೆಳೆಯುತ್ತದೆ.
ವ್ಯಾಧ ಕೆಂಪು ಸೂರ್ಯನಾಗಿ ಚಂದ್ರ ತಿಂಗಳಿಗೊಮ್ಮೆ ಮುಟ್ಟಲಾಗದೇ ಕೂಡಿ ಕಣ್ಣಲ್ಲೇ ಕಾಮಸುಖ ಪಡೆಯುವರೆಂದು ಕವನ ಅಂತ್ಯಗೊಳ್ಳುತ್ತದೆ.ಕೊನೆಯ ಸಾಲಲ್ಲಿ ಚಿರದುಃಖಿನಿ ಡಯಾನಾ ಅಣ್ಣನ ವರ ಎಂದು ಕವಿ ಹೃದಯ ಡಯಾನಾಳಿಗಾಗಿ ಮರುಗಿದೆ.

ಕವನ - ಈ ಜನ - ರವೀಂದ್ರಕುಮಾರ್ ಎಲ್.ವಿ

ಇವರೆಲ್ಲ ಸತ್ತ ಜನ,
ಸತ್ತೂ ಸಾಯದ ಜನ : ಚರ್ಮ ಸುಲಿದು,
ಹೊಟ್ಟು, ತುಂಬಿ
ಹೊಲಿದ ಜನ.

ಹೋಗಿ ಎಂದರು ಹೋಗಲೊಲ್ಲದೆ
ನಿಂತ ಜನ, ಕುಂತ ಜನ, ಕಂತಿದ ಜನ,
ಎಂಥೆಂಥ ಜನ !

ಹಾಲು ಹಗಲುಕ್ಕಿದಾಗ ನಡುಮನೆಯ ಕಿರುಗುಡುವ ಮುರುಕು ಬಾಗಿಲ ಹಿಂದೆ ನೆರಳಾಟದಲ್ಲವಿತು ನರಳಾಡುವ ಜನ.
ಕದ ತಳ್ಳಿ ಕಸ ಹೊಡೆದರೆ ಸದ್ದಿಲದೆ ಎದ್ದು ಬಿದ್ದು ದೇವರ ಸಂಪುಟದಲ್ಲೇ
ಸೇರುವ ಜನ !

ಮರದೆಲೆಯ ಮರ್ಮರಕೆ ದನಿಗೂಡಿಸಿ ಗೋಳು ಕರೆದು ಗಾಳಿಗುದುರೆಯೇರಿ ಸಾಗಿ, ಹಾರಿ ಹೊಳೆಗೆ ಬಿದ್ದು ಮುಳುಗಿ
ನಿದ್ರಿಸುವ ಆಸಾಮಿಗಳಿವರು -
ಶುದ್ಧ ತರಲೆ ಜನ !

ಕಾಡು ಮೇಡಲೆಯುತ್ತ, ಮುಗಿಲೆತ್ತರಕೆ ಜಿಗಿದು, ಗಿರಿಶಿಖರದಿಂದ ಭೋ -
ರಿಡುವ ಭಂಡ ಜನ !

ಸತ್ತರೂ ಸಾಯದಿರುವ ಹಠಮಾರಿ ಜನ !
ಕಾಸು ಕೊಟ್ಟರು ಬಿಟ್ಟು
ಹೊಗದ ಜನ !

ಬಿಸಿಲಲ್ಲಿ ತೂರಿ ಬಂದು, ಮಳೆಯಲ್ಲಿ ಹನಿಹನಿ ಜಿನುಗಿ,
ಮರಮರ ಎಲೆಎಲೆಯಿಂದ ತೊಟಾತೊಟ್ಟಿಕ್ಕುವ ಜನ, ಕುಟುಕುವ ಜನ, ಮರ -
ಕುಟಿಗ ಜನ.

ಮಿಣುಕು ಹುಳುವನ್ನೇ ಹಣೆಗೆ ಅಂಟಿಸಿಕೊಂಡು ಬೆಳಗುವ ಜನ, ಮೊಳಗುವ ಜನ
ಸತ್ತರೂ ಸಾಯದೇ
ಝೂಂಡ ಹೂಡಿದ ಜನ.

ಕವನ - ಬವಿಯ ತಾಪ - ನರಸಿಂಹ ಮೂರ್ತಿ ಜಿ.ಎನ್

ಆದಿಯಲ್ಲೆಲ್ಲೆಲ್ಲು ಶೂನ್ಯ, ನಿರಾಮಯ : -
ಗುಮ್ ಗಾನ, ಏಕತಾನ -
ತುದಿ ಮೊದಲು ಇರದಂಥ ಕಾಲಮಾನ.
ಅಗೊ ! ಭೀಕರ ಸ್ಫೋಟ !
ಬಿಗ್ ಬ್ಯಾಂಗು - ಮಹಾ ಬಾಜಣೆ !

ಇಲ್ಲದೊಡಲೊಳಗಿಂದ ಹಟ್ಟಿದ ಮಹಾಪೂರ :
ಬೆಳಕ ಬಾಣಲೆಯಲ್ಲಿ
ಹುರಿದ ಕೆಂಡ, ಬ್ರಹ್ಮಾಂಡ.

ಥಳಗುಡುವ ನಕ್ಷತ್ರಲೋಕ, ಹಾಲ ಹೊಳೆ,
ಹಿಗ್ಗಿ ಕುಗ್ಗುವ ಲೀಲೆ, ಡಬ್ ಲಪ್ ಸ್ಪಂದನ,
ಮದುದ್ದಗಲಕ್ಕು ಪೊರಕೆ ಬಾಲವ ಬೀಸಿ
ಅಲೆವ ರಾಕ್ಷಸಕೋಟಿ, ಕೊಳ್ಳಿದೆವ್ವ.
ಈ ಎಲ್ಲ ಗೊಂದಲದ ನಟ್ಟನಡುವಲ್ಲೇ
ಒಪ್ಪ ಓರಣ - ಹುಟ್ಟು-ಸಾವಿಗೆ ಸಜ್ಜು.

ಬೆಳಕಿನಂಗಳದಲ್ಲಿ ಒಂದು ಪುಟ್ಟರಿಲು.
ಜುಜುಬಿ, ನಿಜ. ಆದರೂ -
ಮಾರ್ತಾಂಡ, ಚಂಡಪ್ರಚಂಡ !
ತೊಳತೊಳಗಿ ಬೇಸತ್ತು ಬಸವಳಿದ ನೇಸರನ
ಮೈ ಮುರಿದು ಸಿಡಿಸಿಡಿದು ತಿರುತಿರುಗಿ ದುಂಡಾಗಿ
ಹೊಡೆದುವು ಗಿರಕಿ : ಆಯ್ತು ಸೌರವ್ಯೂಹ :
ನಡುವೆ ಜಗಜಗ ಬೆಂಕಿ,
ಸುತ್ತ ತಣ್ಣನೆ ಮೈಯ ರುದ್ರಾಕ್ಷಿಗಳ ಮಾಲೆ,
ಬುವಿಯ ಚೆಲುವೇ ಚೆಲುವು !
ಅವಳ ಮುಖಕಮಲಕ್ಕೆ ಚಂದ್ರನೇ ಕನ್ನಡಿ.

ಸೃಷ್ಟಿಕರ್ತ ಪರಬೊಮ್ಮ, ಧ್ಯಾನಮಗ್ನ,
ಕಣ್ಣೆರೆದು ನೋಡಿದ -
ಇದೇನೀ ಕೌತುಕ !
ಆ ಹೇಗಾಯಿತು ಇದೆಲ್ಲ ?
ನಾನೆ ನೆನಸಿರಲಿಲ್ಲ !

'ಇರಲಿ, ಮಾಡುತ್ತೇನೆ ಈಗೊಂದು ವೈಖರಿ -
ಬೇರಾವ ಲೋಕದಲು ಇಲ್ಲದ ಪರಿ !!

ಧರಣಿ ದೇವಿಯ ಮೈಯ ಮೃತ್ತಿಕೆಯೆ ಸಾಮಗ್ರಿ.
ಸೇರಿತು ಒಳಗೆ ಗಾಳಿ –
ದೇವರೂಡಿದ ಉಸಿರು.
ವಿಶ್ವಾತ್ಮದೊಳಬೆಂಕಿ, ಬಸಿದ ನೀರು.
ಬಯಲೆ ತಳೆದಾಕಾರ ಆಯ್ಕೆಗೆ ಜೀವ ಝರಿ !
ಕೊಳೆತ ಮಣ್ಣಿನ ಒಳಗೆ ತೊಳಗು ಹಣತೆ :
ಪಾಚಿ, ಹಾವಸೆ, ಬಳ್ಳಿ,
ಹುಲ್ಲು ಗಿಡ ಮರ ಪೊದೆ,
ಹೂ ಹಣ್ಣು ಮೃಗ ಪಕ್ಷಿ
ಮೀನು ಮೊಸಳೆ -
ದೈತ್ಯ ದೇಹಿಯ ಸೊಕ್ಕು, ಸೂಕ್ಷ್ಮಜೀವಿಯ ಬಿಕ್ಕು,
ಎಂಥ ಚೋದ್ಯ ಇದೀಗ !

ಬುವಿಯೆ ಬಸಿರು !
ಜೀವವಿಲ್ಲದ ಮಣ್ಣು ಈಗ ಹೆಣ್ಣು
ಅಗಣಿತ ಗಣ ಸಂತಾನ !
ಮನದಲ್ಲೆ ನಸುನಕ್ಕ ಪರಬೊಮ್ಮ :
'ಭಲೇ ! ಭೂಮಿ ದೇವಿ !
ಏರ್ಪಡಿಸಬೇಕೀಗ ನಿನಗೆ ರಕ್ಷೆ :
ನೇಸರಿನ ಕಿರಣಕ್ಕೆ ಕಮರದ ವ್ಯವಸ್ಥೆ' -
ಗಾಳಿ ಮಳೆ ತಂಪು,
ಅಗ್ನ್ಯಸ್ತ್ರ ತಡೆಯಲಿಕೆ ಓಜೋನಿನ ರಗ್ಗು !
ಗುರುತ್ವಾಕರ್ಷಣೆಯೇ
ಎಲ್ಲ ಜೀವಕು ರಜ್ಜು !

ಮತ್ತೆ ಚಿಂತಿಸಿದ, ಸೃಷ್ಟಿಕರ್ತ :
ಈ ಮಹಾತೋಟಕ್ಕೆ ಬೇಕೊಬ್ಬ ಮೇಟಿ.
ಹೇ ! ಪ್ರೆಸ್ಟೋ ! ಪವಾಡ ! –
ಬಂದನಿಗೋ ಮಾನವ !
ಬಾಲವಿಲ್ಲದ ಮಂಗ ! -
ವಾನರ !
ಈ ನರ !
ಭೂಮಿಯಂಗಳದಲ್ಲಿ ಮೈವೆತ್ತ ಸತ್ತ್ವ.

ಬಳಿ ಕರೆದ ಪರಬೊಮ್ಮ :
'ಬಾ ಮಗೂ ! ಕೂರು !
ಈ ಜೀವ, ಸಂಪತ್ತು -

ಎಲ್ಲ ನಿನ್ನದು ಈಗ.
ಬದುಕು, ಬದುಕಿಸು, ಒಲಿದು ರಕ್ಷಿಸು ಎಲ್ಲ ಜೀವರಾಶಿಯನ್ನ.
ನೆನಪಿರಲಿ ನಾನೀಗ ಬೋಧಿಸುವ ಮಂತ್ರ -
ಬಲು ಸುಲಭ :
'ದ ! ದ ! ದ !'
ಮೂರು ಸಾರಿ "ದ" !

ದೇವರಂತರ್ಧಾನ.
ಅವನ ಹಿಂದೆಯೆ ದಟ್ಟ ಕಪ್ಪು ಮೋಡ :
ದ ! ದ ! ದ ! ಮಾರ್ಮೊಳಗು !
ಏನಿದೀ ತ್ರಿವಿಧ 'ದ' ?
ಮಿಂಚು ಬೀಸಿತು ಚಾಟಿ.
ಮಳೆಗರೆಯಿತು :
ದ ! ದ! ದ !

'ದ' -
ದಯಾನಂತನಾಗು !
ಸಕಲ ಜೀವಿಗಳನ್ನು ಸಂರಕ್ಷಿಸು !
ರಾಕ್ಷಸನೆ ಆಗದಿರು !

ಎರಡನೆಯದೂ 'ದ' -
ದಮಿಸು, ನಿಗ್ರಹಿಸು ಇಂದ್ರಿಯವ :
ಭೋಗಲಾಲಸೆ ಬೇಡ ದೇವತೆಗಳಂತೆ !
ಮತ್ತೆ ಮೂರನೆ ಬಾರಿ ಉಚ್ಚರಿಸಿದ್ದೂ 'ದ' -
'ದತ್ತ' ಇದರ ಅರ್ಥ :
ದಾನ ಮಾಡು, ಆಸೆ ಬಿಡು !
ಬದುಕು, ಬದುಕಿಸು, ಹೋಗು ! ನಿಡಿದು ಬಾಳು !

ಮಳೆ ಕಳೆದು ನೆಲ ತೊಳೆದು
ಬಟ್ಟ ಬಯಲಿಲ್ಲ ಬೆಳ್ಳಿ ಬೆಳಕು.
ಪ್ರಕೃತಿ ಬಂಗಾರ !
ಎಂಥ ಲೋಕ !
ದೇವ ಕರುಣಾಮಯ
ಮನುಜನಿಗೆ ವಿಸ್ಮಯ :
ಸುತ್ತೆಲ್ಲ ಹಬ್ಬಿರುವ ಹಸುರು ಕಾನು,
ತೊರೆ ಬಾನು ಸಿರಿ ಸುಗ್ಗಿ
ಹಿಗ್ಗು ಮೊಗ್ಗು.

ಆದರಾಕ್ಷಣದಲ್ಲಿ ಮಾನವನ ಮನದಲ್ಲಿ ಮೊಳೆತಿತ್ತು ಮಹದಾಶೆ -
ಸುಳಿಯಿತಾಶಾಪಾಶ !

ದೇವರಾಣತಿ ಮರೆತ ಮನುಜ.
ದೇವರೆಲ್ಲಿದ್ದಾನೆ ?
ಇಲ್ಲಿ ? ಇಲ್ಲಿ ? ಇಲ್ಲಿ ?
ತಾನೆ ದೇವರು : ಒಡೆಯ !
ಎಲ್ಲ ಅವತಾರವೂ
ತನ್ನದೇ, ನಿಶ್ಚಯ ! -
ಮತ್ಸ್ಯನಾಗಿ ಕಬಳಿಸಿದ.
ಕೂರ್ಮನಾಗಿಯು ಹೊತ್ತ ಹೊನ್ನ ಬೆಟ್ಟವನ್ನ !
ನರಸಿಂಹನೂ ಆಗಿ ನೆಲವನ್ನೆ ಬಗೆದ !
ಈಡಿಪಸ್ಸನ ಹಾಗೆ ತಾಯಿಯನೆ ಭೋಗಿಸಿದ !
ವಾಮನನ ತ್ರಿವಿಕ್ರಮನಾದ :
ನೆಲ ಬಾನು ಅಳೆದ, ಆಳಿದ !
ಮೂರನೆಯ ಪಾದಕ್ಕೆ ತಾವೆಲ್ಲಿ ? ಯೋಚಿಸಿದ -

ಜೀವಕೋಟಿಯ ತುಳಿದ ! ಮಾರ್ಮಲೆದ !
ಪರಶುರಾಮನ ಕೊಡಲಿಯೆ ಕಾಡನೆ ಕಡಿದ !
ತೂಗು ತಕ್ಕಡಿ ಮೇಲೆ ಕುಣಿದಾಡಿದ !
ಬಲರಾಮನ ನೇಗಿಲೂರಿ ಉತ್ತು ಬಿತ್ತಿದ -
ಮೃತ್ಯುಬೀಜವನ್ನ !
ಹೊಡೆದ ರಾಮನ ಬಾಣ :
ಓಜೋನ್ ರಗ್ಗೊಳಗೆಲ್ಲ
ತೂತು ಕೊರೆದ !
ಇದ್ದ ಬದ್ದದ್ದೆಲ್ಲ ಪಕಪಕನೆ ಕಬಳಿಸಿದ !
ತಿಂದೆಸೆದ ಕಸಗುಪ್ಪೆ ! ಆಗಸಕು ಹಾರಿಸಿದ !
ಹೊಗೆ ಬಿಟ್ಟ -
ಹರಿಯಿಸಿದ ಎಲ್ಲೆಲ್ಲು ನಂಜಿನ ಹೊಳೆ !
ಕನಲಿತು ಇಡೀ ವಿಶ್ವ,
ಬಾರಿಸಿತು ಸಿಡಿಲುಂಡೆ :
ಧೋ ! ಧೋ ! ಧೋ ! ಅಗ್ನಿವರ್ಷ !
ಹಿಮ ಕರಗಿ ಜಲರಾಶಿ ಪ್ರಳಯನಾಟ್ಯ !

ಇಡೀ ಬ್ರಹ್ಮಾಂಡದಲ್ಲಿ ಯಾವುದೋ ಮೂಲೆಯಲಿ
ಬುವಿಯ ಸಿರಿಮಡಿಲಲ್ಲಿ ಜರುಗಿದ ಪವಾಡ ಹೀಗೆ
ಕೊನೆಗೊಳ್ಳಬೇಕೆ ?
ಆಗದಾಗದು !
ಮುಳಿದು ನಿಂದನದೊ ಪರಬೊಮ್ಮ !
'ಮರಿಯಲೇಬೇಕೀಗ ಮಾನವನ ಹಮ್ಮುಬಿಮ್ಮ !'

ಕವನ - ಸ್ವವಿಚಾರ - ನರಸಿಂಹ ಮೂರ್ತಿ ಎಮ್.ಎಸ್

ಸ್ವವಿಚಾರ

ನಾನೊಬ್ಬ ಅಂಕಣಕಾರ,
ಹುಟ್ಟುತ್ತಲೇ ಸಾಯುವಂಥ ಲೇಖನಗಳ ಬರಹಗಾರ.
ನನಗಿಲ್ಲವೆ ಇಲ್ಲವಂತೆ ಸಾಹಿತ್ಯದ ಅಧಿಕಾರ.
ನಿಜ ಸ್ವಾಮಿ, ನನಗಿಲ್ಲ ಖಂಡಿತ ಆ ಬಡಿವಾರ.
ಎದೆ ತುಂಬಿ ತಂದಿರುವ ತುಂಬೆ ಹೂಗಳ ಹಾರ.

ಶಿವನಿಗೆ ಪ್ರಿಯ

ತುಂಬೆ ಹೂವಿನ ಚೆಲುವು
ನಿಂಬೆಯಾ ಬನದ ಸಿರಿ
ಅಂಬೆಗಾಲಿನ ಕಂದ
ಶಿವನಿಗೂ ಚಂದ.

ಇಬ್ಬಂದಿ

ದ್ರಾಕ್ಷಿ ಎಂದಿತು ಹುಣಿಸೆಗೆ -
'ಮುಪ್ಪಾದರು ನಿನ್ನ ಚಾಳಿ ನೀನು ಬಿಡವೊಲ್ಲೆ.'
ಉತ್ತರಿಸಿತು ಅದಕೆ ಹುಣಿಸೆ-
ನನ್ನದೊಂದೇ ನಿಷ್ಠೆ, ನಿನ್ನದೋ, ಇಬ್ಬಂದಿ :
ಇತ್ತ ಹುಳಿಯೂ ಅಲ್ಲ, ಅತ್ತ ಸಿಹಿಯಲ್ಲ.

ಗಂಡಹೆಂಡಿರು

ಗಂಡಹೆಂಡಿರು ರಥದ ಚಕ್ರಗಳು ಇದ್ದಂತೆ,
ಗಾಡಿ ಎಳೆಯುವ ಎರಡು ಎತ್ತುಗಳ ಹಾಗೆ.
ಅದಕ್ಕೇ ಇರಬೇಕು ಅವರೆಂದೂ ಸಂಧಿಸರು;
ಪಕ್ಕವೇ ಇದ್ದರೂ ದೂರದೂರ.

ವಿಚಿತ್ರ

ನಾ ಗೆದ್ದೆ, ನೀ ಸೋತೆ, ನೀ ಗೆದ್ದೆ, ನಾ ಸೋತೆ
ಎಂದಿಲ್ಲ ಈ ಪ್ರೇಮದಾಟದಲ್ಲಿ.
ಒಟ್ಟಿಗಿಬ್ಬರ ಗೆಲುವು; ಇಲ್ಲ, ಇಬ್ಬರ ಸೋಲು.
ವಿಚಿತ್ರ ! ಅಲ್ವೇನೇ, ನಾಗವೇಣಿ?

ಪ್ರೇಮ ಸೇತು
ನಾವಿಬ್ಬರು ಸಮಾಂತರ;
ಬರಲಾರೆವು ಹತ್ತಿರ ಹತ್ತಿರ.
ಹೀಗಿದ್ದರು ನಮ್ಮಿಬ್ಬರ
ನಡುವೆ ಬಂದರೆ ಕಂದ
ಬದುಕೆಲ್ಲ ಆನಂದ.

ಚಿಂತೆ-ಪ್ರೀತಿ

ಚಿಂತೆ ಹತ್ತಿಸಿಕೊಂಡ ನತದೃಷ್ಟ ಮನುಜನಿಗೆ
ಚಿತೆಯೇ ಗತಿಯಂತೆ!
ಪ್ರೀತಿಸಿದವನಿಗೋ? ಹಾಗಲ್ಲ;
ಪ್ರಣಯದಿಂದಲೆ ಪ್ರಣವ.

ಕವನ - ಆತ್ಮಹತ್ಯೆ, ರಾಜಕಾರಣಿ - ವೆಂಕಟೇಶ್ ಕೆ.ಆರ್ (ಮನು)

ಆತ್ಮಹತ್ಯೆ

ನಲ್ಲೆ,
ಆತ್ಮಹತ್ಯೆ ಮಹಾಪಾಪ, ನಾ ಬಲ್ಲೆ. ಆದರೆ
ಒಮ್ಮೆಯಾದರು ನಿನ್ನ ಪ್ರೀತಿಯ ಕಡಲಲ್ಲಿ
ಮುಳುಗಿಹೋಗಲು ನನ್ನ
ಏಕೆ ಬಿಡಲೊಲ್ಲೆ?

ರಾಜಕಾರಣಿ

ಮಾತಾಡಲೇನೂ ಇಲ್ಲದಿದ್ದಾಗಲೂ ಮಾತಾಡಬಲ್ಲೆಯಾ?
ಮಾತಾಡಲಿದ್ದಾಗ ತೆಪ್ಪಗಿರಬಲ್ಲೆಯಾ?
ಹಾಗಾದರೆ ಹೊಗು-ರಾಜಕಾರಣಿಯಾಗು!

ನಡು ವಯಸ್ಸು

ವ್ಯಕ್ತಿಯ ಬದುಕಿನಲ್ಲಿ 'ನಡು' ವಯಸ್ಸೇ ಶ್ರೇಷ್ಠ.
ಏಕೆನ್ನುತ್ತೀರಾ?
ಯೌವನ ಜಾರಿ ಮುನ್ನಡೆದ ಹಾಗೆಲ್ಲ
ಮೆದುಳು ಸಣ್ಣ, 'ನಡು' ದಪ್ಪ,

ಬದುಕಿಯೂ ಸತ್ತವ

ಅರುವತ್ತರಲ್ಲೊಬ್ಬ ತೀರಿಕೊಂಡಾಗ
ಒಬ್ಬರು ಹೀಗೆಂದರು -
'ಸತ್ತುಹೋದನೆ ಪಾಪ!'
ಇನ್ನೊಬ್ಬರು ಕೇಳಿದರು-
'ಅವನು ಇದುವರೆಗೂ
ಬದುಕಿದ್ದ ಅಂತೀರಾ?'

ಕವನ - ಮತದಾನ, ನಾಯಿ ಇದೆ ಎಚ್ಚರಿಕೆ - ಸಮ್ಮೋದ ವಾಡಪ್ಪಿ

ಮತದಾನ

'ನನಗೇ ಮತ ನೀಡಿ, ಯೋಗ್ಯ ಅಭ್ಯರ್ಥಿಗೇ ಮತ ನೀಡಿ'
ಅಂತೀರಾ ಅಭ್ಯರ್ಥಿಗಳೆ ?
ನನಗಿರೋದೊಂದೇ ಮತ,
ಇಬ್ಬರಿಗೂ ಕೊಡೋದು ಹೇಗೆ ಸಾಧ್ಯ?

ಮೀಸಲಾತಿಯ ಫಲ

ಹಿಂದುಳಿದ ಜಾತಿಯ ಹುಡುಗನೊಬ್ಬ
ಲಾಠಿ ಏಟು ತಿಂದು ಮೂಳೆ ಮುರಿಸಿಕೊಂಡ -
ಮೀಸಲಾತಿ ವಿರುದ್ಧ ಚಳವಳಿಯ ದೆಸೆಯಿಂದ.
ಕೇಳಿದ ತಂದೆ, ಆತಂಕದಿಂದ- 'ಏನಾಯಿತೋ ಕಂದ?'
ಹೇಳಿದ ಹುಡುಗ-'ಯೋಚಿಸಬೇಡಪ್ಪ.
ಅಂಗವಿಕಲನೆಂದು ಕೆಲಸ ಗ್ಯಾರಂಟಿ!'

ನಾಯಿ ಇದೆ **!** ಎಚ್ಚರಿಕೆ **!**

ಸರಪಳಿ ಕಳಚಿಕೊಂಡು ಸೀಮೋಲ್ಲಂಘನ ಮಾಡಿ
ಬೀದಿಬೀದಿ ಅಲೆದು ಮನೆಗೆ ಹಿಂದಿರುಗಿದ ಟಾಮಿ
'ನಾಯಿ ಇದೆ! ಎಚ್ಚರಿಕೆ!' ಎಂಬ ಫಲಕವ ನೋಡಿ
ಡಂಗ್ ಆಗಿ, ಬಾಲ ಮುದುರಿ, ಥರಥರ ನಡುಗುತ್ತ
ಗೇಟಲ್ಲೇ ನಿಂತಿತು!

ಮಕ್ಕಳ ಪ್ರಶ್ನೆ **!**

ಮಕ್ಕಳು ಕೇಳೋ ಪ್ರಶ್ನೆಗಳಿಗೆ
ಉತ್ತರ ಹೇಳೋದು ಬಲು ಕಷ್ಟ,
ಇಲ್ಲಾಂತೀರಾ? ಹಾಗಾದ್ರೆ ಹೇಳಿ -
ಹಾವುರಾಣಿಯಾದರೆ ರಾಜ ಯಾರು?

ಬೊಜ್ಜೇಕೆ **?**

ದಿನಾ ಈಜಿದರೆ ಮೈ ಕರಗುತ್ತೆ
ಅಂತ ಹೇಳ್ತೇಡಿ ಡಾಕ್ಟ್ರೆ.
ಸದಾ ಈಜಾಡೋ ತಿಮಿಂಗಲಕ್ಕೆ
ಆಪಾಟಿ ಬೊಜ್ಜೇಕೆ?

ಕವನ - ಬೆಳ್ಳಿಗೆರೆ, ಹಣ-ತೃಪ್ತಿ - ಶ್ರೀಮತಿ ಶೀಲಾ ಅರಕಲಗೂಡು

ಬೆಳ್ಳಿ ಗೆರೆ

ತಲೆಯ ಕೂದಲಿನಲ್ಲಿ ಬೆಳ್ಳಿ ಗೆರ ಮೂಡಿದರೆ
ಕಾಡಿನೆಡೆಗೋಡುತಿದ್ದರಂದಿನಾ ಅರಸರ್ !
ಬೆಳ್ಳಿಗೆ ಕಪ್ಪು ಹಚ್ಚಿ ಬೆಳ್ಳಿಯರ ಬೆನ್ನಟ್ಟಿ
ನಿಲ್ಲದೆಯೆ ಓಡುವರು ಇಂದಿನಾ ಭೂಪರ್!

ಹಣ-ತೃಪ್ತಿ

ಹಣಕ್ಕಿಂತ ತೃಪ್ತಿ ಮೇಲು.
ಹಣವನ್ನು ನಿಮ್ಮಿಂದ ಕಸಿಯುವವರುಂಟು.
ತೃಪ್ತಿಯಲ್ಲಿ ಪಾಲು ಕೇ-
ಳುವರು ಎಲ್ಲುಂಟು ?

ಕೃತಿಚೌರ್ಯ

'ಇದು ನೋಡಿ : ರವಿವರ್ಮನ ಅದ್ಭುತ ಕಲಾಕೃತಿ,
ದಮಯಂತಿಯ ಸುಂದರ ಚಿತ್ರ.'
'ಅಬದ್ಧ ! ಅಯ್ಯೋ ಪಾಪಿ !
ನಮ್ಮ ಮನೆಯ ಕ್ಯಾಲೆಂಡರ
ಚಿತ್ರದ್ದೇ ಕಾಪಿ !'

ಮಾತು-ಮೌನ

ಮಾತಾಡಿ ಮೂರ್ಖತೆಯ
ಸಾಬೀತುಪಡಿಸುವ ಬದಲು
ಮೌನ ತಳೆದು ಮೂರ್ಖನಂತೆ
ತೋರಿಸಿಕೊಳುವುದೆ ಮೇಲು.

ಯಶಸ್ವಿ ನಾಯಕ

ತನ್ನ ಅನುಚರರಂತೆ ತಾನು ಕೂಡ ಶತಮೂರ್ಖ
ಎನ್ನುವುದ ಅವರೆಂದೂ ಅರಿಯದಂತಚ್ಚರಿಕೆ
ವಹಿಸುವಂಥವನೇ ಯಶಸ್ವಿ ನಾಯಕ.